"JANAPADA" Monthly - August 2016
"ಜನಪದ" ಮಾಸಿಕ – ಆಗಸ್ಟ್ 2016

Page No. -52
RNI No. KAR/KAN/2010/20676


REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26




ವಾರ್ಷಿಕ ಚಂದಾ ರೂ.25/-

# ಜನಪದ

ಆಗಸ್ಟ್ 2016



70ನೇ
ಸ್ವಾತಂತ್ರ್ಯೋತ್ಸವದ
ಶುಭಾಶಯಗಳು




ಮಾನ್ಯ ಮುಖ್ಯಮಂತ್ರಿ
ಶ್ರೀ ಸಿದ್ದರಾಮಯ್ಯ ಅವರು
ಕೋಟಿ ವೃಕ್ಷ
ಆಂದೋಲನಕ್ಕೆ
ಚಾಲನೆ ನೀಡಿದರು






ಭಾರತದ ಉಪರಾಷ್ಟ್ರಪತಿ ಶ್ರೀ ಹಮೀದ್ ಅನ್ಸಾರಿ ಅವರು ಮೈಸೂರಿನಲ್ಲಿ ಜೆ ಎಸ್ ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಉದ್ಘಾಟನೆ ಹಾಗೂ ಶೈಕ್ಷಣಿಕ ವಿಭಾಗದ ಕಟ್ಟಡ ಶಿಲಾನ್ಯಾಸವನ್ನು ನೆರವೇರಿಸಿದರು. ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲಾ , ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಸಚಿವರಾದ ಶ್ರೀ ಎಚ್ ಸಿ ಮಹದೇವಪ್ಪ, ಶ್ರೀ ಬಸವರಾಜ ರಾಯರೆಡ್ಡಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತರಿದ್ದರು.




ಸಂಪುಟ–59 • ಸಂಚಿಕೆ–5

ಆಗಸ್ಟ್ 2016

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ
ಬೆಂಗಳೂರು–560 001
Email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ
ಬೆಂಗಳೂರು–560 050

ಲೇಖಕರ ಅಭಿಪ್ರಾಯಗಳು, ಸರ್ಕಾರದ ಅಭಿಪ್ರಾಯಗಳಲ್ಲ



**08** ರಾಷ್ಟ್ರಪ್ರೇಮದ ವೀರಗೀತೆ ವಂದೇ ಮಾತರಂ
• ಪಿ. ಎಸ್. ಪರ್ವತಿ

## ಪುಟ ತೆರೆದಂತೆ...

**05** ಕನ್ನಡ ಕವಿಗಳು ಮತ್ತು ಭಾರತ ಸ್ವಾತಂತ್ರ್ಯೋದಯ
• ಡಾ॥ ಎಸ್. ನಂಜುಂಡಸ್ವಾಮಿ

**12** ಸ್ವಾತಂತ್ರ್ಯ ಮತ್ತು ಮಹಿಳಾ ಸಬಲೀಕರಣ
• ಲಕ್ಷ್ಮಣ ಕೊಡಸೆ

**15** ಜಲಿಯಾನ್ ವಾಲಾಬಾಗ್ ಹತ್ಯಾಕಾಂಡ
• ಎಂ. ಜಿ. ಆತ್ರೇಯ

**18** ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರ ಸಂದರ್ಶನ
• ಹಿಮಂತರಾಜು ಜಿ

**20** ಗಡಿಭಾಗದ ಪೆದ್ದೂರಿನಲ್ಲಿ ಜನಪದ ಸಂಭ್ರಮ
• ಸಿ. ಎ. ರಮೇಶ್

**24** ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿ ಸಂದರ್ಶನ
• ತುಕಾರಾಂ ಬಿ. ವಿ.

**26** ತೋಟಗಾರಿಕಾ ಪಿತಾಮಹ ಡಾ॥ ಎಂ. ಹೆಚ್. ಮರಿಗೌಡರು
• ವೇಮಗಲ್ ಸೋಮಶೇಖರ್

**30** ಕೃಷಿ ಪ್ರೋತ್ಸಾಹಿಸಲು ಗದ್ದೆಗಿಳಿದ ಕೃಷಿ ಸಚಿವರು
• ಕೆ. ರೋಹಿಣಿ

**32** ಅಶೋಕ ಶಾಸನ
• ಪ. ರಾಮಕೃಷ್ಣಶಾಸ್ತ್ರಿ

**34** ಗಾಂಧಿವಾದಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ; ಶ್ರೀ ರಂಗರಾಜು
• ಎಂ. ಎನ್. ಸುಂದರ್ ರಾಜ್

**36** ಇದು ಮಹಿಳಾ ಕಿಸಾನ್ ಮಹಾತ್ಮೆ
• ಶಿವಲಿಂಗ ಸಿದ್ನಾಳ್

**38** 2014 ಮತ್ತು 2015ರ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ

**40** ಶೌಚಾಲಯಕ್ಕಾಗಿ ಉಪವಾಸ
• ತುಕಾರಾಂ ಬಿ. ವಿ.

**45** ವಿಜಯಪುರ ಭವ್ಯ ಸುಂದರ ಗೋರಿಗಳ ನಗರ
• ಬಿ. ಎಂ. ಚಂದ್ರಶೇಖರಯ್ಯ

**48** ಕಾರವಾರ ಬೀಚ್‌ನಲ್ಲಿ ಮರಳು ಕಲಾಕೃತಿ ಸಂಸ್ಕೃತಿ
 ನಾಗರಾಜ್ ಹರಪನಹಳ್ಳಿ

**42** ರಾಜ್ಯ ಪ್ರವಾಸ–ಕ್ರೀಡಾಲೋಕಕ್ಕೆ ಗರಿ ಸರ್ಫಿಂಗ್
ಬಿ. ಎ. ಖಾದರ್ ಶಾ



# ಓದುಗರಿಂದ...

ಜನಸಂಖ್ಯೆ ಕುರಿತಾಗಿನ ಮುಖಪುಟ ಲೇಖನ ಬಹಳ ಮಾಹಿತಿಗಳನ್ನು ತಿಳಿಸಿಕೊಟ್ಟಿದೆ. ಭಾರತದಲ್ಲೇ ಹೆಚ್ಚು ಯುವ ಜನತೆಯನ್ನು ಹೊಂದಿರುವ ದೇಶ ಎನ್ನುವ ಹೆಮ್ಮೆಯೊಂದಿಗೆ ಜನಸಂಖ್ಯೆಯ ಸಮಸ್ಯೆಗಳೂ ಹಲವಾರು. ಆದರೆ ಸಮಸ್ಯೆಗಳನ್ನು ನೀಗಿ ಯುವಶಕ್ತಿಯನ್ನು ಸಶಕ್ತವಾಗಿ ಬಳಸಿದರೆ ದೇಶದ ಆರ್ಥಿಕ ಸಂಪತ್ತು ಹೆಚ್ಚಿ ಪ್ರಗತಿಗೆ ಪೂರಕವಾಗುತ್ತದೆ. ಕೃಷಿ ಅಭಿಯಾನ ಕಾರ್ಯಕ್ರಮ ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವಂತಿದೆ.

– **ಅಬ್ದುಲ್ ನಬಿ,** ಸಿರಗುಪ್ಪ

ಜನಸಂಖ್ಯೆ ಮತ್ತು ಅಭಿವೃದ್ಧಿ ಬಗೆಗಿನ ಮುಖಪುಟ ಲೇಖನ ಬಹಳಷ್ಟು ಮಾಹಿತಿಯುಕ್ತವಾಗಿ ಮೂಡಿಬಂದಿದೆ. ಸಾಮಾಜಿಕ ಅಭಿವೃದ್ಧಿ ಯೋಜನೆಯ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬಗೆಗಿನ ಲೇಖನವೂ ಬಹಳ ಚೆನ್ನಾಗಿ ಬಂದಿದೆ. ಈ ಮಾಸಪತ್ರಿಕೆಯು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಲಭ್ಯವಿದ್ದು ಕಡಿಮೆ ಬೆಲೆಯ ಹೆಚ್ಚು ವಿಚಾರಗಳನ್ನೊಳಗೊಂಡ ಜನಪದವನ್ನು ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಓದಿ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಧನ್ಯವಾದಗಳು.

– **ಎಂ ಎಂ ಲೋಕೇಶ್**
ಮತ್ತಿಹಳ್ಳಿ, ತಿಪಟೂರು ತಾಲ್ಲೂಕು

**'ಜನಪದ' ಮಾಸಿಕ ಈಗ**
**www.kanaja.inನಲ್ಲಿ ಲಭ್ಯ**




**ಮಾಹಿತಿಪೂರ್ಣ ಲೇಖನ**

'ಕರ್ನಾಟಕದ ಕಸ್ತೂರ ಬಾ ಯಶೋಧರಮ್ಮಾ ದಾಸಪ್ಪ' ಅವರ ಲೇಖನ ತುಂಬಾ ಮಾಹಿತಿ ಪೂರ್ಣವಾಗಿತ್ತು. ಸಾತ್ವಿಕ ಮಹಿಳಾ ಹೋರಾಟಗಾರ್ತಿ, ನಿರ್ಗತಿಕ ಮಹಿಳೆಯರ ತಾಯಿಯಾಗಿ ಇತಿಹಾಸದಲ್ಲಿ ಚಿರಸ್ಥಾಯಿಯಾದ ತ್ಯಾಗಮೂರ್ತಿ, ಸ್ವತಃ ರಾಷ್ಟ್ರಪಿತ ಮಹಾತ್ಮಾಗಾಂಧಿ ಅವರಿಂದಲೇ ಆಶೀರ್ವಾದ ಪಡೆದುಕೊಂಡು ಜೀವನಪೂರ್ತಿ ಬಾಳಿ–ಬದುಕಿದ 'ಮಹಾತಾಯಿ' ಯ ಕುರಿತ ಲೇಖನ ಬರೆದು ಇವತ್ತಿನ ಯುವ ಜನಾಂಗಕ್ಕೆ ಪರಿಚಯಿಸಿದ ಲೇಖಕರಿಗೆ ಧನ್ಯವಾದಗಳು.. ಹಾಗೆಯೇ ಹೊತ್ತು ತಂದ 'ಜನಪದ'ಕ್ಕೂ ಕೂಡಾ.

–**ನೀಲೇಶ್ ಬೇನಾಳ,** ವಿಜಯಪುರ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಜನಸಂಖ್ಯೆ ಕುರಿತಾದ ಲೇಖನ ಎಚ್ಚರ ಮೂಡಿಸುವಂತಿದೆ. ಭಾರತದ ಜನಸಂಖ್ಯೆಗೆ ಕಡಿವಾಣ ಹಾಕದಿದ್ದರೆ ಮುಂದಿನ ಕೆಲವೇ ವರ್ಷಗಳಲ್ಲಿ ಭಾರತ ಅತಿ ಹೆಚ್ಚು ಜನಸಂಖ್ಯೆ ಇರುವ ರಾಷ್ಟ್ರವಾಗುವುದರಲ್ಲಿ ಸಂಶಯವಿಲ್ಲ. ಮಾಧ್ಯಮ ಲೋಕದ ಭಿನ್ನ ಪಯಣಿಗ ಸಾಯಿನಾಥ್ ಅವರ ಲೇಖನ ಬಹಳ ಸ್ವಾರಸ್ಯವಾಗಿದೆ. 'ನೀರೆಂಬ ನೀಲಿ ಚಿನ್ನ' ಮಹತ್ವಪೂರ್ಣ ಲೇಖನವೆನಿಸಿತು. ಕರ್ನಾಟಕದ ಕಸ್ತೂರಬಾ ಯಶೋಧರಮ್ಮ ದಾಸಪ್ಪ ವಿವರಗಳು ಚೆನ್ನಾಗಿ ಮೂಡಿಬಂದಿವೆ.

– **ಎ ಹೇಮಂತ್ ಕುಮಾರ್,**
ಬೆಂಗಳೂರು.

'ರಂಗಭೂಮಿಯ ಫಕೀರ' ನಟ ಫಕೀರಪ್ಪ ಅವರ ಪರಿಚಯ ಓದಿ ಬಹಳ ಹೆಮ್ಮೆಯಾಯಿತು. ನಮ್ಮ ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮದ ಪ್ರತಿಭಾವಂತ ನಟ ರಂಗಭೂಮಿಯ ಸೇವೆಯಲ್ಲಿ ತಮ್ಮ ಬದುಕನ್ನು ಸವೆಸಿದ್ದು ನಿಜಕ್ಕೂ ಸಾಧನೆಯೇ ಸರಿ. ಇವರಿಗೆ ಸಂದ ಪ್ರಶಸ್ತಿ ಪ್ರತಿಭೆಗೆ ಸಾಕ್ಷಿ.

ಹುಬ್ಬಳ್ಳಿಯ ಶಿಲ್ಪಕಲಾದೇಗುಲ ಬಗೆಗಿನ ಲೇಖನ ಸೊಗಸಾಗಿದೆ.

–**ಕೊತ್ತಲ ಮಹಾದೇವಪ್ಪ**
ಲಕ್ಷ್ಮೇಶ್ವರ

'ಮಾಧ್ಯಮ ಲೋಕದ ಭಿನ್ನ ಪಯಣಿಗ' ಉಳಿದೆಲ್ಲ ಮಾಧ್ಯಮ ಮಿತ್ರರಿಗೆ ಮಾರ್ಗದರ್ಶಕವಾಗಿತ್ತು. ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕಾರಂಗ ಪ್ರವೇಶಿಸಿ ತಮ್ಮ ಕ್ರಿಯಾಶೀಲ, ಸೃಜನಶೀಲ ವ್ಯಕ್ತಿತ್ವದಿಂದ ಹಳ್ಳಿಯ ಗ್ರಾಮೀಣ ಜಗತ್ತನ್ನು ವಿಶ್ವಕ್ಕೆ ಪರಿಚಯಿಸಿದ ಪಿ ಸಾಯಿನಾಥ್ ಅವರ ಪ್ರಾಮಾಣಿಕ ಪ್ರಯತ್ನ ಪ್ರಶಂಸನೀಯವಾದುದು.

– **ಬಸವರಾಜ ಹೂಗಾರ,**
ಹಿರೇಸಿಂಗನಗುತ್ತಿ

ಜನಪದಕ್ಕೆ ಚಂದಾ ಹಣವನ್ನು ಡಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಣಾ ಶಾಖೆ ವಿಭಾಗ
ವಾರ್ತಾಸೌಧ, 17, ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು–560 001



# ಕನ್ನಡ ಕವಿಗಳು ಮತ್ತು ಭಾರತ ಸ್ವಾತಂತ್ರ್ಯೋದಯ

▪ ಡಾ. ಎಸ್. ನಂಜುಂಡಸ್ವಾಮಿ



ಆಗಸ್ಟ್ 15, 1947 ರಂದು ನಮ್ಮ ದೇಶ ಪರಕೀಯ ದಾಸ್ಯದಿಂದ ಬಿಡುಗಡೆಯಾಗಿ ಸ್ವತಂತ್ರವಾಯಿತು. ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯೋದಯ ಕಾಲದಲ್ಲಿ ಜೀವಿಸಿದ್ದು, ಈ ಮಹತ್ತರ ಘಟನೆಗಳನ್ನು ಕಣ್ಣಾರೆ ಕಂಡ ನಮ್ಮ ಅನೇಕ ಕನ್ನಡ ಕವಿಗಳು ಈ ಘಟನೆಗಳನ್ನು ಕವನ ರೂಪದಲ್ಲಿ ರಚಿಸಿ ತಮ್ಮ ದೇಶಾಭಿಮಾನವನ್ನು ಮೆರೆದಿದ್ದಾರೆ. ಜೊತೆಗೆ ಭವಿಷ್ಯದಲ್ಲಿ ಕನಸಿನ ಭಾರತವನ್ನು ಕಟ್ಟುವುದರ ಬಗ್ಗೆ ತಮ್ಮ ಚಿಂತನೆಯನ್ನು ಹರಿಯ ಬಿಟ್ಟಿದ್ದಾರೆ.

ಮಹಾಕವಿ ಕುವೆಂಪು ಅವರು ನಿರ್ಭೀತ ಮನೋಭಾವನೆಯ ಚಿಂತಕರು, ಅಪ್ರತಿಮ ದೇಶಪ್ರೇಮಿಗಳು, ನಾಡು ನುಡಿಯ ಅಪ್ರತಿಮ ಅಭಿಮಾನಿಗಳು. ಸ್ವಾತಂತ್ರ್ಯ ಹೋರಾಟ, ಚಳವಳಿಗಳ ಬಗ್ಗೆ, ತದನಂತರ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಅವರು ಜನತೆಯನ್ನು ಹುರಿದುಂಬಿಸಿ ಬಡಿದೆಬ್ಬಿಸುವ, ಚಿಂತನೆಗೆ ದೂಡುವ ಗಟ್ಟಿಯಾದ ಸ್ಫೂರ್ತಿಯುತವಾದ ಕವನಗಳನ್ನು ರಚಿಸಿ ಭಾರತ ಮಾತೆಗೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಕನ್ನಡ, ಕರ್ನಾಟಕ ಇವೆರಡೂ ಕುವೆಂಪು ಅವರ ಆತ್ಮಶಕ್ತಿಗಳು. ಆದರೆ ಇವೆರಡೂ ಭರತಖಂಡದ ಅವಿಭಾಜ್ಯ ಅಂಗ ಎಂಬ ಪ್ರಜ್ಞೆ ಸದಾ ಕುವೆಂಪು ಅವರಲ್ಲಿದೆ. ಕರ್ನಾಟಕವನ್ನು ಅವರು **"ಭಾರತ ಜನನಿಯ ತನುಜಾತೆ"** ಎಂದೇ ಕರೆಯುತ್ತಾರೆ. **"ಭಾರತಾಂಬೆಯೆ ಜನಿಸಿ ನಿನ್ನೊಳು ಧನ್ಯನಾದೆನು ದೇವಿಯೇ, ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೇ"** ಎಂದು ಧನ್ಯತೆಯ ಭಾವದಿಂದ ಹೇಳಿದ್ದಾರೆ. ಭಾರತಮಾತೆಯ ಕೀರ್ತಿ ಪತಾಕೆ ಮುಗಿಲೆತ್ತರಕ್ಕೆ ಏರಲು ಕನ್ನಡ ಮಾತೆಯೂ ಕಾರಣ ಎಂಬುದು ಅವರ ಅಭಿಮತ. ಇಂತಹ ಅಪ್ರತಿಮ ದೇಶಪ್ರೇಮಿ, ನಾಡು ನುಡಿಯ ಪ್ರೇಮಿಯನ್ನು ಭಾರತೀಯ ಭಾಷಾ ಸಾಹಿತ್ಯದಲ್ಲಿ ಕಾಣುವುದು ದುರ್ಲಭ. ಒಂದು ಕಡೆ ಕುವೆಂಪು ಅವರೇ "ಸುಮಾರು 1925–26 ರಿಂದ 1947–48ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನ ಸಮುದ್ರ ಸಂಪೂರ್ಣವಾಗಿ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಅಲ್ಲೋಲ ಕಲ್ಲೋಲವಾದ ಮಹಾತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲಿತವಾಗಿ ಸಾವಿರಾರು ಕವನರಾಶಿ ಪುಂಜೀಭೂತವಾದವು ಸಾಹಿತ್ಯ ವೇಳೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ" ಎಂದು ಹೇಳಿದ್ದಾರೆ.

ಜನತೆಯನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಹುರಿದುಂಬಿಸಲು ಅವರು ವೀರರಸಭರಿತವಾದ" ಪಾಂಚಜನ್ಯ" ಎಂಬ ಒಂದು ಜನಪ್ರಿಯ ಕವನವನ್ನು ರಚಿಸಿದ್ದಾರೆ.

**ನಡೆಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ**
**ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆಮುಂದೆ**
**ಸೆರೆಯ ಹರಿ, ಅರಿಯನಿರಿ,**
**ಹುಟ್ಟಳಿಸು ಹುಡಿಯಲ್ಲಿ**



**ನಾನಳಿವೆ, ನೀನಳಿವೆ**
**ನಮ್ಮೆಲುಬುಗಳ ಮೇಲೆ**
**ಮೂಡುವುದು ಮೂಡುವುದು**
**ನವಭಾರತದ ಲೀಲೆ**

**ಮುಂದೆಯದು ತೋರುವುದು**
**ಬಿಡುಗಡೆಯ ಹಬ್ಬದಲಿ**

**ಭರತ ಖಂಡದ ಹಿತವೆ**
**ನನ್ನ ಹಿತ ಎಂದು,**
**ಭರತಮಾತೆಯ ಮತವೆ**
**ನನ್ನ ಮತ ಎಂದು,**
**ಭಾರತಾಂಬೆಯ ಸುತರೆ**
**ಸೋದರರು ಎಂದು**
**ಭಾರತಾಂಬೆಯ ಮುಕ್ತಿ**
**ಮುಕ್ತಿ ನನಗೆಂದು**

ಈ ಕವನವು ನಮ್ಮ ಬದುಕಿನ ಹೋರಾಟಕ್ಕೂ ಕೂಡಾ ಸ್ಫೂರ್ತಿದಾಯಕವಾಗಬಲ್ಲದು. ಕುವೆಂಪು ಅವರು ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ **"ಸ್ವಾತಂತ್ರ್ಯೋದಯ ಮಹಾಪ್ರಗಾಥ"** ಎಂಬ ದೊಡ್ಡ ಪ್ರಗಾಥವನ್ನು ರಚಿಸಿದರು. ಇದು ಕುವೆಂಪು ಅವರ ಭವ್ಯ ಬೃಹತ್ ಭಾರತದ ಕಲ್ಪನೆಗೆ ದ್ಯೋತಕವಾಗಿದೆ. ಜೊತೆಗೆ ಕುವೆಂಪು ಅವರ ರಾಷ್ಟ್ರ ಪ್ರಜ್ಞೆಗೆ ಸಾಕ್ಷಿಯಾಗಿದೆ. ನಮ್ಮ ಇಂದಿನ ತರುಣರು, ರಾಜಕೀಯ ಪಟುಗಳು, ರಾಜಕಾರಣಿಗಳು, ದೇಶಪ್ರೇಮಿಗಳು ಎಲ್ಲರೂ ಈ ಪ್ರಗಾಥವನ್ನು ಓದಲೇಬೇಕು. ಸುಮಾರು 350 ಸಾಲುಗಳ ಈ ಪ್ರಗಾಥ ಕುವೆಂಪು ಅವರ ಕಾವ್ಯಶಕ್ತಿ, ವಿಶಾಲ ಮನೋಭಾವ, ರಾಷ್ಟ್ರೀಯತೆ, ವೈಚಾರಿಕತೆ, ಅವರು ಕಂಡ ಕನಸಿನ ಭಾರತ ಇವುಗಳನ್ನು ವಿವರವಾಗಿ ವರ್ಣಿಸುತ್ತದೆ.

**ಭರತ ಭೂಮಿ ನನ್ನ ತಾಯಿ**
**ನನ್ನ ಪೊರೆವ ತೊಟ್ಟಿಲು**
**ಜೀವನವನೆ ದೇವಿಗೆರೆವೆ**
**ಬಿಡುತಿ ಗುಡಿಯ ಕಟ್ಟಲು**

ಕವನದಲ್ಲಿ ಮಾತೃಭೂಮಿಯ ಪ್ರೇಮ ವ್ಯಕ್ತವಾಗುತ್ತದೆ

**ಓಂ ಭೂರ್ವ್ಯೋಮ ಸ್ವರ್ಲೋಕ ಲೋಕಾಂತರ ವಿಹಾರೆ,**
**ನಿಖಿಲ ಲೋಕ ಕವೀಂದ್ರ ಗಣ ಚಕಚಕಿತ ಹಾರೆ**

ಎಂದು ಆರಂಭವಾಗುವ ಈ ಮಹಾಪ್ರಗಾಥವು ಕುವೆಂಪು ಅವರು ಸ್ವಾತಂತ್ರ್ಯೋದಯ ದಿನದಂದು ಮಧ್ಯ ರಾತ್ರಿಯಲ್ಲಿ ಜಾಗೃತರಾಗಿದ್ದು, ರೇಡಿಯೋ ಮುಂದೆ ಕುಳಿತು ರಾಷ್ಟ್ರನಾಯಕರ ಭಾಷಣಗಳನ್ನು, ವ್ಯಾಖ್ಯಾನವನ್ನೂ ಗಮನವಿಟ್ಟು ಕೇಳಿದ್ದರು ಮತ್ತು ಆಗಸ್ಟ್ 15 ರಂದು ದೆಹಲಿಯಲ್ಲಿ ನಡೆದ ಧ್ವಜಾರೋಹಣದ ವಿವರಣೆಯನ್ನೂ ತದೇಕ ಚಿತ್ತದಿಂದ ಆಲಿಸಿದ್ದರು ಎಂಬುದರ ಸೂಚನೆಯನ್ನು ಕೊಡುತ್ತದೆ.

**ನನಸಾದುದೋ ಶತಮಾನದ**
**ಶತಶತ ಮನದಾ ಕನಸಿಂದು**
**ಸ್ವಾತಂತ್ರ್ಯದ ಸಂಗ್ರಾಮದಿ**
**ಗತಿಸಿದಮಿತ ಹುತ ಆತ್ಮರ**
**ಬಲಿದಾನಂ ಫಲಿಸಿತೋ ಇಂದು**
**ಓ ಎಳೆಯರೆ, ಓ ಮುದಿಯರೆ**
**ಓ ಗೆಳೆಯರೆ ಐತನ್ನಿ;**
**ಹೊಸ ಬಾಳಿಗೆ ಹೊಸ ನೋಂಪಿಯ**
**ಹೊಸ ಕಂಕಣವ ತನ್ನಿ;**

ಎಂದು ಹುತಾತ್ಮರನ್ನು ನೆನೆದು ಅವರ ಬಲಿದಾನ ಫಲಪೂರ್ಣವಾಗುವಂತೆ ಎಲ್ಲರೂ ಒಂದಾಗಬೇಕೆಂದು ಹೇಳುತ್ತಾರೆ.

**ಲೋಕ ಮಲಗಿದಂದು ನೀ ನಟ್ಟ ನಡೂ ರಾತ್ರಿ**
**ಎಚ್ಚರಾಂತೆ; ಅವಿಶ್ರಾಂತೆಯಾದೆ ಪುನರ್ ಯಾತ್ರಿ,**
**ಸರ್ವಕಾಲ ಸರ್ವದೇಶ ಸರ್ವ ಮೋಕ್ಷ ಮಂತ್ರೇ**
**ಅಸ್ವತಂತ್ರೆ ಸುಸ್ವತಂತ್ರೆಯಾದೆ ವಿಶ್ವತಂತ್ರೆ,**
**ಮನುಜಕುಲದ ಪರೋಗತಿಗೆ ಪೂಜ್ಯ ಅಧಿಷ್ಠಾತ್ರಿ**
**ಅಖಂಡಿತೇ ಸಪಂಡಿತೇ ನೀನೆ ಜಗದ್ ಧಾತ್ರೀ**

ಎಂದು ಭಾರತವು ಜಗತ್ತಿಗೇ ಮಾದರಿಯಾಗಿ ಮಾರ್ಗದರ್ಶಕವಾಗಿ ಮುನ್ನಡೆಯ ಬೇಕೆಂದು ಆಶಿಸುತ್ತಾರೆ. ಇಂದು ಅತಿಯಾಗಿರುವ ಜಾತೀಯತೆಯ ಭೂತವನ್ನು ಅಂದೇ ಗುರುತಿಸಿದ್ದ ಕುವೆಂಪು **"ಈ ಭೂತವ ಸಂಹರಿಸುವ ಸುರ ನೀತಿಯ ವ್ರತವಾಗಲಿ ಪಥವೊಂದೇ"** ಎಂದು ಹೇಳುತ್ತಾರೆ. ರಾಷ್ಟ್ರ ಧ್ವಜವನ್ನು ಕುರಿತು **"ಹೇ ತ್ರಿವರ್ಣ ಕೇತನ, ನೀನೆ ನಮ್ಮ ಚೇತನ, ಪ್ರೇಮ ಧೈರ್ಯ ಸತ್ಯ ಧರ್ಮ ಶಾಂತಿ ಚಿರನಿಕೇತನ"** ಎಂದು ವರ್ಣಿಸುತ್ತಾರೆ.

ಹಿರಿಯ ಚಿಂತಕ ಡಾ. ಡಿ.ವಿ.ಗುಂಡಪ್ಪನವರು (ಡಿ.ವಿ.ಜಿ.) ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಯ ಪ್ರಕಟಣೆ ಮತ್ತು ಬರಹಗಳ ಮೂಲಕ ಪಾಲ್ಗೊಂಡು ಜನರನ್ನು ಒಗ್ಗೂಡಿಸಿ ಸ್ವಾತಂತ್ರ್ಯ ಚಳವಳಿಯ ಕಡೆಗೆ ಸೆಳೆದವರು. ಜೊತೆಗೆ ಮೈಸೂರಿನಲ್ಲಿ ಸ್ವಾತಂತ್ರ್ಯಾನಂತರ ಜವಾಬ್ದಾರಿ ಸರ್ಕಾರ ರಚನೆಯ ಸ್ಥಾಪನೆಗೆ ಹೋರಾಡಿದವರು. ಡಿವಿಜಿ ಅವರೂ ತಮ್ಮ ಒಂದೆರಡು ಕವನಗಳಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಸ್ವತಂತ್ರ ಭಾರತದ ಬಗ್ಗೆ ತಮ್ಮ ಚಿಂತನೆಯನ್ನು ಹರಿಯ ಬಿಟ್ಟಿದ್ದಾರೆ.

ಡಿವಿಜಿ ಯವರು ತಮ್ಮ "ವೀರಗೀತೆ" ಎಂಬ ಕವನದಲ್ಲಿ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಜನತೆಯನ್ನು ಹುರಿದುಂಬಿಸಿದ್ದಾರೆ.

**ಬನ್ನಿರಿ ಧೀರರೆ, ಬನ್ನಿರಿ ಶೂರರೆ**
**ತನ್ನಿರಿ ಕೆಚ್ಚಿನ ಜೀವಗಳ**
**ಬನ್ನಿರಿ ನೆನೆಯದೆ ನೋವುಗಳ**
**ಬನ್ನಿರಿ ಗಣಿಸದೆ ಸಾವುಗಳ**
**ಬನ್ನಿರಿ ಗೆಳೆಯರೆ ತನ್ನಿರಿ ಮಾತೆಗೆ**
**ಬೀರದ ಸಾಸದ ಸೇವೆಗಳ**

**ಕತ್ತಿಯನರಿಯದ ನೆತ್ತರ ಸುರಿಯದ**
**ಸಾತ್ವಿಕ ಶೌರ್ಯದ ಕಾಳಗಕೆ**
**ಸತ್ಯದ ಸೇನೆಯ ಪಾಳೆಯಕೆ**
**ಆತುಮಬಲದೊಡ್ಡೋಲಗಕೆ**
**ಬನ್ನಿರಿ ಸೇರುವ ಬನ್ನವನರಿಯದೆ**
**ಧರುಮದ ದೇವತೆಯೂಳಿಗಕೆ**

ಮಧ್ಯ ರಾತ್ರಿಯಲ್ಲಿ ಸ್ವಾತಂತ್ರ ಪಡೆದ ಭಾರತಮಾತೆಯನ್ನು ಅವರು "ಜಯಭಾರತಿ" ಕವನದಲ್ಲಿ ಹಾಡಿ ಹೊಗಳಿದ್ದಾರೆ.

**ಜಗವೆಚ್ಚರುವ ಮುನ್ನ –ನಿಗಮ ಗೀತವ ಪಾಡಿ**
**ಅರಿವಿನೊಸಗಯನಿತ್ತ– ಗುರುವು ನೀನೆಲೆ ತಾಯೆ**
**ಜಯಭಾರತೀ ಜಯ ಜಯ॥**

ವಿ.ಕೃ. ಗೋಕಾಕರು "1857ರ ಕ್ರಾಂತಿ ವೀರರನ್ನು ನೆನೆದು" ಎಂಬ ಕವನದಲ್ಲಿ 1857ರ ಕ್ರಾಂತಿ ಸ್ವಾತಂತ್ರ್ಯ ಸಮರವೆಂದು ಗುರುತಿಸಿ ಈ ಸಮರದಲ್ಲಿ ಭಾಗವಹಿಸಿದ್ದ ಕನ್ನಡಿಗರನ್ನೂ ನೆನೆದಿದ್ದಾರೆ.

**ಸ್ವಾತಂತ್ರ್ಯದ ಸಮರಾಂಗಣದಲಿ ಎದೆರಕುತವ ಸುರಿಸಿದರಾರು?**
**ತೆರೆದೆಲ್ಲವ ಮಯಯ್ಯನೆ ದೀವಟಿಯೊಲು**
**ಬವರದೊಳುರಿಸಿದರಾರು?**
**ಜಯ ಜಯ ಜಯ ಜಯ ಭಾರತ ವೀರಾಗ್ರಣಿಗಳು ನಮಿಸಿದ ನೆಲಕೆ**
**ಜಯ ಜಯ ಮಂಗಳ ಅವರ ಬೆಳಕಿನಲಿ ಬೆಳೆಯುವ ಎಳೆಯರ ಥಲಕೆ!**

ಎಂದು ಹೇಳುತ್ತಾ

**ಕಿತ್ತೂರಿನ, ಝಾಂಸಿಯ ಸೌದಾಮಿನಿ, ಮುಂಡರಿಗೆಯ ಬಲಭೀಮ,**
**ರೋಹಿಲಖಂಡದ ರೋಹಿಣೀವಲ್ಲಭ, ನರಗುಂದದ ಕುಲಸೋಮ**
**ನಾಡಿನ ಪುಣ್ಯ ಸ್ಮೃತಿಗೆ ರಾಷ್ಟ್ರೋದ್ಧಾರಾರ್ಪಿತ ಹೋಮ;**

ಭಾರತಕ್ಕೆ ಸ್ವಾತಂತ್ರ್ಯ ದೊರೆದ ಘಟನೆಯನ್ನು ಗೋಕಾಕರು "ರಾಷ್ಟ್ರೋದಯ" ಎಂಬ ಕವನದಲ್ಲಿ ವಿವರಿಸಿದ್ದಾರೆ.

**ಆಯಿತು ರಾಷ್ಟ್ರೋದಯ, ತಂದಿತು ನಮಗಭಯ!**
**ಕ್ಷಿತಿಜದ ಮೇಲೆ ಹೊಳೆದೊಲು ಶುಕ್ರೋದಯ**
**ಪೌರ್ಣಿಮೆಗೆ ಪೂರ್ಣವಿಹ ಚಂದ್ರೋದಯ,**
**ಸುಗ್ಗಿಯ ಆಗಮನದ ಸೂರ್ಯೋದಯ**
**ಆಯಿತು ರಾಷ್ಟ್ರೋದಯ, ತಂದಿತು ನಮಗಭಯ**

ಎಂದು ಹೇಳಿ, ಅಂದು ಕಾಶ್ಮೀರವನ್ನು ಕಸಿಯಲು ಪಾಕಿಸ್ತಾನ ಮಾಡಿದ ಸಂಚು, ಬಿತ್ತಿದ ಜಾತೀಯತೆಯ ವಿಷ ಬೀಜವನ್ನು ಖಂಡಿಸಿ ನಾವೆಲ್ಲರೂ ಭಾರತೀಯರು ಎಂದು ಹೇಳಿದ್ದಾರೆ.

**ಕಾಶ್ಮೀರವ ನುಂಗಿರಲು ಹೊಂಚು ಹಾಕಿ**
**ನಲಿಯಿತು ಪಾಕೀಸ್ತಾನಿ ಪತಾಕಿ**
**ಜಾತಿಯ ಜಾಂಗಟೆ ಹತ್ತು ಸಲ ಬಡೆದು**
**ಬಿಟ್ಟೇನೆಂದಿತು ಭಾರತವನ್ನೊಡೆದು**
**ಅಯ್ಯೋಪಾಪ! ನೋಡೀ ವಿಶ್ವರೂಪ!**
**ಬೌದ್ಧ, ಜ್ಯೂ, ಕ್ರಿಸ್ತೀಯ,**
**ಸೀಖ, ಮುಸ್ಲಿಮ್, ಹಿಂದು;**
**ಎಲ್ಲ ಭಾರತೀಯ**
**ಇಂದು ಮುಂದು ಎಂದೂ!**

ಎಂದು ಭಾರತದ ಭಾವೈಕ್ಯತೆಯ ಮಂತ್ರವನ್ನು ಸಾರುತ್ತಾರೆ ದಿನಕರ ದೇಸಾಯಿ ಅವರು ಶಿಕ್ಷಣ ತಜ್ಞರು, ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀವಾದಿಗಳು. ಇವರು ಅನೇಕ ಚುಟುಕಗಳನ್ನು ಸ್ವಾತಂತ್ರ್ಯ ಚಳವಳಿಯ ಬಗ್ಗೆ, ಮಹಾತ್ಮಾ ಗಾಂಧೀಜಿಯವರ ವ್ಯಕ್ತಿತ್ವ, ಶಕ್ತಿ, ನೇತೃತ್ವ, ಸರಳತೆ ಮೊದಲಾದ ವಿಷಯಗಳ ಬಗ್ಗೆ ಹತ್ತಾರು ಆಕರ್ಷಣೀಯವಾದ ಚುಟುಕಗಳನ್ನು ಬರೆದಿದ್ದಾರೆ.

**ಬಂಧನದೊಳಗಿದ್ದರೂ ಉಗಿ ಮಹಾಶಕ್ತಿ**
**ಸ್ವೇಚ್ಛೆಯಿಂದೆದ್ದಾಗ ಮುಗಿಲೇರಿ ವೃಷ್ಟಿ**
**ಯಾವ ಸ್ಥಿತಿಯಲ್ಲಿದ್ದರೂ ಲೋಕೋಪಕಾರ**
**ರಾಷ್ಟ್ರಪಿತನಾಗಿದ್ದ ಉಗಿಯ ಅವತಾರ**

**ಬಾಪೂಜಿ, ನಿನ್ನ ಕೈಯೊಳಗಿದ್ದ ಕೋಲು**
**ಕೋಲ್ಮಿಂಚಿಗೂ ತರಿಸಬಹುದಲ್ವೆ ಸೋಲು**
**ಸಾಮ್ರಾಜ್ಯಶಾಹಿಗೂ ಕಲಿಸಿತ್ತು ಬುದ್ಧಿ**
**ಇದಕೆ ಕಾರಣ ನಿನ್ನ ಅಂತರಿಕ ಶುದ್ಧಿ**

ಗಾಂಧೀಜಿಯವರ ಹೋರಾಟಕ್ಕೆ ಮಣಿದು, ಭಾರತವನ್ನು ಬಿಟ್ಟು ಹೋದ ಬ್ರಿಟಿಷರ ವರ್ಣನೆ ಈ ಚುಟಕದಲ್ಲಿ ಸೊಗಸಾಗಿ ಮೂಡಿ ಬಂದಿದೆ

**ಬಾಪೂಜಿ ಬಿದ್ದು ಹೋದವು ನಿನ್ನ ಹಲ್ಲು**
**ಆದರೂ ತ್ರಿಭುವನಕೆ ಕೇಳಿಸಿತು ಸೊಲ್ಲು**
**ನಿನ್ನ ಮೈ ಕೃಶವಾದರೂ ಬಹಳ ಗಟ್ಟಿ**
**ನಿನಗಂಜಿ ಓಡಿದನು ಬಿಳಿ ಮೊಗದ ಸೆಟ್ಟಿ**

ಮೈಸೂರು ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿಯವರು, ಸ್ವಾತಂತ್ರ್ಯೋದಯದ ನಂತರ ಬಹುಶಃ 4ನೇ ಸ್ವಾತಂತ್ರ್ಯ ದಿನಾಚರಣೆಯ ದಿವಸವೇ ರಚಿಸಿರುವ ಒಂದು ಕವನದಲ್ಲಿ ಭಾರತದ ಶಾಂತಿಮಂತ್ರವನ್ನು ಅದು ಇಡೀ ವಿಶ್ವಕ್ಕೆ ನೀಡಿದ ಸಂದೇಶವನ್ನು **"15–8–1950"** ಎಂಬ ಕವನದಲ್ಲಿ ಹಿಡಿದಿಟ್ಟಿದ್ದಾರೆ. ಪ್ರಪಂಚದಲ್ಲಿ ಅರ್ಧಭಾಗದಷ್ಟು ರಾಷ್ಟ್ರಗಳು ಶಸ್ತ್ರಾಸ್ತ್ರ ಕ್ರಾಂತಿಯನ್ನೇ ನಂಬಿಕೊಂಡು ಹಿಂಸೆಯನ್ನೇ ಆಶ್ರಯಿಸಿ ಮುಗ್ಧ ಜನರ ಮಾರಣಹೋಮ ಮಾಡುತ್ತಾ, ದಾನವತೆಯ ಕಡೆಗೆ ಸಾಗುತ್ತಿರುವ ಈ ಸನ್ನಿವೇಶದಲ್ಲಿ, ಭಾರತವು ಬೆಳದಿಂಗಳಿನಂತೆ ತಂಪನ್ನೆರೆಯುವ ಸತ್ಯ ಅಹಿಂಸೆ ಮತ್ತು ಶಾಂತಿಯನ್ನೇ ನಂಬಿಕೊಂಡು, ಅಹಿಂಸೆಯಿಂದಲೇ ಸ್ವಾತಂತ್ರ್ಯ ಸಂಪಾದನೆ ಮಾಡಿ, ಇಡೀ ವಿಶ್ವಕ್ಕೇ ಶಾಂತಿಮಂತ್ರವನ್ನು ಪಸರಿಸುತ್ತಾ, ಏಷ್ಯಾ ಖಂಡದ ತಾಯಿಯಂತೆ ಮುಂದೆ ಸಾಗುತ್ತಿದೆ ಎಂಬ ವಿಷಯವನ್ನು ಭಾವಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ.

**ಈ ಧ್ವನಿಯೇ ಬೇರೆ; ಈ ನೋಟ ಚಂದ್ರನ ತೋಟ**
**ಇದರ ಕಣಿ ಬೇರೆ; ಇದು ತಾನೊಂದೆ ಸಾರುತಿದೆ**
**ಯುದ್ಧ ಕೂಡದೆಂದು, ಅತ್ತ ಅಸ್ತ್ರದ ನೋಟ**
**ಅರ್ಧ ಭೂಮಿಗೆ ಸದಾ ಸರಿಯೆಂದು ತೋರುತಿದೆ**
**ಕೊಲೆ ಮನೆ ಕಡುಗತ್ತಿ ಕುರಿಮರಿಯ ಕುಣಿದಾಟ**
**ಬೇಕು ಮಾನವನ ದಾನವತೆಗೀ ರಾತ್ರಿಯೂಟ!**
**ದೇವದೂತರು ದಿಕ್ಕು ತೋರಿದರು; ಶಾಂತಿಯಲಿ**
**ಧನ್ಯರ್ಷಿಗಳು ಕಡೆದ ಬ್ರಹ್ಮ ಜಿಜ್ಞಾಸೆಯಲಿ**
**ಧವಳ ಗಿರಿಯಂತೆ ಬೆಳಕಾದ ಸಿರಿಮೊಗವೆತ್ತಿ**
**ಏಷ್ಯದ ಹಿರಿಮಗಳು, ಭರತನ ಸಾಕು ತಾಯಿ**
**ಸಾರುತಿಹಳಿಂದು ಎತ್ತಿದ ಕತ್ತಿಗಳ ತಡೆದು**
**ಶಾಂತಿ ಮೂಡದು ರಕ್ತಪಾತದಲಿ, ಶಾಂತಿರಸ್ತು**

ಮುಂದುವರಿದ ಅವರು "ಈ ಧ್ವನಿಯೆ ಬೇರೆ, ಬಾಂಬಿಗೆ ಹೆದರಲಿಲ್ಲ, ಕತ್ತಿಯಲಿ ಕೆತ್ತಿದ ಸ್ವತಂತ್ರತೆಯನರಿಯದಿದು, ನೆತ್ತರಲಿ ಬರೆದ ನಾಗರಿಕತೆಯ ಕುರಿಯದಿದು; ಶಸ್ತ್ರವನು ನಂಬಿಶಾಂತಿಯ ಸೋಗ ಹಾಡದಿದು, ಈ ನಾಡು ಬೇರೆ, ಇದು ನಡೆವ ದಾರಿಯೇ ಬೇರೆ" ಎಂದು ಹೇಳಿರುವುದು, ಜಗತ್ತಿನ ಇಂದಿನ ಸನ್ನಿವೇಶ ಪರಿಸ್ಥಿತಿಗಳಿಗೆ ಕೆ.ಎಸ್.ನ. ಅವರ ಈ ಕವಿತೆ ಎಷ್ಟೊಂದು ಪ್ರಸ್ತುತವಾಗಿದೆ ಎಂಬುದು ವಿಶೇಷವಾಗಿ ಗಮನಿಸಬೇಕಾದ ಅಂಶ.

ಇದೇ ರೀತಿ ನವೋದಯ ಕಾಲದ ಇನ್ನೂ ಅನೇಕ ಕವಿಗಳು ಭಾರತದ ಸ್ವಾತಂತ್ರ್ಯ ಚಳವಳಿ, ಸ್ವತಂತ್ರ ದಿನಾಚರಣೆ, ಗಾಂಧಿ ನೆಹರೂ, ಸುಭಾಷ್ ಮೊದಲಾದವರ ತ್ಯಾಗ ಬಲಿದಾನ ಈ ವಿಚಾರಗಳ ಬಗ್ಗೆ ಅನೇಕ ಕವನಗಳನ್ನು ರಚಿಸಿದ್ದಾರೆ. ■



# ರಾಷ್ಟ್ರ ಪ್ರೇಮದ ವೀರಗೀತೆ :
# ವಂದೇ ಮಾತರಂ

▪ ಪಿ. ಎಸ್. ಪರ್ವತಿ

**ನಾ**ವೀಗ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದ್ದೇವೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಪಾರತಂತ್ರ್ಯ ನೀಗಿಸಿದ ದೇಶಭಕ್ತರನ್ನು ನೆನಪಿಸಿಕೊಳ್ಳುವುದಕ್ಕೆ ಇದು ಸಕಾಲ. ಅಂತೆಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶಭಕ್ತರಿಗೆ ಅಸಾಮಾನ್ಯ ಪ್ರೇರಣೆ ಹಾಗೂ ಸ್ಫೂರ್ತಿ ಒದಗಿಸಿದ ಗೀತೆ "ವಂದೇ ಮಾತರಂ'....... ಬ್ರಿಟಿಷರ ವಿರುದ್ಧ ಹೋರಾಡುವಾಗ ಜನ ಮಾನಸದಲ್ಲಿ ರೋಮಾಂಚನ ಮೂಡಿಸಿ, ಉತ್ಕಟ ರಾಷ್ಟ್ರಪ್ರೇಮವನ್ನು ಹಾಡಿನ ಮೂಲಕ ಪ್ರಕಟಪಡಿಸಿ ಗಲ್ಲಿಗೇರಿದ ಕ್ರಾಂತಿಕಾರರ ಕೊನೆಯುಸಿರಿನ ಆವೇಶಪೂರ್ಣ ಘೋಷಣೆ ಇದಾಗಿತ್ತು.

ಭಾರತದ ಅಧಿಕೃತ ರಾಷ್ಟ್ರಗೀತೆ 'ಜನಗಣಮನ ........ದಂತೆ "ವಂದೇ ಮಾತರಂ " ಹಾಡಿಗೂ ಸಹ ಸಮಾನ ಸ್ಥಾನ ಲಭಿಸಿದೆ. ಬಂಗಾಲದ ಸರ್ ವಾಲ್ಟರ್ ಸ್ಕಾಟ್ ಎಂದು ಪ್ರಸಿದ್ಧರಾಗಿದ್ದ ಕವಿ , ಕಾದಂಬರಿಕಾರ ಮತ್ತು ಪರಮ ದೇಶಭಕ್ತ ಬಂಕಿಮ್ ಚಂದ್ರ ಚಟರ್ಜಿ ಅವರು ಬಂಗಾಳಿ ಭಾಷೆಯಲ್ಲಿ " ವಂದೇ ಮಾತರಂ " ರಾಷ್ಟ್ರಗಾನವನ್ನು 1875 ರ ಸೆಪ್ಟೆಂಬರಲ್ಲಿ ರಚನೆ ಮಾಡಿದರು. ಈ ಗೀತೆ 'ಬಂಗದರ್ಶನ್ ' ಎಂಬ ಪತ್ರಿಕೆಯಲ್ಲಿ ಪ್ರಥಮ ಮುದ್ರಣ ಕಂಡಿತಾದರೂ ಪ್ರಾರಂಭದಲ್ಲಿ ಅದು ಯಾರ ಗಮನವನ್ನು ವಿಶೇಷವಾಗಿ ಸೆಳೆಯಲಿಲ್ಲ. ನಂತರ 1883 ರಲ್ಲಿ ಅವರದೇ ಪ್ರಸಿದ್ಧ ಕಾದಂಬರಿ 'ಆನಂದಮಠ ' ದಲ್ಲಿ ಈ ಹಾಡು ಪ್ರಕಟವಾದಾಗ , ಬಂಗಾಳಿ ಜನರಷ್ಟೇ ಅಲ್ಲದೇ ಪ್ರತಿಯೊಬ್ಬ ಭಾರತೀಯನಲ್ಲಿ ರಾಷ್ಟ್ರಪ್ರೇಮ ಉದ್ದೀಪನಗೊಳಿಸುವ ಒಕ್ಕೊರಲ ವೀರಗಾನವಾಗಿ ಹೊರಹೊಮ್ಮಿತು. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ರಾಷ್ಟ್ರಕ್ಕೆ ಮಾತೃ ರೂಪಕೊಟ್ಟು, ಭಾರತ ಮಾತೆ ಎಂಬ ಕಲ್ಪನೆ ಆಗಿನ್ನೂ ಹೊಸದು. ಬಂಕಿಮ್ ಚಂದ್ರರು ಭಾರತವನ್ನು ಸುಜಲೆ, ಸುಫಲೆ, ಸಸ್ಯಶ್ಯಾಮಲೆ , ಬಹುಜಲಧಾರಣಿ , ಶಕ್ತಿಮಯಿ ಎಂದು ಈ ಗೀತೆಯಲ್ಲಿ ವರ್ಣಿಸಿದರು.

ಈ ಗೀತೆಯ ಮೊದಲ ವೃತ್ತ ಹಾಗೂ ಅದರ ಅನುವಾದ ಇಂತಿದೆ.

**ವಂದೇ ಮಾತರಮ್**
**ಸುಜಲಾಮ್, ಸುಫಲಾಮ್**
**ಮಲಯಜ ಶೀತಲಾಮ್**
**ಸಸ್ಯಶ್ಯಾಮಲಾಮ್**
**ಮಾತರಮ್**

**ಶುಭ್ರ ಜ್ಯೋತ್ಸ್ನಾ**
**ಪುಲಕಿತ ಯಾಮೀನಿಮ್**
**ಪುಲ್ಲಕುಸುಮಿತ**
**ದ್ರುಮದಲ ಶೋಭಿನೀಮ್**

**ಸುಹಾಸಿನೀಮ್**
**ಸುಮಧುರ ಭಾಷಿಣೀಮ್**
**ಸುಖದಾಮ್ ವರದಾಮ್**
**ಮಾತರಮ್ !**

ಈ ಗೀತೆಯ ಶ್ರೀ ಅರವಿಂದರ ಇಂಗ್ಲೀಷ್ ರೂಪಾಂತರದ ಕನ್ನಡ ಅನುವಾದ ಹೀಗಿದೆ.

**ತಾಯೇ ನಿನಗೆ ವಂದನೆ,**
**ಒಳ್ಳೆಯ ಜಲವುಳ್ಳವಳು**
**ಒಳ್ಳೆಯ ಫಲಪುಷ್ಪವುಳ್ಳವಳು**
**ಚಂದನದಿಂದ ತಂಪಾದವಳು,**
**ಸಸ್ಯಗಳಿಂದ ಕಪ್ಪಾದವಳು**
**ಇಂತಹ ತಾಯಿಗೆ ವಂದನೆ**

**ಶುಭ್ರವಾದ ಬೆಳದಿಂಗಳನ್ನು**
**ಅನುಭವಿಸಿ, ರೋಮಾಂಚನ**
**ಹೊಂದುವಂಥ**
**ರಾತ್ರಿಯುಳ್ಳವಳು;**
**ಅರಳಿದ ಹೂಗಳುಳ್ಳ**
**ಮರಗಳಿಂದ ಶೋಭಿಸುವವಳು;**
**ಚೆನ್ನಾಗಿ ನಗುವಂಥ,**
**ಒಳ್ಳೆಯ ಮಧುರವಾಗಿ**
**ಮಾತನಾಡುವಂಥ ಸುಖ**
**ಕೊಡುವ ವರಕೊಡುವ**
**ತಾಯಿಗೆ ವಂದನೆ"**

**ಪ್ರಕೃತಿಯಿಂದ ಬಂದ ಸ್ಫೂರ್ತಿಃ**

ಕಂಟಲಪಾಡಾದ ಶ್ರೀಮಂತ ಕುಟುಂಬದಲ್ಲಿ 27 ಆಗಸ್ಟ್ 1838 ರಂದು ಬಂಕಿಮ್ ಚಂದ್ರ ಚಟರ್ಜಿ ಅವರ ಜನನ. ಮೊದಲ ಸ್ವಾತಂತ್ರ್ಯ ಸಂಗ್ರಾಮದ ವೇಳೆಗೆ ಯುವ ವಿದ್ಯಾರ್ಥಿಯಾಗಿದ್ದರು. ಅಂದಿನಿಂದಲೇ ರಾಷ್ಟ್ರೀಯತೆಯನ್ನು ಆಳವಾಗಿ ರೂಢಿಸಿಕೊಂಡು, ಬಂಗಾಲಿ ಸಾಹಿತ್ಯದಲ್ಲಿ ಕವಿಯಾಗಿ ಪ್ರಸಿದ್ಧರಾಗಿದ್ದರು. 1875ರ ರಜಾ ದಿನಗಳಲ್ಲಿ ಚಟರ್ಜಿ ಅವರು ತಮ್ಮ ಊರಾದ ಕಂಟಲಪಾಡಾಕ್ಕೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಇಡೀ ದಿನ ಪ್ರಯಾಣದುದ್ದಕ್ಕೂ ಕಂಡ ಪ್ರಕೃತಿಯ ವಿಜೃಂಭಣೆ ಅವರನ್ನು ಸಮ್ಮೋಹನಗೊಳಿಸಿತು. ವಿಶಾಲ ಭೂಪ್ರದೇಶ, ಮೋಡಿ ಮಾಡುವ ಹಸಿರೆಲೆ, ಸಸ್ಯಶ್ಯಾಮಲೆ, ಧರೆಗೆ ಅಲಂಕೃತಗೊಂಡ ಪುಷ್ಪಗಳು, ಜುಳು ಜುಳು ಹರಿಯುವ ನದಿ – ತೊರೆಗಳು, ಸುಂದರ ಸರೋವರಗಳನ್ನು ಕಂಡು ಭಾವ ಪರವಶಗೊಂಡ ಕವಿ ಹೃದಯ ತಾಯಿ ಭಾರತ ಮಾತೆಯನ್ನು ಸೊಗಸಾದ ಅಕ್ಷರ ರೂಪದಲ್ಲಿ ಹೊರಹಾಕಿತ್ತು. ಅಂದು ಜನಿಸಿದ "ವಂದೇ ಮಾತರಂ" ಗೀತೆ ಜನಮಾನಸ ತಲುಪಲು ಏಳು ವರ್ಷಗಳೇ ಬೇಕಾಯಿತು. ಬಂಗಾಳ ವಿಭಜನೆ ಸನ್ಯಾಸಿ ಬಂಡಾಯದ ಸ್ಫೂರ್ತಿಯಿಂದ ಅವರು ರಚಿಸಿದ ಐತಿಹಾಸಿಕ ಕಾದಂಬರಿ ಆನಂದಮಠದಲ್ಲಿ ಅದು ಪ್ರಕಟಗೊಂಡಿತು. ತನ್ಮೂಲಕ ಪೂರ್ವ ಬಂಗಾಳ ಸ್ವಾತಂತ್ರ್ಯ ಹೋರಾಟದ ಕೇಂದ್ರಬಿಂದು ಬಾರಿಸಾಲ್‌ನಲ್ಲಿ ವಿದ್ಯುತ್ ಪ್ರವಾಹದೋಪಾದಿಯಲ್ಲಿ ಮಾರ್ದನಿಸಿತು. ಬಂಗಾಳವನ್ನು ವಿಭಜಿಸುವ ಸೂಚನೆ ವಿರುದ್ಧ ಚಳುವಳಿ ತೀವ್ರಗೊಂಡಾಗ ಕಲಕತ್ತೆಯ ಬೀದಿಗಳಲ್ಲಿ ವಂದೇ ಮಾತರಂ ಘೋಷ ಮೊಳಗಿತು. ಲಾರ್ಡ್ ಕರ್ಜನ್ ನೇತೃತ್ವದಲ್ಲಿ ಬಂಗಾಳವು ವಿಭಜನೆಯಾದಾಗ 'ವೀರಗಾನ 'ವಾಗಿ ಮೈದಾಳಿದ "ವಂದೇ ಮಾತರಂ '

ಬಂಗಾಳಿಗಳೆಲ್ಲರ ಪ್ರಾತಃ ಸ್ಮರಣೆಯಾಯಿತು. 1905 ಅಕ್ಟೋಬರ್ 16 ರಂದು ಬಂಗಾಳ ವಿಭಜನೆಯಾಯಿತು. ಬ್ರಿಟಿಷರ ಈ ಅನ್ಯಾಯವನ್ನು ಪ್ರತಿಭಟಿಸಿ ಬಂಗಾಳಿಗಳು ಈ ಗೀತೆಯನ್ನು ರಾಗವಾಗಿ ಹಾಡುತ್ತ ಮೆರವಣಿಗೆಯಲ್ಲಿ ಸಾಗಿದರು. ಅವರು ಅಂದು ವ್ಯಕ್ತಪಡಿಸಿದ ಈ ಗೀತೆಯ ಭಾವೋದ್ರೇಕ ದೇಶದಾದ್ಯಂತ ಅನುರಣಿಸಿತು.

**ಮೇಧಾವಿಗಳ ಸಂಗಮ:** 1886 ರಲ್ಲಿ ಕಲ್ಕತ್ತಾದಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನ ಈ ಗೀತೆ ಹಾಡಲ್ಪಟ್ಟ ಪ್ರಪ್ರಥಮ ರಾಜಕೀಯ ಸಂದರ್ಭವಾಗಿತ್ತು. ಅಧಿವೇಶನದಲ್ಲಿದ್ದ ಜನಸಾಗರೆದುರು ರಾಷ್ಟ್ರಕವಿ ರವೀಂದ್ರನಾಥ್ ಠಾಗೋರರು 'ವಂದೇ ಮಾತರಂ ' ಗೀತೆಯನ್ನು ತಮ್ಮ ಇಂಪಾದ ಹಾಗೂ ಉಚ್ಚಸ್ತರದರದ ಕಂಠದಿಂದ ಸುಶ್ರಾವ್ಯವಾಗಿ ಹಾಡಿದಾಗ ನೆರೆದ ಜನಸ್ತೋಮದಲ್ಲಿ ವಿದ್ಯುತ್ ಸಂಚಾರವಾಗಿತ್ತು. ರಾಷ್ಟ್ರ ಪ್ರೇಮದ ಈ ಅವ್ಯಕ್ತ ಸ್ಫೂರ್ತಿ, ದೇಶಭಕ್ತಿಯ ಹಾಡಾಗಿ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಹುತಾತ್ಮರ ಕೊನೆಯುಸಿರಿನ ದನಿಯಾಗಿತ್ತು. ಈ ರಾಷ್ಟ್ರೀಯ ಗೀತೆಯನ್ನು ರಚಿಸಿದ್ದು ಬಂಕಿಮ್ ಚಂದ್ರ ಚಟರ್ಜಿ . ಅದಕ್ಕೆ ಸಂಗೀತ ಸಂಯೋಜಿಸಿ ಹಾಡಿದವರು ರವೀಂದ್ರನಾಥ್ ಠಾಗೋರರು. ಈ ಕವಿತೆಯನ್ನು ಇಂಗ್ಲೀಷಿಗೆ ಅನುವಾದಿಸಿದವರು ಶ್ರೀ ಅರವಿಂದ ಘೋಷರು. ಭಾರತದ ಮೂವರು ಮೇಧಾವಿಗಳನ್ನು ಒಂದೆಡೆ ಸೇರಿಸಿದ ಅಪರೂಪ ರಾಷ್ಟ್ರ ಗೀತೆಯಿದು.

'ವಂದೇ ಮಾತರಂ ' ಬಾವುಟ ' ವಂದೇ ಮಾತರಂ ' ಎಂಬೆರೆಡು ಪದಗಳನ್ನು ಅಳವಡಿಸಿಕೊಂಡ ಭಾರತದ



ಮೊಟ್ಟಮೊದಲ ಬಾವುಟವನ್ನು ನಮ್ಮ ದೇಶದಲ್ಲಿ ಹಾರಿಸಿದ್ದು 110 ವರ್ಷಗಳ ಹಿಂದೆ. ರಾಷ್ಟ್ರ ಗೌರವದ ಸಂಕೇತವಾದ ಈ ಬಾವುಟವನ್ನು 1906 ರ ಅಗಸ್ಟ 7 ರಂದು ಕಲ್ಕತ್ತೆಯ ಗ್ರೀನ್ ಪಾರ್ಕ್‌ದಲ್ಲಿ (ಪಾರ್ಸಿ ಬಗನ್ ಚೌಕ) ಹಾರಿಸಲಾಯಿತು. ಈ ಪತಾಕೆಯು 'ವಂದೇ ಮಾತರಂ' ಬಾವುಟ ಎಂದೇ ಪ್ರಸಿದ್ಧವಾಗಿದೆ. ಕೆಂಪು ಹಳದಿ , ಹಸಿರು ತ್ರಿವರ್ಣದ ಅಡ್ಡ



ಪಟ್ಟಿಗಳಿಂದ ಕೂಡಿದ ಈ ಬಾವುಟದ ಕೆಂಪು ಬಣ್ಣದ ಪಟ್ಟಿಯಲ್ಲಿ ಬಿಳಿಯ ಕಮಲದ ಹೂಗಳು, ಮಧ್ಯದ ಹಳದಿ ಬಣ್ಣದ ಪಟ್ಟಿಯಲ್ಲಿ ದೇವನಾಗರ ಲಿಪಿಯಲ್ಲಿ " ವಂದೇ ಮಾತರಂ ' ಎಂಬ ಕಡು ನೀಲಿ ಬಣ್ಣದ ಅಕ್ಷರಗಳಿದ್ದವು. ಹಸಿರು ಪಟ್ಟಿಯಲ್ಲಿ ಸೂರ್ಯ , ಅರ್ಧ ಚಂದ್ರ ಹಾಗೂ ನಕ್ಷತ್ರವನ್ನು ಬಿಳಿ ಬಣ್ಣದಿಂದ ಚಿತ್ರಿಸಲಾಗಿತ್ತು. ಇದೇ ಮಾದರಿಯ ಧ್ವಜವನ್ನು ರೂಪಿಸಿ ವಿದೇಶದಲ್ಲಿ ಮೇಡಂ ಕಾಮಾ ಅವರು ಪ್ಯಾರಿಸ್ಸಿನ ಬರ್ಲಿನ್‌ದಲ್ಲಿ ಹಾರಿಸಿದ ದಾಖಲೆಗಳಿವೆ. ವಿದೇಶದಲ್ಲೂ ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೂ ಸ್ಫೂರ್ತಿಯಾದದ್ದು "ವಂದೇ ಮಾತರಂ" ಎಂಬ ಅದ್ಭುತ ಶಕ್ತಿ.

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಹಲವು ವರ್ಷಗಳ ಬಳಿಕ ಮಹಾತ್ಮ ಗಾಂಧೀಜಿಯವರು ತಮ್ಮ ಪತ್ರಗಳನ್ನೆಲ್ಲ ವಂದೇ ಮಾತರಂ ಎಂದು ಬರೆದು ಮುಕ್ತಾಯಗೊಳಿಸುವದು ವಾಡಿಕೆಯಾಗಿತ್ತು. ನೇತಾಜಿ ಸುಭಾಷಚಂದ್ರ ಬೋಸರ ಹಿಂದ್ ಫೌಜ್‌ನ ಸ್ಫೂರ್ತಿ ಗೀತೆ ಸಹ ವಂದೇ ಮಾತರಂ ಆಗಿತ್ತು. ಬನಾರಸ್ ಕಾಂಗ್ರೆಸ್ ಅಧಿವೇಶನದಲ್ಲಿ (1905) ಕವಯತ್ರಿ ಸರಳಾದೇವಿ ಚೌದುರಾನಿ ಈ ಗೀತೆಯನ್ನು ಇಂಪಾಗಿ ಹಾಡಿದ್ದರು. ಲಾಲಾ ಲಜಪತ್ ರಾಯ್ ಅವರು ಲಾಹೋರಿನಿಂದ ವಂದೇ ಮಾತರಂ ಎಂಬ ಹೆಸರಿನ ಜರ್ನಲ್ ಪ್ರಾರಂಭಿಸಿದರು. ದಕ್ಷಿಣ ಭಾರತದಲ್ಲಿ ಈ ಹಾಡಿನ ಮೋಡಿಗೆ ಮರುಳಾದ ಸುಬ್ರಹ್ಮಣ್ಯ ಭಾರತೀಯವರು ಅದನ್ನು ತಮಿಳು ಭಾಷೆಗೆ ಅನುವಾದ ಮಾಡಿದರು ಕಾಂಗ್ರೆಸ್ ಅಧಿವೇಶನದಲ್ಲಿ ಸಹ ಈ ಗೀತೆಯನ್ನು ಹಾಡುವ ಸಂಪ್ರದಾಯ ಬೆಳೆದು ಬಂದಿತು. 1937 ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು

ಈ ಹಾಡಿನ ಮೊದಲೆರಡು ಪದ್ಯಗಳನ್ನು ಮಾತ್ರ ಹಾಡುವುದಾಗಿ ತೀರ್ಮಾನಿಸಿತು. ಅದಕ್ಕೆ ಕಾರಣ ಈ ಹಾಡಿನಲ್ಲಿ ದುರ್ಗಾ ಮಾತೆಯ ಪ್ರಸ್ತಾಪವೇ ಕಾರಣವಾಗಿತ್ತು. 1947 ರ ವಿಶ್ವ ಸಂಸ್ಥೆಯ ಮಹಾಸಭೆಯಲ್ಲಿ ಭಾರತದ ರಾಷ್ಟ್ರಗೀತೆಯಾಗಿ ಜನಗಣಮನ..... ವನ್ನು ನುಡಿಸಲಾಯಿತು. ಭಾರತದ ಪ್ರಥಮ ರಾಷ್ಟ್ರಪತಿ ಡಾ ॥ ರಾಜೇಂದ್ರ ಪ್ರಸಾದ ಅವರು 1950 ರಲ್ಲಿ ನಡೆದ ಸಂವಿಧಾನ ರಚನಾ ಸಮಿತಿ ಸಭೆಯಲ್ಲಿ ಜನ..ಗಣ...ಮನವನ್ನು ರಾಷ್ಟ್ರಗೀತೆ ಎಂದು ಪ್ರಕಟಿಸುತ್ತ , ವಂದೇ ಮಾತರಂ ಗೀತೆಗೂ ಸಹ ಸಮಾನ ಸ್ಥಾನಮಾನವಿರುವುದಾಗಿ ಹೇಳಿದರು. 1947 ರ ಆಗಸ್ಟ್ 14–15ರ ಮಧ್ಯ ರಾತ್ರಿಯ ಹೊತ್ತಿಗೆ ಸುಚೇತಾ ಕೃಪಲಾನಿಯವರು "ವಂದೇ ಮಾತರಂ ಹಾಡನ್ನು ಅತ್ಯಂತ ಸುಮಧುರವಾಗಿ ಹಾಡಿ ಸ್ವಾತಂತ್ರ್ಯೋತ್ಸವಕ್ಕೆ ಸಂಭ್ರಮ ತಂದುಕೊಟ್ಟರು.

ಬಂಕಿಮ್ ಚಂದ್ರ ಚಟರ್ಜಿ ಅವರು ಪ್ರಸಿದ್ಧ ಕಾದಂಬರಿಕಾರರಾಗಿದ್ದರೂ ಅವರು ರಚಿಸಿದ ವಂದೇ ಮಾತರಂ ಹಾಡು ಮಾತ್ರ ಭಾರತೀಯತೆಯ ಸಾರ್ವಕಾಲಿಕ ಮೌಲ್ಯವನ್ನು ಸಾರುವ ಗೀತೆಯಾಗಿ ಜನಜನಿತವಾಯಿತು. ಅದರೊಂದಿಗೆ ಅವರ ಹೆಸರೂ ಕೂಡಾ ಅಜರಾಮರವಾಯಿತು. ಅರ್ಧ ಬಂಗಾಳಿ ಹಾಗೂ ಅರ್ಧ ಸಂಸ್ಕೃತದಲ್ಲಿ ಈ ಗೀತೆಯನ್ನು ಬರೆಯಲಾಗಿದೆ ಎಂಬ ಟೀಕೆ ಇದ್ದರೂ , ಈ ಹಾಡಿನ ತುಂಬ ಭಾರತ ಮಾತೆಯ ವರ್ಣನೆಯೇ ತುಂಬಿಕೊಂಡಿದೆ. ಭಾರತೀಯತೆಯನ್ನು ಅತ್ಯಂತ ಶಕ್ತಿಯುತವಾಗಿ ಹಾಗೂ ಪರಿಣಾಮಕಾರಿಯಾಗಿ ಸಾರುವ ಹಾಡು ಬಹುಶಃ ಬೇರೊಂದಿಲ್ಲ.

ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ ಜವಹರಲಾಲ್ ನೆಹರೂ ಅವರು ' ವಂದೇ ಮಾತರಂ ' ವಿಸ್ತಾರವಾದ




ಐತಿಹಾಸಿಕ ಪರಂಪರೆಯಿರುವ ಭಾರತದ ಶ್ರೇಷ್ಠ ರಾಷ್ಟ್ರಗೀತೆಯೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಅಂತಹ ಉತ್ಕೃಷ್ಟ ಸ್ಥಾನವನ್ನು ಅಲಂಕರಿಸಿರುವ ಅದನ್ನು ಆ ಎತ್ತರದಿಂದ ಕೆಳದಬ್ಬುವಂತೆಯೇ ಇಲ್ಲ ಎಂದಿದ್ದಾರೆ.

ಶ್ರೀ ಅರವಿಂದ ಘೋಷ ಹಾಗೂ ಬಿಪಿನ್‌ಚಂದ್ರ ಪಾಲ್ ಅವರು ' ವಂದೇ ಮಾತರಂ ಕೇವಲ ಶಬ್ದಗಳ ಆಡಂಬರವಲ್ಲ ಅದು ಒಂದು ದಿವ್ಯಮಂತ್ರ, ಕಿವಿಗೆ ಕೇಳುವಷ್ಟೇ ಅಲ್ಲ ; ಕೇಳುಗರನ್ನು ಜೊತೆಗೆ ಕೊಂಡೊಯ್ಯುವ ಅದ್ಭುತ ಶಕ್ತಿ ಎಂಬುದಾಗಿ ಹೇಳಿದ್ದಾರೆ. ಅಂತೆಯೇ ಇಂದಿಗೂ ಈ ಹಾಡು ಅಮೋಘ ಶಕ್ತಿಯಾಗಿ ನಮ್ಮನ್ನು ಹುರಿದುಂಬಿಸುವದರ ಜೊತೆಗೆ ನಮ್ಮೆಲ್ಲರ ಒಡಲಿಲ್ಲ ರಾಷ್ಟ್ರ ಪ್ರೇಮವನ್ನು ಪ್ರಜ್ವಲಗೊಳಿಸುತ್ತಿದೆ.

ಭಾರತೀಯ ಜನಸಮುದಾಯದಲ್ಲಿ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಿ, ಭಾರತೀಯರ ಬದುಕಿನಲ್ಲಿ ಸ್ವಾತಂತ್ರ್ಯದ ಅನಿರ್ವಚನೀಯ ಪ್ರೇಮವನ್ನು ಅವಿರ್ಭಾವಗೊಳಿಸಿದ ಕೀರ್ತಿ ಬಂಕಿಮ್ ಚಂದ್ರರಿಗೆ ಹಾಗೂ ವಂದೇ ಮಾತರಂ ಗೀತೆಗೆ ಸಲ್ಲುತ್ತದೆ.

# ಸ್ವಾತಂತ್ರ್ಯ ಮತ್ತು ಮಹಿಳಾ ಸಬಲೀಕರಣ



■ ಲಕ್ಷ್ಮಣ ಕೊಡಸೆ

**'ಮ**ಹಿಳೆಯೊಬ್ಬರು ಅರ್ಧರಾತ್ರಿಯಲ್ಲಿ ನಿರ್ಭೀತಿಯಿಂದ ಮನೆಯಿಂದ ಹೊರಗಡೆ ನಡೆಯಲು ಸಾಧ್ಯವಾಗುವಂಥ ಪರಿಸ್ಥಿತಿ ನಿರ್ಮಾಣವಾದಾಗಲೇ ಸ್ವಾತಂತ್ರ್ಯಕ್ಕೆ ಸಾರ್ಥಕತೆ ಎಂಬುದು ಮಹಾತ್ಮ ಗಾಂಧೀಜಿ ಅವರ ಆಶಯವಾಗಿತ್ತು.

ಮಹಿಳೆ ಪುರುಷರಿಗಿಂತಲೂ ಅಹಿಂಸಾಮಾರ್ಗದಲ್ಲಿ ದಿಟ್ಟವಾದ ನಿರ್ಧಾರ ತೆಗೆದುಕೊಳ್ಳಬಲ್ಲಳು. ಆಕೆ ಪುರುಷರಿಗೆ ಕಡಿಮೆ ಎನಿಸುವಂಥ ಯಾವ ಸಂದರ್ಭಗಳೂ ಇಲ್ಲ. ಪುರುಷರಿಗೆ ಸಮಾನವಾದ ಮಾನಸಿಕ ಸ್ಥೈರ್ಯವುಳ್ಳ ಮಹಿಳೆ ಪುರುಷರಿಗೆ ದೈವದತ್ತ ಕೊಡುಗೆ. ನೈತಿಕ ಶಕ್ತಿಯನ್ನು ಬಲವೆಂದು ಪರಿಗಣಿಸಿದರೆ ಮಹಿಳೆ ನಿಸ್ಸಂಶಯವಾಗಿ ಪುರುಷರಿಗಿಂತ ಮೇಲುಸ್ತರದಲ್ಲಿ ಇರುತ್ತಾಳೆ ಎಂದೂ ಗಾಂಧೀಜಿ ಅವರು ಅನೇಕ ಸಂದರ್ಭದಲ್ಲಿ ಹೇಳಿದ್ದರು.

ಮಹಿಳಾ ಸಬಲೀಕರಣ ಎಂಬುದಕ್ಕೆ ಈಚಿನ ದಶಕಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆದ್ಯತೆ ನೀಡುತ್ತಿವೆಯಾದರೂ ಸ್ವಾತಂತ್ರ್ಯ ಪೂರ್ವದಲ್ಲಿಯೇ ಗಾಂಧೀಜಿ ಮಹಿಳೆಯರ ಅಭಿವೃದ್ಧಿ ಕುರಿತ ಚಿಂತನೆಯನ್ನು ಹರಿಯಬಿಟ್ಟಿದ್ದರು. ದೇಶ ಸ್ವಾತಂತ್ರ್ಯ ಗಳಿಸಿದ ನಂತರ ಅಂಗೀಕರಿಸಿದ ಸಂವಿಧಾನ ಮಹಿಳೆಯರೂ ಸೇರಿದಂತೆ ಸರ್ವರಿಗೂ ಸಮಾನ ಅವಕಾಶಗಳನ್ನು, ಹಕ್ಕು ಬಾಧ್ಯತೆಗಳನ್ನು ನೀಡಿತಾದರೂ ಆರಂಭದ ದಶಕಗಳಲ್ಲಿ ಮಹಿಳೆಯರ ಬಗ್ಗೆ ವಿಶೇಷ ಗಮನ ನೀಡಲಾಗಿರಲಿಲ್ಲ. ನೂರಾರು ವರ್ಷಗಳಿಂದ ಪರಕೀಯರ ಆಳ್ವಿಕೆಗೆ ಒಗ್ಗಿ ಹೋಗಿದ್ದ ಹಾಗೂ ಸಾಂಪ್ರದಾಯಿಕ ಸಾಮಾಜಿಕ ಕಟ್ಟುಪಾಡುಗಳನ್ನು ಪ್ರಶ್ನಿಸದೆಯೇ ಒಪ್ಪಿಕೊಂಡಿದ್ದ ರಾಜಕೀಯ ನಾಯಕತ್ವಕ್ಕೆ ದೇಶವನ್ನು ಮುನ್ನಡೆಸುವ ಸವಾಲು ಪ್ರಮುಖವಾಗಿತ್ತು. ದೇಶದ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಿಕೊಂಡು ಅಭಿವೃದ್ಧಿಯ ನೀಲನಕ್ಷೆಯನ್ನು ರೂಪಿಸುವ ಹೊಣೆಗಾರಿಕೆ ಆರಂಭದ ದಶಕಗಳಲ್ಲಿತ್ತು.

ದೇಶವು ಸಂಸದೀಯ ಪ್ರಜಾಸತ್ತೆಯ ಆಡಳಿತ ವ್ಯವಸ್ಥೆಯನ್ನು ಅಂಗೀಕರಿಸಿದರೂ ರಾಜಕೀಯ ಅಧಿಕಾರ ಸಮಾಜದ ಎಲ್ಲ ವರ್ಗಕ್ಕೆ ತಲುಪುವಂತೆ ಮಾಡುವುದಕ್ಕೆ ದೇಶದ ಅನೇಕ ರಾಜ್ಯಗಳಲ್ಲಿ ಸ್ವಾತಂತ್ರ್ಯ ಲಭಿಸಿದ ಆರು ದಶಕಗಳ ನಂತರವೂ ಸಾಧ್ಯವಾಗಲಿಲ್ಲ. ಶತಮಾನಗಳ ಕಾಲದಿಂದ ಸಮಾಜದ ಮುಖ್ಯಧಾರೆಯಿಂದ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದ ಪರಿಶಿಷ್ಟ ಜಾತಿ, ಬುಡಕಟ್ಟುಗಳಿಗೆ ಸಂವಿಧಾನದ ಆಶಯದಂತೆ ನೀಡಲಾಗಿದ್ದ ಮೀಸಲಾತಿ ಒಂದು ಪುರೋಗಾಮಿ ನಡೆಯಾಗಿದ್ದು ಅದು ರಾಜಕೀಯ ಕ್ಷೇತ್ರ ಮಾತ್ರವಲ್ಲದೆ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಕ್ಕೆ ವಿಸ್ತರಣೆಯಾಗಿರುವುದು ಆರೋಗ್ಯಕರ ವಿದ್ಯಮಾನ. ಪರಿಶಿಷ್ಟ ವರ್ಗದಂತೆಯೇ ಮುಖ್ಯಧಾರೆಯಿಂದ ದೂರವೇ ಉಳಿದಿದ್ದ ನೂರಾರು ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಅಲ್ಪಸ್ವಲ್ಪ ಮೀಸಲಾತಿ ಕಲ್ಪಿಸುವುದಕ್ಕೆ ಸ್ವಾತಂತ್ರ್ಯ ಬಂದ ನಾಲ್ಕು ದಶಕಗಳವರೆಗೆ ಕಾಯಬೇಕಾಯಿತು. ಉದಾರವಾದಿ ಮನಃಸ್ಥಿತಿಯ ರಾಷ್ಟ್ರೀಯ ನಾಯಕತ್ವದ ಪರಿಣಾಮವಾಗಿ ಪರಿಶಿಷ್ಟ ವರ್ಗಕ್ಕೆ ನೀಡಿರುವಂತೆ ಹಿಂದುಳಿದ ಸಮುದಾಯಗಳಿಗೂ ಕೇಂದ್ರ ಸರ್ಕಾರದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಶೇ 27 ರಷ್ಟು ಮೀಸಲಾತಿಯ ಸೌಲಭ್ಯ ಕಲ್ಪಿಸಲಾಗಿದೆ. ಇದು ಸರ್ವ ಸಮಾನತೆಯ ಸಂವಿಧಾನದ ಆಶಯವನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಭಾರತೀಯ ಸಮಾಜದಲ್ಲಿ ಪರಿಶಿಷ್ಟ ಜಾತಿ, ಬುಡಕಟ್ಟು ಮತ್ತು ಹಿಂದುಳಿದ ಸಮುದಾಯಗಳಷ್ಟೇ ಅವಕಾಶವಂಚಿತವಾಗಿದ್ದವರು ಒಟ್ಟು ಜನಸಂಖ್ಯೆಯ ಶೇ. ಐವತ್ತರಷ್ಟಿರುವ ಮಹಿಳೆಯರು ಎಂಬುದು ವಾಸ್ತವ ಸಂಗತಿ. ಧರ್ಮ, ಸಂಪ್ರದಾಯ, ಆಚರಣೆಗಳ ಚೌಕಟ್ಟಿನಲ್ಲಿ ಬಂಧಿಸಲಾಗಿದ್ದ ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣವನ್ನೂ ಒದಗಿಸುವುದಕ್ಕೆ ಅನೇಕ ದಶಕಗಳ ಕಾಲ ಹೋರಾಟ ನಡೆಸಬೇಕಾಗಿ ಬಂದಿರುವುದು ಐತಿಹಾಸಿಕ ಸಂಗತಿ. ಸ್ವಾತಂತ್ರ್ಯಾ ನಂತರ ಈ ಬಗ್ಗೆ ವಿಶೇಷ ಅಭಿಯಾನ ಆರಂಭವಾಗಬೇಕಾದರೆ ನಾಲ್ಕೈದು ದಶಕಗಳು ಕಳೆಯಬೇಕಾಯಿತು. ಜಾಗತಿಕ ಮಟ್ಟದಲ್ಲಿಯೂ ಜಾಗೃತಿ ಮೂಡಬೇಕಾಯಿತು. ಅಂತರರಾಷ್ಟ್ರೀಯ ಮಹಿಳಾ ವರ್ಷ, ಮಹಿಳಾ ದಿನ, 'ಹೆಣ್ಣು ಮಗು, ರಾಷ್ಟ್ರದ ಹೆಮ್ಮೆ' ಎಂಬಂಥ ಜಾಗೃತಿಯ ಪ್ರಯತ್ನಗಳು ನಡೆಯಬೇಕಾಯಿತು.

ಸ್ವಾತಂತ್ರ್ಯಪೂರ್ವದಲ್ಲಿಯೇ ಸಮಾಜದಲ್ಲಿ ಸಮಾನತೆಯನ್ನು ತರುವುದಕ್ಕೆ ಪ್ರಯತ್ನ ನಡೆಸಿದ ಪುರೋಗಾಮಿ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿರುವುದು. ಮೈಸೂರು ಅರಸರು ಸರ್ಕಾರಿ ಹುದ್ದೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿಯನ್ನು ಕಲ್ಪಿಸುವ ಪ್ರಗತಿಪರ ದೃಷ್ಟಿಯನ್ನು 1918ರಲ್ಲಿಯೇ ಅನುಷ್ಠಾನಕ್ಕೆ

**ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಒದಗಿಸಿದ ಈ ಉಪಕ್ರಮ ಅವರನ್ನು ಗ್ರಾಮೀಣ ಭಾಗದಿಂದಲೇ ಆರ್ಥಿಕವಾಗಿ ಸಬಲೀಕರಣಗೊಳಿಸುವ ಪ್ರಕ್ರಿಯೆಗೆ ನಿಮಿತ್ತವಾಯಿತು. ಗ್ರಾಮೀಣ ಭಾಗದಲ್ಲಿ ಮಹಿಳೆಯರನ್ನು ಸಂಘಟಿಸಿ ಅವರಲ್ಲಿ ಆರ್ಥಿಕ ಚೈತನ್ಯವನ್ನು ಮೂಡಿಸುವುದಕ್ಕೆ ಸ್ವಸಹಾಯ ಸಂಘಗಳನ್ನು ಅಸ್ತಿತ್ವಕ್ಕೆ ತಂದಿರುವುದು ರಾಜ್ಯದ ಮಹಿಳಾ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ. ಈ ಸ್ವಸಹಾಯ ಗುಂಪುಗಳು ಬ್ಯಾಂಕುಗಳಿಂದ ಸಾಲ ಪಡೆದು ತಮ್ಮ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಚಟುವಟಿಕೆಗಳನ್ನು ತೊಡಗಿಕೊಳ್ಳುವಂತೆ ಮಾಡಿದ್ದು ಗಮನಾರ್ಹ ಬದಲಾವಣೆ.**

ತಂದಿದ್ದರು. ಆಗಿನ ಅರಸರು ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ಶಾಲೆಗಳನ್ನೂ ಆರಂಭಿಸಿ ಲಿಂಗಸಮಾನತೆಯ ಪ್ರಯತ್ನಗಳಿಗೆ ನಾಂದಿ ಹಾಡಿದ್ದರು. ಅದೇ ಪರಂಪರೆಯನ್ನು ಆಡಳಿತದಲ್ಲಿ ಹೊಂದಿದ್ದ ಕರ್ನಾಟಕ ಸ್ವಾತಂತ್ರ್ಯಾ ನಂತರವೂ ಈ ನಿಟ್ಟಿನಲ್ಲಿ ಅನೇಕ ಪುರೋಗಾಮಿ ಹೆಜ್ಜೆಗಳನ್ನು ಇಟ್ಟಿರುವುದು ಇತಿಹಾಸದಲ್ಲಿ ದಾಖಲಾಗಿದೆ. ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದ ಅನೇಕ ಮುಖಂಡರು ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುವ ಉಪಯುಕ್ತ ಯೋಜನೆಗಳನ್ನು ದೂರಗಾಮಿ ನೆಲೆಯಲ್ಲಿ ರೂಪಿಸಿ ಅನುಷ್ಠಾನಕ್ಕೆ ತಂದರು. ಈ ಕ್ರಮಗಳಿಂದ ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಕರ್ನಾಟಕವು ದೇಶದ ಮುಂಚೂಣಿಯ ರಾಜ್ಯಗಳಲ್ಲಿ ಒಂದಾಗಿ ಮಾನ್ಯತೆ ಪಡೆದಿದೆ.

ಎಪ್ಪತ್ತರ ದಶಕದಲ್ಲಿ(1972–80) ನಾಡಿನ ಆಡಳಿತ ಚುಕ್ಕಾಣಿ ಹಿಡಿದಿದ್ದ ಡಿ.ದೇವರಾಜ ಅರಸರು ಅದುವರೆಗೆ ಅಧಿಕಾರದಿಂದ ದೂರವೇ ಉಳಿದಿದ್ದ ಕೆಳವರ್ಗಗಳಿಗೆ ಅವಕಾಶ ನೀಡಿ ರಾಜಕೀಯದ ಮುಖ್ಯವಾಹಿನಿಗೆ ತರುವ ಪ್ರಯತ್ನ ನಡೆಸಿದರು. ದಲಿತರು, ಹಿಂದುಳಿದವರಿಗೆ ಟಿಕೆಟ್ ನೀಡಿ ವಿಧಾನಸಭೆ ಪ್ರವೇಶಿಸುವಂತೆ ಮಾಡಿದರು. ಮೊದಲ ಬಾರಿಗೆ ಗೆದ್ದವರಿಗೂ ಸಚಿವಸ್ಥಾನ ನೀಡಿ ರಾಜಕೀಯ ನಾಯಕತ್ವ ಕೆಳವರ್ಗಗಳಿಗೂ ಸಲ್ಲಬಹುದೆಂಬ ಸಾಧ್ಯತೆಯನ್ನು ಸಾಕಾರಗೊಳಿಸಿದರು. ಅದುವರೆಗೆ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಜನ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಒದಗಿಸಿದರು. ಸಾಮಾಜಿಕ ನ್ಯಾಯದ ಹರಿಕಾರನಂತೆ ಶೋಷಿತ ವರ್ಗವನ್ನು ಮೇಲೆತ್ತಲು ಪ್ರಯತ್ನ ನಡೆಸಿದ್ದ ದೇವರಾಜ ಅರಸರು ಮಹಿಳೆಯರನ್ನು ನಿರ್ಲಕ್ಷಿಸಲಿಲ್ಲ. ವಿದ್ಯಾವಂತರಾಗಿದ್ದು ಸಮಾಜ ಸೇವೆಯಲ್ಲಿ ಆಸಕ್ತಿ ಪ್ರದರ್ಶಿಸಿದ ಹತ್ತಾರು ಮಹಿಳೆಯರನ್ನು ರಾಜಕೀಯದ ಮುನ್ನೆಲೆಗೆ ತಂದರು. ಇವಾವಾಜ್, ಮನೋರಮಾ ಮಧ್ವರಾಜ್, ಮೋಟಮ್ಮ, ರೇಣುಕಾ ರಾಜೇಂದ್ರನ್ ಮೊದಲಾದವರು ಅರಸರಿಂದ ಗುರುತಿಸಲ್ಪಟ್ಟು ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದ ಮಹಿಳೆಯರು. ದೇಶದಲ್ಲಿಯೇ ಮೊಟ್ಟಮೊದಲನೆ ಮಹಿಳಾ ಸ್ಪೀಕರ್ ಆಗಿ ಕೆ.ಎಸ್.ನಾಗರತ್ನಮ್ಮ ಅವರನ್ನು ಆಯ್ಕೆ ಮಾಡಿದವರು ದೇವರಾಜ ಅರಸರು. ಮಹಿಳೆಯರಿಗೆ ಸಚಿವ ಸ್ಥಾನವೆಂದರೆ ಮಹಿಳೆ ಮತ್ತು

ಮಕ್ಕಳ ಅಭಿವೃದ್ಧಿ ಇಲಾಖೆ ಎಂದು ಇದ್ದ ಸಾಂಪ್ರದಾಯಿಕ ಕಲ್ಪನೆಯನ್ನು ದೂರ ಮಾಡಿದ್ದ ಅರಸರು ತಮ್ಮ ಸಂಪುಟದಲ್ಲಿ ಸಚಿವೆಯಾಗಿದ್ದ ಇವಾವಾಜ್ ಅವರಿಗೆ ಕಠಿಣವಾಗಿದ್ದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯನ್ನೂ ನೀಡಿದ್ದರು. ಮಹಿಳೆಯರಿಗೆ ಅವಕಾಶ ಕಲ್ಪಿಸುವ ಕಲ್ಯಾಣ ಕಾರ್ಯಕ್ರಮಗಳಲ್ಲಿ ಆಸರೆಯಿಲ್ಲದ ವಿಧವೆಯರಿಗೆ ಪಿಂಚಣಿ ನೀಡುವ ಯೋಜನೆಯೂ ದೇವರಾಜ ಅರಸರ ಕಾಲದಲ್ಲಿಯೇ ಜಾರಿಗೆ ಬಂದಿತು.

ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳನ್ನು ಕಳೆದ ಶತಮಾನದ ಎಂಬತ್ತರದ ದಶಕದಲ್ಲಿ ಯಶಸ್ವಿಯಾಗಿ ಅಸ್ತಿತ್ವಕ್ಕೆ ತರಲಾಯಿತು. ಬೇರುಮಟ್ಟದಲ್ಲಿ ಜನತೆಯ ಅಗತ್ಯಗಳನ್ನು ಪೂರೈಸಿಕೊಳ್ಳುವಂಥ ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಗಳು ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತರುವ ಸ್ವಯಮಾಡಳಿತ ಸಂಸ್ಥೆಗಳು. ಇವುಗಳಲ್ಲಿ ಮಹಿಳೆಯರು ಭಾಗಿಯಾಗುವುದು ಅವಶ್ಯಕವೆಂದು ಭಾವಿಸಿದ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಗೆ ಮನವರಿಕೆ ಮಾಡಿಕೊಡಲು ತಾವು ಯತ್ನಿಸಿದ್ದಾಗಿ ಆ ದಿನಗಳಲ್ಲಿ ಜನತಾ ಪಕ್ಷದ ಕಾನೂನು ಸಲಹೆಗಾರರಾಗಿದ್ದ ಹಿರಿಯ ನ್ಯಾಯಮೂರ್ತಿ ಕೋ. ಚೆನ್ನಬಸಪ್ಪ ಈಚೆಗೆ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ. ಗ್ರಾಮಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾರಂಭದಲ್ಲಿ ಶೇ 20ರಂತೆ ಮೀಸಲಾತಿ ಕಲ್ಪಿಸಲಾಯಿತು. ಮಹಿಳೆಯರನ್ನು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಯೋಗ ಗ್ರಾಮೀಣ ಮಹಿಳೆಯರಲ್ಲಿಯೂ ಆಡಳಿತದಲ್ಲಿ ಭಾಗವಹಿಸುವ ಜಾಗೃತಿಯನ್ನು ಮೂಡಿಸಿತು. ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಕಲ್ಪಿಸಿದ ಮೀಸಲಾತಿ ಶೇ 30ಕ್ಕೆ ಏರಿತು. ಅದರಲ್ಲಿ ಕಂಡ ಯಶಸ್ಸಿನ ಹಿನ್ನೆಲೆಯಲ್ಲಿ ಈಗ ಅದರ ಪ್ರಮಾಣ ಶೇ 50ಕ್ಕೆ ಮುಟ್ಟಿದೆ. ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಶೇ 50ರಷ್ಟು ಮೀಸಲಾತಿಯನ್ನು ಕಲ್ಪಿಸಿದ ಕರ್ನಾಟಕ, ದೇಶದಲ್ಲಿಯೇ ಇಂಥ ಕ್ರಾಂತಿಕಾರಿ ರಾಜಕೀಯ ಹೆಜ್ಜೆ ಇರಿಸಿದ ಮೊಟ್ಟಮೊದಲ ರಾಜ್ಯವಾಗಿದೆ.

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಒದಗಿಸಿದ ಈ ಉಪಕ್ರಮ ಅವರನ್ನು ಗ್ರಾಮೀಣ ಭಾಗದಿಂದಲೇ ಆರ್ಥಿಕವಾಗಿ ಸಬಲೀಕರಣಗೊಳಿಸುವ ಪ್ರಕ್ರಿಯೆಗೆ ನಿಮಿತ್ತವಾಯಿತು. ಗ್ರಾಮೀಣ ಭಾಗದಲ್ಲಿ ಮಹಿಳೆಯರನ್ನು ಸಂಘಟಿಸಿ ಅವರಲ್ಲಿ ಆರ್ಥಿಕ ಚೈತನ್ಯವನ್ನು ಮೂಡಿಸುವುದಕ್ಕೆ ಸ್ವಸಹಾಯ ಸಂಘಗಳನ್ನು ಅಸ್ತಿತ್ವಕ್ಕೆ ತಂದಿರುವುದು ರಾಜ್ಯದ ಮಹಿಳಾ ಸಬಲೀಕರಣದಲ್ಲಿ ಮಹತ್ವದ ಹೆಜ್ಜೆ. ಈ ಸ್ವಸಹಾಯ ಗುಂಪುಗಳು ಬ್ಯಾಂಕುಗಳಿಂದ ಸಾಲ ಪಡೆದು ತಮ್ಮ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಚಟುವಟಿಕೆಗಳನ್ನು ತೊಡಗಿಕೊಳ್ಳುವಂತೆ ಮಾಡಿದ್ದು ಗಮನಾರ್ಹ ಬದಲಾವಣೆ.

ರಾಜ್ಯವು ಮಹಿಳಾ ಮೀಸಲಾತಿಯನ್ನು ಸದಸ್ಯರ ಆಯ್ಕೆಗಷ್ಟೇ ಮಿತಿಗೊಳಿಸಿಲ್ಲ. ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಪುರಸಭೆ, ನಗರ ಸಭೆ, ನಗರಪಾಲಿಕೆಗಳಂಥ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ , ಉಪಾಧ್ಯಕ್ಷ ಸ್ಥಾನಗಳಿಗೂ ವಿಸ್ತರಣೆಯಾಗಿದೆ. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ ರಾಜ್ಯ ಸಚಿವರ ಸ್ಥಾನ ಕಲ್ಪಿಸಿರುವುದರಿಂದ ಮಹಿಳೆಯರು ಆಡಳಿತ ವ್ಯವಸ್ಥೆಯಲ್ಲಿ ಪ್ರಭಾವಶಾಲಿ ಸಹಭಾಗಿತ್ವವನ್ನು ಪಡೆದಿದ್ದಾರೆ. ಸಾಮಾಜಿಕ ನ್ಯಾಯದಂತೆ ಅವಕಾಶ ವಂಚಿತ ಸಮುದಾಯಗಳು ಈ ಮೀಸಲಾತಿಯ ಪ್ರಯೋಜನ ಪಡೆಯುತ್ತಿರುವುದರಿಂದ ಮಹಿಳೆಯರಲ್ಲಿ ನವೋತ್ಸಾಹ ಮೂಡುವುದಕ್ಕೆ ಸರ್ಕಾರದ ಕ್ರಮಗಳು ಉತ್ತೇಜನಕಾರಿಯಾಗಿವೆ.

ಮಹಿಳೆಯರು ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನಗಳಿಸುತ್ತಿದ್ದರೂ ಕೌಟುಂಬಿಕ ಕಟ್ಟುಪಾಡುಗಳನ್ನು ಅವರಿಗೆ ಮೀರಲಾಗುತ್ತಿಲ್ಲ. ಆಡಳಿತದ ಜಟಿಲ ನಿಯಮಗಳು ಅವರಿಗೆ ಕೆಲವೊಮ್ಮೆ ಅರ್ಥವಾಗದೆ ಆಡಳಿತ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ಪತಿ ಇಲ್ಲವೇ ಮಕ್ಕಳ ನೆರವನ್ನು ಪಡೆಯುವುದು ಅನಿವಾರ್ಯವಾಗುತ್ತಿದೆ. ಅವರನ್ನು ಅಧಿಕಾರ ಸ್ಥಾನಕ್ಕೆ ತಂದ ರಾಜಕೀಯ ಪಕ್ಷಗಳು ಸ್ಥಳೀಯ ನಾಯಕತ್ವವೂ ಅವರ ಮೇಲೆ ಪ್ರಭಾವ ಬೀರುತ್ತಿರುವ ವರದಿಗಳು ಕೇಳಿ ಬರುತ್ತಿವೆ. ಅಧಿಕಾರ ಗಳಿಕೆ, ಅದನ್ನು ಸಾರ್ವಜನಿಕವಾಗಿ ಬಳಸಿಕೊಳ್ಳುವುದು, ನಿಯಮಗಳ ಚೌಕಟ್ಟಿನಲ್ಲಿ ಕೆಲಸ ಮಾಡುವುದು,, ಒಂದು ಬಗೆಯ ಕಾರ್ಯನಿರ್ವಹಣೆಗೆ ಒಗ್ಗಿಹೋದ ಅಧಿಕಾರಶಾಹಿಯನ್ನು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಮಹಿಳೆಯರಿಗೆ ಸವಾಲಿನ ಕೆಲಸವೇ ಆಗಿದೆ.


ಸಾಂಪ್ರದಾಯಿಕವಾದ ಕುಟುಂಬ ವ್ಯವಸ್ಥೆಯಲ್ಲಿ ಮುಳುಗಿದ್ದ ಮಹಿಳೆ ಒಮ್ಮೆಗೆ ರಾಜಕೀಯ ಪ್ರಾತಿನಿಧ್ಯ ಪಡೆದು ಸಾರ್ವಜನಿಕ ಕ್ಷೇತ್ರ ಪ್ರವೇಶಿಸಿದಾಗ ಗೊಂದಲಕ್ಕೆ ಒಳಗಾಗುವುದು ಸಹಜ. ಅದನ್ನು ಅನೇಕ ದಿಟ್ಟ ಮಹಿಳೆಯರು ಎದುರಿಸಿ ಯಶಸ್ವಿಯಾಗಿದ್ದಾರೆ. ಹೆಚ್ಚಿನ ಮಹಿಳೆಯರಿಗೆ ಕುಟುಂಬದ ವಾತಾವರಣದಿಂದ ಹೊರಗೆ ಬರುವುದು ಸಾಧ್ಯವಾಗದೆ, ಅವರ ಆಡಳಿತ ನಿರ್ಧಾರದಲ್ಲಿ ಪತಿ ಇಲ್ಲವೇ ವಯಸ್ಕ ಮಕ್ಕಳ ಹಸ್ತಕ್ಷೇಪ ನಡೆಯುವ ಅಪಚಾರಗಳು ನಡೆಯುತ್ತವೆ. ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಮತ್ತು ಅಧಿಕಾರಶಾಹಿಯ ಕರ್ತವ್ಯ ಬಲ್ಲ ಆಡಳಿತಾಧಿಕಾರಿಗಳು ಈ ತೊಡಕನ್ನು ನಿವಾರಿಸಲು ಪ್ರಯತ್ನಿಸಿದರೆ ಮಹಿಳೆಯರಿಗೆ ನೀಡಲಾದ ರಾಜಕೀಯ ಪ್ರಾತಿನಿಧ್ಯ ಸಾರ್ಥಕವಾಗುತ್ತದೆ.

ದೇಶದ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸಂಬಂಧದ ಮಸೂದೆ ಸಂಸತ್ತಿನಲ್ಲಿ ಅನೇಕ ದಶಕಗಳಿಂದ ಯಾವುದೇ ನಿರ್ಧಾರಕ್ಕೆ ಬರದೆ ನೆನೆಗುದಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಶೇ 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನಿಗದಿಪಡಿಸಿರುವುದು ಅತ್ಯಂತ ಕ್ರಾಂತಿಕಾರಕ ಹೆಜ್ಜೆಯಾಗಿದೆ. ಇದು ದೇಶಕ್ಕೆ ಮಾದರಿಯಾಗಿದೆ. ತಮಗೆ ನೀಡಲಾಗಿರುವ ರಾಜಕೀಯ ಪ್ರಾತಿನಿಧ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರಲ್ಲಿ ಮಹಿಳೆಯರು ಸದ್ಯಕ್ಕೆ ಸಫಲರಾಗದಿದ್ದರೂ ಈ ಅವಕಾಶ ಅವರ ಸಬಲೀಕರಣದಲ್ಲಿ ಮಹತ್ವದ್ದಾಗಿದೆ ಎಂಬುದನ್ನು ಮರೆಯಬಾರದು. ಆಧುನಿಕ ಸಮಾಜದಲ್ಲಿ ಪುರುಷರಿಗೆ ಯಾವ ದೃಷ್ಟಿಯಿಂದಲೂ ತಾವು ಕಡಿಮೆಯಲ್ಲ ಎಂಬುದನ್ನು ಮಹಿಳೆಯರು ತೋರಿಸುತ್ತಿದ್ದಾರೆ. ಅದರಂತೆಯೇ ಸ್ಥಳೀಯ ಸಂಸ್ಥೆಗಳಲ್ಲಿನ ರಾಜಕೀಯ ಪ್ರಾತಿನಿಧ್ಯವನ್ನೂ ಅವರು ಯಶಸ್ವಿಯಾಗಿ ಬಳಸಿಕೊಳ್ಳುವ ದಿನಗಳು ದೂರವಿಲ್ಲ ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದಾಗಿದೆ. ■



### ಸ್ವಾತಂತ್ರ್ಯಗಾಥೆಯ ಬಲಿದಾನ ಪರ್ವ

# ಜಲಿಯನ್ ವಾಲಾಬಾಗ್ ಹತ್ಯಾಕಾಂಡ






**ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿ ಸಿಲುಕಿದ್ದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಹಲವು ದಶಕಗಳೇ ಕಳೆದಿದೆ. ಆದರೆ ಈ ಸ್ವಾತಂತ್ರ್ಯ ಎಂಬುದು ಸುಲಭದ ತುತ್ತಾಗಿರಲಿಲ್ಲ. ಹಲವು ಧೀಮಂತರ ಬಲಿದಾನದ ರಕ್ತ, ಅವರ ಕುಟುಂಬಿಕರ ಕಣ್ಣೀರು ಇದರ ಹಿನ್ನೆಲೆಯಲ್ಲಿದೆ. ತ್ಯಾಗ, ಬಲಿದಾನಗಳ ಹತ್ತು ಹಲವು ನಿದರ್ಶನಗಳು ಈ ಸ್ವಾತಂತ್ರ್ಯಗಾಥೆಯ ಅಧ್ಯಾಯಗಳಾಗಿವೆ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಅಂತಹ ಅಧ್ಯಾಯಗಳಲ್ಲೊಂದು.**

▪ ಎಂ.ಜಿ. ಆತ್ರೇಯ

**ಅಂ**ದು ಏಪ್ರಿಲ್ 13, 1919. ಸ್ಥಳ: ಅಮೃತಸರದ ಸ್ವರ್ಣ ಮಂದಿರ ಸಮೀಪದ ಉದ್ಯಾನವನ. ಅದೇ ದಿನ ಸಿಖ್ಖರ ಪವಿತ್ರ ಹಬ್ಬ ಬೈಸಾಖಿ ಅಥವಾ ವೈಶಾಖಿ ಹಬ್ಬವನ್ನು ಆಚರಿಸಲು ಒಟ್ಟುಗೂಡಿ ಸಂಭ್ರಮಿಸಲು ಸುತ್ತಮುತ್ತಲಿನ ಹಳ್ಳಿಗಳಿಂದ ತಂಡೋಪತಂಡವಾಗಿ ಬಂದ ಜನ. ಅದರಲ್ಲಿ ಹೆಂಗಳೆಯರು, ಮಕ್ಕಳು, ಮುದುಕರು, ಯುವಕರು ಎಲ್ಲರೂ ಇದ್ದರು. ಯುವಕರಲ್ಲಿ ಹೆಚ್ಚಿನ ಜನ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಆಗಷ್ಟೇ ಜಾರಿಯಾಗಿದ್ದ "ರೌಲಟ್ ಕಾಯ್ದೆ"ಯ ವಿರುದ್ಧ ಅಲ್ಲಲ್ಲಿ ದಂಗೆಗಳಾಗುತ್ತಿದ್ದ ಕಾಲವದು. ಮುಂಜಾಗ್ರತಾ ಕ್ರಮವಾಗಿ ಅಂದಿನ ಬ್ರಿಟಿಷ್ ಸರ್ಕಾರ ಅಮೃತಸರದಲ್ಲಿ 'ಮಾರ್ಷಲ್ ನಿಯಮ'ವನ್ನು ಜಾರಿಗೊಳಿಸಿತ್ತು. ಸಂವಹನ ತಂತ್ರಜ್ಞಾನವು ತೀರ ಹಿಂದುಳಿದಿದ್ದ ಪ್ರದೇಶವಾದ್ದರಿಂದ ಗ್ರಾಮೀಣ ಪ್ರದೇಶದಿಂದ ಅಮೃತಸರಕ್ಕೆ ಬರುತ್ತಿದ್ದ ಜನರಿಗೆ ಮಾಹಿತಿ, ಸಮಾಚಾರಗಳು ಲಭ್ಯವಾಗಿರಲಿಲ್ಲ.

ಶಾಸನಬದ್ಧವಾಗಿ ಅಂದರೆ ಮಾರ್ಷಲ್ ನಿಯಮದ ಪ್ರಕಾರ ಅಮೃತಸರದಲ್ಲಿ ಐದಕ್ಕಿಂತ ಹೆಚ್ಚಿನ ಜನ ಗುಂಪು ಗೂಡುವಂತಿರಲಿಲ್ಲ. ಇದರ ಅರಿವಿರದ ಅಮಾಯಕ ಜನ ಹಬ್ಬದ ಸಾಂಪ್ರದಾಯಿಕ ಸಂಭ್ರಮದಲ್ಲಿ ತೇಲಾಡುತ್ತಿದ್ದರು.

ಸಂಜೆ 5ರ ವೇಳೆಗೆ ತೊಂಬತ್ತು ಜನ ಸೈನಿಕರಿದ್ದ, ಬಂದೂಕುಗಳಿಂದ ಶಸ್ತ್ರಸಜ್ಜಿತವಾದ ತುಕಡಿಯೊಂದು ಉದ್ಯಾನವನಕ್ಕೆ ಮದ್ದುಗುಂಡುಗಳನ್ನು ತುಂಬಿದ ಎರಡು ಕಾರುಗಳೊಂದಿಗೆ ಬಂದಿತು.



ತುಕಡಿಯ ನಿಯಂತ್ರಕನಾದ ಬ್ರಿಗೇಡಿಯರ್ ಜನರಲ್ ರೆಗಿನಾಲ್ಡ್ ಡೈಯರ್, ಉದ್ಯಾನವನದೊಳಗೆ ಕಾಲಿಡುತ್ತಲೇ, ಅಲ್ಲಿ ನೆರೆದಿದ್ದವರಿಗೆ ಯಾವ ಎಚ್ಚರಿಕೆಯನ್ನೂ ಕೊಡದೇ, ಗುಂಪು ಚದುರುವಂತೆ ಆದೇಶವನ್ನೂ ನೀಡದೇ, ಏಕಾಏಕಿ ಗುಂಡಿನ ಮಳೆಗರೆಯುವಂತೆ ತಮ್ಮ ತುಕಡಿಗೆ ಆದೇಶವನ್ನಿತ್ತ.

ಗುಂಡಿನ ದಾಳಿ ಸಂಜೆ 5–15 ಕ್ಕೆ ಪ್ರಾರಂಭವಾದರೂ ಸತತವಾಗಿ 15 ನಿಮಿಷಗಳ ಕಾಲ ಮುಂದುವರೆಯಿತು. ಸುತ್ತಲೂ ಇಟ್ಟಿಗೆ ಗೋಡೆಗಳಿಂದ, ಕಟ್ಟಡಗಳಿಂದ ಆವೃತವಾದ ಉದ್ಯಾನವನಕ್ಕೆ ಇದ್ದದ್ದು ಕಿರಿದಾದ ಐದು ದ್ವಾರಗಳು ಮಾತ್ರ. ಅದರಲ್ಲಿ ಬಹುತೇಕ ಶಾಶ್ವತವಾಗಿ ಮುಚ್ಚಲ್ಪಟ್ಟಂಥವು. ಸೈನ್ಯದ ತುಕಡಿಯಿದ್ದ ದ್ವಾರದ ಹೊರತಾಗಿ ಇನ್ನೊಂದೇ ದ್ವಾರವು ಮಾರ್ಗವಾಗಿ ಉಳಿದಿದ್ದರಿಂದ, ಕಂಗಾಲಾದ ಜನ ಸುತ್ತಲೂ ಇದ್ದ ಗೋಡೆಯನ್ನು ಹತ್ತಿ ಹಾರಲು ಪ್ರಯತ್ನಿಸಿದರು.

ಬಹಳಷ್ಟು ಜನ ಗುಂಡಿನ ದಾಳಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ, ಉದ್ಯಾನವನದಲ್ಲಿದ್ದ ಬಾವಿಗೆ ಹಾರಿದರು. ಈ ಹತ್ಯಾಕಾಂಡದ ಸ್ಮಾರಕದಲ್ಲಿನ ಅಂಶವೊಂದರ ಪ್ರಕಾರ ಈ ಬಾವಿಯಿಂದಲೇ ಸುಮಾರು 120 ಶವಗಳನ್ನು ಹೊರತೆಗೆಯಲಾಗಿತ್ತು. ಹತ್ಯಾಕಾಂಡದಿಂದ ನೂರಾರು ಜನರು ಸಾವನ್ನಪ್ಪಿದ್ದರು. ಸಾವಿರಾರು ಜನರು ಗಾಯಗೊಂಡಿದ್ದರು.

ಸರ್ಕಾರಿ ಮೂಲಗಳ ಪ್ರಕಾರ 379 ಮಂದಿ ಸಾವಿಗೀಡಾಗಿದ್ದರೆಂದು ವರದಿಯೊಂದು ಹೇಳುತ್ತದೆ. ಆದರೆ, ಸಾವಿಗೀಡಾದವರ ಸಂಖ್ಯೆ ಸಾವಿರಕ್ಕೂ ಹೆಚ್ಚು ಮತ್ತು ಗಾಯಗೊಂಡವರ ಸಂಖ್ಯೆ 1200 ಕ್ಕೂ ಹೆಚ್ಚು ಎಂದು ಖಾಸಗಿ ಮೂಲಗಳು ತಿಳಿಸುತ್ತವೆ.

ಅಂತೆಯೇ, ಘಟನೆಯ ಪ್ರತ್ಯಕ್ಷದರ್ಶಿಯಾದ ಸಿವಿಲ್ ಶಸ್ತ್ರಚಿಕಿತ್ಸಾ ತಜ್ಞ ಡಾ॥ ಸ್ಮಿತ್ ನೀಡಿದ ಮಾಹಿತಿಯ ಪ್ರಕಾರ ಸಾವನ್ನಪ್ಪಿದವರು 1800 ಕ್ಕೂ ಹೆಚ್ಚು. ಈ ಅಂಕಿ ಅಂಶಗಳು ರಾಜಕೀಯ ಕಾರಣಗಳಿಂದಾಗಿ ಎಂದಿಗೂ ದೃಢಪಟ್ಟಿಲ್ಲ. ನಿಜವಾದ ಸಾವಿನ ಸಂಖ್ಯೆಗಳ ಬಗ್ಗೆ ಇಂದಿಗೂ ಚರ್ಚೆ ನಡೆಯುತ್ತಲೇ ಇದೆ.

ಕರ್ಫ್ಯೂ ವಿಧಿಸಿದ್ದ ಕಾರಣ, ಗಾಯಗೊಂಡ ಹಲವರನ್ನು ಹತ್ಯಾಕಾಂಡದ ಸ್ಥಳದಿಂದ ಇತರೆಡೆಗೆ ಸ್ಥಳಾಂತರಿಸಲು ಸಾಧ್ಯವಾಗಲಿಲ್ಲ.

ಈ ಘಟನೆ ನಡೆದ ಬಳಿಕ ಬ್ರಿಟಿಷ್ ಸೇನೆಗೆ ಅಮೃತಸರದಲ್ಲಿ ದಂಗೆಯೇಳುವ ಸಲುವಾಗಿ ಜಮಾವಣೆಯಾಗಿದ್ದ ವಿದ್ರೋಹಿ ಸೈನ್ಯವು ಎದುರಾದದ್ದರಿಂದ ತನ್ನ ವಿವೇಚನೆಗನುಸಾರ ಸರ್ಕಾರದ ಆದೇಶವನ್ನು ನಿರೀಕ್ಷಿಸಿ, ಸೈನ್ಯಕ್ಕೆ ತಕ್ಕ ಪಾಠವನ್ನು ಕಲಿಸಿದುದಾಗಿ ಜನರಲ್ ಡೈಯರ್‌ನು ತನ್ನ ಮೇಲಾಧಿಕಾರಿಗಳಿಗೆ ವರದಿ ನೀಡಿದನು.

ಇದಕ್ಕೆ ಉತ್ತರಿಸಿದ ಪಂಜಾಬ್‌ನ ಅಂದಿನ ಲೆಫ್ಟಿನೆಂಟ್ ಗವರ್ನರ್ ಆದ ಮೈಕೆಲ್ ಓ'ಡ್ವೆಯರ್‌ನು "ಅವರಿಗೆ ತಕ್ಕ ಪಾಠವನ್ನು ಕಲಿಸಿದಿರಿ. ಲೆಫ್ಟಿನೆಂಟ್ ಗವರ್ನರ್ ಆಗಿ ನಾನು ಇದನ್ನು ಅನುಮೋದಿಸುತ್ತೇನೆಂದು" ಮರುಟಪಾಲಿನಲ್ಲಿ ತಂತಿ ಕಳುಹಿಸಿದನು.

ತಮ್ಮಿಬ್ಬರ ಕರ್ತವ್ಯವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಮೈಕೆಲ್ ಓ'ಡ್ವೆಯರ್ ನು ಅಂದಿನ ವೈಸರಾಯ್ ಆಗಿದ್ದ ಫೆಡ್ರಿಕ್ ತೆಸಿಂಗರ್‌ನಿಗೆ ಅಮೃತಸರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಮಿಲಿಟರಿ ಆಡಳಿತವನ್ನು ಹೇರುವಂತೆ ಶಿಫಾರಸು ಮಾಡಿದನು. ಅವನಿಚ್ಛೆಯಂತೆ ಮಿಲಿಟರಿ ಆಡಳಿತಕ್ಕೆ ಅನುಮೋದನೆ ದೊರೆಯಿತು.

ಮಾನವತ್ವ ಉಳಿಸಿಕೊಂಡಿದ್ದ ಬೆರಳೆಣಿಕೆಯ ಬ್ರಿಟಿಷ್ ಅಧಿಕಾರಿಗಳಲ್ಲೊಬ್ಬರು ಹಾಗೂ ಅಂದಿನ ಭಾರತದ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ಎಡ್ವಿನ್ ಮಾಂಟೆಗೋ ಈ ಹತ್ಯಾಕಾಂಡದ ಕುರಿತು ತನಿಖೆ ನಡೆಸುವಂತೆ ಸೂಚಿಸಿ ಆಯೋಗವೊಂದನ್ನು ರಚಿಸುತ್ತಾನೆ.

ಅದೇ 'ಹಂಟರ್ ಆಯೋಗ'. ಈ ಆಯೋಗದೆದುರು ಮೈಕೆಲ್ ಓ'ಡ್ವೆಯರ್ ನನ್ನು ಕರೆತರಲಾಯಿತು. ವಿಚಾರಣೆಯ ವೇಳೆ, ಜಲಿಯನ್ ವಾಲಾಬಾಗ್‌ನಲ್ಲಿ ಉದ್ದೇಶಿಸಲಾಗಿರುವ ಕಾರ್ಯಕ್ರಮದ ಬಗ್ಗೆ ತನಗೆ ಅಂದಿನ ದಿನ ಅಪರಾಹ್ನ 12–40 ರ ವೇಳೆಗೆ ತಿಳಿಯಿತಾದರೂ, ಇದನ್ನು ತಡೆಗಟ್ಟಲು ಯಾವುದೇ ಕ್ರಮ ವಹಿಸಲಿಲ್ಲವೆಂದು ಒಪ್ಪಿಕೊಂಡನು.

ಇದಲ್ಲದೇ ಡಯರ್‌ನು ತಾನು ಜಲಿಯನ್‌ವಾಲಾಬಾಗ್‌ಗೆ ಗುಂಡು ಹಾರಿಸುವ ಉದ್ದೇಶದಿಂದಲೇ ತೆರಳಿದ್ದಾಗಿ ತಿಳಿಸಿದನು. "ಜಲಿಯನ್ ವಾಲಾಬಾಗ್‌ನಲ್ಲಿ ಸೇರಿದ ಜನರನ್ನು ಚದುರಿಸಲು ಗುಂಡಿನ ಅವಶ್ಯಕತೆ ಇರಲಿಲ್ಲವಾದರೂ, ತಾನು ಆ ಕ್ರಮ ವಹಿಸದಿದ್ದರೆ, ಜನರು ಮತ್ತೆ ಗುಂಪುಗೂಡಿ ತನ್ನನ್ನು ಗೇಲಿ ಮಾಡುವ ಸಂಭವವಿತ್ತು ಹಾಗೂ ಅವರ ಕಣ್ಣಲ್ಲಿ ನಾನೊಬ್ಬ ಮೂರ್ಖನಂತಾಗುತ್ತಿದ್ದೆ" ಎಂದು ಹಂಟರ್ ಆಯೋಗದ ಮುಂದೆ ಡಯರ್ ತನ್ನ ನಿಲುವನ್ನು ಸ್ಪಷ್ಟಪಡಿಸಿದನು.

ಡಯರ್‌ನು, ಗುಂಪನ್ನು ಒಂದು ಚಿಕ್ಕ ನಿರ್ದಿಷ್ಟ ಸ್ಥಳದಲ್ಲಿ ಕಲೆ ಹಾಕಲು ಸಾಧ್ಯವಾಗಿದಿದ್ದರೆ, ತಾನು ಮೆಷಿನ್‌ಗನನ್ನೇ ಪ್ರಯೋಗಿಸುತ್ತಿದ್ದುದ್ದಾಗಿ ರಾಜಾರೋಷವಾಗಿ ಆಯೋಗದ ಮುಂದೆ ಹೇಳಿಕೆಯನ್ನು ನೀಡಿದನು. ಜನರು ಚದುರುತ್ತಿರುವುದನ್ನು ನೋಡಿದರೂ, ಅವರು ಸಂಪೂರ್ಣವಾಗಿ ಉದ್ಯಾನವನವನ್ನು ತೆರವುಗೊಳಿಸುವವರೆಗೆ ಗುಂಡಿನ ಚಕಮಕಿ ನಿಲ್ಲಿಸಬಾರದೆಂದು ನಿರ್ಧರಿಸಿದ್ದೆ. ಗಾಯಾಳುಗಳನ್ನು ನಿರ್ಲಕ್ಷಿಸಿದ್ದುದಾಗಿ, ಅವರ ಆರೈಕೆ, ಆಸ್ಪತ್ರೆಗಳ ಕರ್ತವ್ಯವೆಂದು ನಿರ್ದಯಿ ಪಶು ಡಯರ್‌ನು ತನ್ನ ಕೃತ್ಯವನ್ನು ಸಮರ್ಥಿಸಿಕೊಂಡಿದ್ದನು.

ನಂತರ 1920 ರಲ್ಲಿ ಹಂಟರ್ ಆಯೋಗದ ವರದಿ ಬಿಡುಗಡೆಯಾಗಿ ಜನರಲ್ಲಿ ಉಂಟಾದ ಆಕ್ರೋಶಕ್ಕೆ ಮಣಿದ ಅಂದಿನ ಸರ್ಕಾರ ಡಯರ್‌ನನ್ನು ನಿಷ್ಕ್ರಿಯ ಅಧಿಕಾರಿಗಳ ಪಟ್ಟಿಗೆ ಸೇರಿಸಿತು. ನಿಷ್ಕ್ರಿಯ ಅಧಿಕಾರಿಗೆ ತುಕಡಿಯನ್ನು ನಿಯಂತ್ರಿಸುವ ಹಕ್ಕಿಲ್ಲದ ಕಾರಣ ಆತನ ಪದವಿಯನ್ನು ಕಮಾಂಡರ್ ಇನ್ ಚೀಫ್‌ನಿಂದ ಕರ್ನಲ್ ಪದವಿಗೆ ಮರುಕಳಿಸಲಾಯಿತು.

ನಂತರ ಡಯರ್‌ನ ಆರೋಗ್ಯವು ಕೈಕೊಟ್ಟಿತು. ಅವನನ್ನು ಒಂದು ವೈದ್ಯಕೀಯ ಹಡಗಿನಲ್ಲಿ ಇಂಗ್ಲೆಂಡ್‌ನ ಅವನ ಮನೆಗೆ ಕಳುಹಿಸಲಾಯಿತು. ಕೆಲವು ಹಿರಿಯ ಬ್ರಿಟಿಷ್ ಅಧಿಕಾರಿಗಳು ಮತ್ತು ಭಾರತದ ಅನೇಕ ಸಾರ್ವಜನಿಕರು ಇನ್ನೊಂದು ಭಾರತೀಯ ದಂಗೆಯನ್ನು ಅಡಗಿಸಿದ್ದಕ್ಕಾಗಿ ಡಯರ್‌ನನ್ನು ಪ್ರಶಂಸಿಸಿದರು. ಇಂಗ್ಲೆಂಡ್‌ನ ಹೌಸ್ ಆಫ್ ಲಾರ್ಡ್ಸ್ ಅವನನ್ನು ಹೊಗಳಿ ನಿರ್ಣಯವನ್ನು ಅಂಗೀಕರಿಸಿತು. ಆದರೆ ಹೌಸ್ ಆಫ್ ಕಾಮನ್ಸ್ ಅವನನ್ನು ತೀವ್ರವಾಗಿ ಖಂಡಿಸಿತು.

ವಿಪರ್ಯಾಸವೆಂದರೆ, ಇಂಗ್ಲೆಂಡ್‌ನ ಮಾರ್ನಿಂಗ್ ಪೋಸ್ಟ್ ಪತ್ರಿಕೆಯು ಡಯರ್‌ಗೆ ಸಹಾನುಭೂತಿ ವ್ಯಕ್ತಪಡಿಸಿ ನಿಧಿಯನ್ನು ಸ್ಥಾಪಿಸಿ 26,000 ಕ್ಕೂ ಹೆಚ್ಚು ಪೌಂಡ್‌ಗಳನ್ನು ಸಂಗ್ರಹಿಸಿತು. ಶುಭಕೋರಿರುವವರ ಹೆಸರುಗಳನ್ನು ಒಳಗೊಂಡ ಸ್ಮರಣ ಸಂಚಿಕೆಯನ್ನು ಅವನಿಗಾಗಿ ಅರ್ಪಿಸಿದವು.

ಭಾರತದಲ್ಲಿ ಈ ಹತ್ಯಾಕಾಂಡವು ಅತೀವ ದುಃಖ, ರೋಷವನ್ನುಂಟು ಮಾಡಿತು. ಪರಿಣಾಮವಾಗಿ ಭಾರತದ ಸ್ವಾತಂತ್ರ್ಯ ಚಳುವಳಿಗೆ ವೇಘೋತ್ಕರ್ಷವಾಗಿ ಪರಿಣಮಿಸಿ, ಮಹಾತ್ಮಾಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಹೆಚ್ಚಿನ ಉತ್ಸಾಹದಿಂದ ಜನರು ಪಾಲ್ಗೊಳ್ಳುವಂತಾಯಿತು. ನೋಬೆಲ್ ಪುರಸ್ಕೃತ ಕವಿ ರವೀಂದ್ರನಾಥ ಠಾಗೋರ್‌ರವರು ತಮ್ಮ ನೈಟ್ ಹುಡ್ ಪ್ರಶಸ್ತಿಯನ್ನು ವಾಪಸ್ಸು ನೀಡಿ ಹತ್ಯಾಕಾಂಡದ ಬಗೆಗಿನ ತಮ್ಮ ಪ್ರತಿಭಟನೆಯನ್ನು ತೋರಿದರು.

1920 ರಲ್ಲಿ ಈ ಘಟನೆಯ ಸ್ಮರಣಾರ್ಥವಾಗಿ ಇಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲು ಉದ್ದೇಶಿಸಿ ಒಂದು ಟ್ರಸ್ಟನ್ನು ಸ್ಥಾಪಿಸಲಾಯಿತು. ಇದಕ್ಕೆ ಬೇಕಾದ ಜಮೀನನ್ನು 1923 ರಲ್ಲಿ ಖರೀದಿಸಲಾಯಿತು. ನಂತರ ಈ ಉದ್ಯಾನವಿದ್ದ ಕಡೆ ಒಂದು ಸ್ಮಾರಕವನ್ನು ನಿರ್ಮಾಣ ಮಾಡಲಾಯಿತು. 1961 ಏಪ್ರಿಲ್ 13 ರಂದು ಅಂದಿನ ಪ್ರಧಾನಿ ಜವಹಾರ್‌ಲಾಲ್ ನೆಹರು ಹಾಗೂ ಮತ್ತಿತರರ ಸಮ್ಮುಖದಲ್ಲಿ ಅಂದಿನ ರಾಷ್ಟ್ರಪತಿಗಳಾದ ಡಾ॥ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು.

ಈ ಮಾರಣ ಹೋಮದ ಪ್ರತ್ಯಕ್ಷದರ್ಶಿಯಾದ ಹಾಗೂ ಸಿಖ್ಖರ ಕ್ರಾಂತಿಕಾರಿ ಶ್ರೀ ಉದ್ಧಾಮ್‌ಸಿಂಗ್ ಎಂಬ ವ್ಯಕ್ತಿ 13ನೇ ಮಾರ್ಚ್ 1940 ರಂದು ಮೈಕೆಲ್ ಓ'ಡ್ವಯರ್‌ನನ್ನು ಲಂಡನ್ನಿನ ಕಾಕ್ಸ್‌ಟೌನ್ ಹಾಲ್‌ನಲ್ಲಿ ಹತ್ಯೆ ಮಾಡಿ ತನ್ನ 21 ವರ್ಷಗಳ ಸುದೀರ್ಘ ಸೇಡನ್ನು ತೀರಿಸಿಕೊಂಡನು.

ಬ್ರಿಟಿಷ್ ಸರ್ಕಾರದ ಕೆಂಗಣ್ಣಿಗೆ ಗುರಿಯಾದ ಡಯರ್ ತನ್ನ ಹುದ್ದೆಗೆ ರಾಜೀನಾಮೆ ನೀಡುತ್ತಾನೆ. ತರುವಾಯ ಕಾಮಾಲೆ ರೋಗ ಹಾಗೂ ಶುದ್ಧ ರಕ್ತನಾಳಗಳ ಗಡುಸಾಗುವ ಸಮಸ್ಯೆಯಿಂದಾಗಿ ಆಸ್ಪತ್ರೆ ಪಾಲಾಗುತ್ತಾನೆ. ಪಾರ್ಶ್ವವಾಯು ಹೊಡೆತದ ಕಾರಣದಿಂದ ಮಾತು ನಿಲ್ಲುತ್ತದೆ. ಕೊನೆಗೆ ಮಿದುಳು ರಕ್ತಸ್ರಾವದಿಂದ 1927 ರಲ್ಲಿ ಡಯರ್ ಅಸುನೀಗುತ್ತಾನೆ.

ತನ್ನ ಮರಣ ಶೈಯ್ಯೆಯಲ್ಲಿ ಡಯರ್ ಹೇಳುತ್ತಾನೆ. "ನಾನು ಮಾಡಿದ್ದು ತಪ್ಪು ಎಂಬುದು ಬಹುತೇಕರ ಅಭಿಮತ. ನಾನು ಈಗ ಸಾಯಲು ಬಯಸುತ್ತೇನೆ ಹಾಗೂ ನಾನು ಮಾಡಿದ್ದು ಸರಿಯೋ ತಪ್ಪೋ ಎಂಬುದನ್ನು ಸೃಷ್ಟಿಕರ್ತನಿಂದ ತಿಳಿಯಬಯಸುತ್ತೇನೆ.

ಡಯರ್ ಮತ್ತು ಅವನ ಸೈನಿಕರ ನಿರ್ದಯತೆಗೆ ಸಾಕ್ಷಿ ಎಂಬಂತೆ, ಸ್ಮಾರಕದ ಗೋಡೆಗಳು ಹಾಗೂ ಸುತ್ತಲ ಕಟ್ಟಡಗಳ ಮೇಲೆ ಬಂದೂಕಿನ ಗುಂಡಿನಿಂದಾದ ರಂಧ್ರಗಳನ್ನು ಈಗಲೂ ನೋಡಬಹುದು. ಪ್ರಾಣ ರಕ್ಷಿಸಿಕೊಳ್ಳಲೆಂದು ಕೆಲ ಜನರು ಹಾರಿದ್ದ ಬಾವಿಯನ್ನು ಸಂರಕ್ಷಿಸಿ ಸ್ಮಾರಕವನ್ನಾಗಿಸಲಾಗಿದೆ.

ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿ ಸಿಲುಕಿದ್ದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ ಹಲವು ದಶಕಗಳೇ ಕಳೆದಿದೆ. ಆದರೆ ಈ ಸ್ವಾತಂತ್ರ್ಯ ಎಂಬುದು ಸುಲಭದ ತುತ್ತಾಗಿರಲಿಲ್ಲ. ಹಲವು ಧೀಮಂತರ ಬಲಿದಾನದ ರಕ್ತ, ಅವರ ಕುಟುಂಬಿಕರ ಕಣ್ಣೀರು ಇದರ ಹಿನ್ನೆಲೆಯಲ್ಲಿದೆ. ತ್ಯಾಗ, ಬಲಿದಾನಗಳ ಹತ್ತು ಹಲವು ನಿದರ್ಶನಗಳು ಈ ಸ್ವಾತಂತ್ರ್ಯಗಾಥೆಯ ಅಧ್ಯಾಯಗಳಾಗಿವೆ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಅಂತಹ ಅಧ್ಯಾಯಗಳಲ್ಲೊಂದು. ತಮ್ಮ ತ್ಯಾಗದಿಂದಲೇ ಅಮರರಾದ ಇಂತಹ ಧೀರೋದ್ದಾತ್ತರನ್ನು ಅನುದಿನವು ನೆನೆಯಬೇಕಾದುದು ಪ್ರತಿಯೊಬ್ಬ ಭಾರತೀಯನ ನಿತ್ಯಕರ್ತವ್ಯವಾಗಿದೆ.

# ‘ಎಲ್ಲರಿಗೂ ಭೂಮಿ ಹಕ್ಕು ಸಿಗಬೇಕು ಇದು ನನ್ನ ಗುರಿ ಮತ್ತು ಹೋರಾಟ’

## ಕಾಗೋಡು ತಿಮ್ಮಪ್ಪ



ಕಂದಾಯ ಇಲಾಖೆ ಎಲ್ಲ ಇಲಾಖೆಗಳಿಗೂ ತಾಯಿ ಇದ್ದಂತೆ. ಈ ಇಲಾಖೆ ಸರಿಹೋದರೆ ಎಲ್ಲವೂ ಸರಿಹೋಗುತ್ತದೆ ಎಂದು ನಂಬಿದ್ದೇನೆ. ಅದಕ್ಕಾಗಿ ಆಡಳಿತವನ್ನು ಬಿಗಿಮಾಡಿ ಚುರುಕುಗೊಳಿಸಬೇಕಿದೆ. ರೈತರೂ ಸೇರಿದಂತೆ ಹಲವರ ಸಮಸ್ಯೆಗಳು ಈ ಇಲಾಖೆಯಲ್ಲಿದ್ದು ಕಾಲಮಿತಿಯಲ್ಲಿ ಈ ಎಲ್ಲ ಬಾಕಿ ಕೆಲಸಗಳನ್ನು ಪೂರ್ಣಗೊಳಿಸುವ ಇರಾದೆ ನಮ್ಮದು. ಕೆಲಸ ಮಾಡದ ಜಡ್ಡುಗಟ್ಟಿದ ಅಧಿಕಾರಿಗಳನ್ನು ಸುಮ್ಮನೆ ಬಿಡುವವನೂ ನಾನಲ್ಲ.

▪ ಹಿಮಂತರಾಜು ಜಿ.
ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಪ್ರ**ತಿಯೊಬ್ಬರಿಗೂ ಭೂಮಿ ಹಕ್ಕು ಸಿಗಬೇಕು. ಇದು ನನ್ನ ಗುರಿ ಮತ್ತು ಹೋರಾಟ. ಇದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರ ಸ್ಪಷ್ಟ ನುಡಿ.

ಭೂಮಾಲೀಕರ ಅನ್ಯಾಯವನ್ನು ಮೆಟ್ಟಿನಿಂತು ಗೇಣಿದಾರರಿಗೆ ನ್ಯಾಯ ಕೊಡಿಸಲು ಹುಟ್ಟಿದ ಭೂ ಹಕ್ಕಿನ ಹೋರಾಟದ ಕಿಡಿ ಕಾಗೋಡು ಚಳವಳಿ. ಸಮಾಜವಾದಿ ರಾಮ್ ಮನೋಹರ ಲೋಹಿಯಾ ಅವರೂ ಕಾಗೋಡು ಹೋರಾಟದ ವಿಷಯ ತಿಳಿದು ಖುದ್ದು ಕಾಗೋಡಿಗೆ ಭೇಟಿಯಾಗಿದ್ದರು. ಇಂತಹ ಒಂದು ಶ್ರೇಷ್ಠ ಸಾಮಾಜಿಕ ನ್ಯಾಯದ ಚಳವಳಿ ಮೂಲಕವೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಕಾಗೋಡು ತಿಮ್ಮಪ್ಪ ಅವರು ಸಮಾಜವಾದಿ ಚಿಂತನೆಯ ನೆಲೆಗಟ್ಟಿನಲ್ಲಿ ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ಸದಾ ಹೋರಾಟ ನಡೆಸುತ್ತಲೇ ಬಂದವರು.

ಅಜ್ಞಾನ, ಅವೈಜ್ಞಾನಿಕತೆ, ಮೂಢನಂಬಿಕೆಗಳ ಬಗ್ಗೆ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಮುಲಾಜಿಲ್ಲದೆ ಕಟುವಾಗಿ ಮಾತನಾಡುವ ಅವರು, ಭೂಮಿ ವಿಚಾರದ ಅನ್ಯಾಯಗಳು ಕಂಡಾಗ ಸಿಡಿದೇಳುವ ಮನೋಭಾವ ಹೊಂದಿದವರು. ಭೂಮಿ ಹಕ್ಕಿನಿಂದ ಜನರು ಎಂದಿಗೂ ವಂಚಿತರಾಗಬಾರದು. ಸಾಮಾಜಿಕವಾಗಿ ಅವರಿಗೆ ಸಿಗಬೇಕಿರುವ ನ್ಯಾಯ ಸಿಗಬೇಕು ಎಂದು ಯಾವಾಗಲೂ ಪ್ರತಿಪಾದಿಸುತ್ತಾ ಬಂದವರು. ವಿಧಾನಸಭೆ ಒಳಗೆ ಹೊರಗೆ, ಅಂದಿನಿಂದ ಇಂದಿನವರೆಗೂ ರೈತರೂ, ಬಡವರು, ಸೌಲಭ್ಯ ವಂಚಿತರು, ಸಾಮಾಜಿಕವಾಗಿ ಶೋಷಣೆಗೊಳಗಾದವರ ಬಗ್ಗೆ ಸದಾ ತುಡಿಯುವ ಕಾಗೋಡು ತಿಮ್ಮಪ್ಪ ಅವರು ಈ ಹಿಂದಿನ ಹಲವು ಸರ್ಕಾರಗಳಲ್ಲಿ ಹಲವು ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿ ಪ್ರಸಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಸಚಿವ ಸಂಪುಟ ಸೇರಿದ್ದಾರೆ.

ಸಚಿವ ಸಂಪುಟದ ಪ್ರಮುಖ ಖಾತೆಗಳಲ್ಲಿ ಒಂದಾದ ಕಂದಾಯ ಇಲಾಖೆ ಸಚಿವರಾಗಿ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಶಿವಮೊಗ್ಗ ಜಿಲ್ಲೆಗೆ ಆಗಮಿಸಿದ್ದ ಕಾಗೋಡು ತಿಮ್ಮಪ್ಪ ಅವರು ತಮ್ಮ ಅಧಿಕಾರವಧಿಯ ದಿನಗಳಲ್ಲಿ ರಾಜ್ಯದ ಜನತೆಗೆ ಆಗಲೇಬೇಕಿರುವ ಪ್ರಮುಖ ಕಾರ್ಯಗಳ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ ಮತ್ತು ಅವುಗಳನ್ನು ಮಾಡಿಯೇ ತೀರುವ ಭರವಸೆಯನ್ನೂ ನಾಡಿನ ಜನತೆಗೆ ಅವರು ನೀಡಿದ್ದಾರೆ.

‘ಭೂಮಿ ಇರೋದು ಕೇವಲ ಹಂದಿಗಳಿಗೋ, ನಾಯಿಗಳಿಗೋ, ಕೋಳಿಗಳಿಗೋ ವಾಸ ಮಾಡಲಿಕ್ಕಲ್ಲ. ಮನುಷ್ಯನಿಗಾಗಿ. ಪ್ರತಿಯೊಬ್ಬರಿಗೂ ಭೂಮಿಯ ಹಕ್ಕು ಸಿಗಬೇಕು. ಇದು ತಮ್ಮ ಗುರಿ ಹಾಗೂ ಹೋರಾಟ.

ಮಂತ್ರಿ ಸ್ಥಾನವನ್ನು ಎಂದಿಗೂ ಆಪೇಕ್ಷಿಸಿರಲಿಲ್ಲ. ಮುಖ್ಯಮಂತ್ರಿಗಳು ತಮ್ಮ ಮೇಲೆ ವಿಶ್ವಾಸವಿಟ್ಟು ಮಂತ್ರಿಸ್ಥಾನ ನೀಡಿದ್ದಾರೆ. ಜನರ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುತ್ತೇನೆ.





“ಸರ್ಕಾರಿ ಜಾಗಗಳಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರ ಮನೆಗಳನ್ನು ಉಚಿತವಾಗಿ ಸಕ್ರಮಗೊಳಿಸಲು ಚಿಂತನೆ ನಡೆಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ (94 ಸಿ) ಮತ್ತು ಪಟ್ಟಣ, ನಗರ ಪ್ರದೇಶಗಳಲ್ಲಿ (94 ಸಿಸಿ) ಮೂಲಕ ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಲಾಗುತ್ತಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉಚಿತವಾಗಿ ನೀಡುವುದರೊಂದಿಗೆ ಇತರೆ ಫಲಾನುಭವಿಗಳಿಗೆ ವಿಧಿಸಿರುವ ಶುಲ್ಕ ಕಡಿಮೆ ಮಾಡುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ”.

“ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡಿರುವವರ ಪೈಕಿ ಗ್ರಾಮೀಣ ಪ್ರದೇಶದಲ್ಲಿ 12ರಿಂದ 15 ಲಕ್ಷ ಮಂದಿ ಮತ್ತು ನಗರ, ಪಟ್ಟಣ ಪ್ರದೇಶಗಳಲ್ಲಿ ನಾಲ್ಕರಿಂದ ಐದು ಲಕ್ಷ ಮಂದಿಗೆ ಹಕ್ಕುಪತ್ರ ವಿತರಿಸಬೇಕಿದೆ. ಪ್ರಸ್ತುತ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಅಕ್ರಮ– ಸಕ್ರಮಕ್ಕೆ ವಿಧಿಸಿರುವ ಶುಲ್ಕ ದುಬಾರಿ ಎಂಬ ಮಾತು ಕೇಳಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಶುಲ್ಕ ಕಡಿಮೆ ಮಾಡುವುದರ ಜತೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉಚಿತವಾಗಿ ಹಕ್ಕುಪತ್ರ ವಿತರಿಸಲು ಚಿಂತನೆ ನಡೆಸಲಾಗಿದೆ”.

“ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಗ್ರಾಮ ಲೆಕ್ಕಿಗರು ತಮ್ಮ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರತೀ ಸರ್ವೆ ನಂಬರ್‌ಗಳ ಮನೆಯನ್ನೂ ಪಟ್ಟಿ ಮಾಡಬೇಕು. ಬಳಿಕ ಯಾರು ಹಕ್ಕು ಪತ್ರ ಪಡೆದಿಲ್ಲ ಎಂಬುದನ್ನು ಪರಿಶೀಲಿಸಿ ಹಕ್ಕುಪತ್ರ ಪಡೆಯದವರಿಗೆ ಅರ್ಜಿ ಸಲ್ಲಿಸುವಂತೆ ಸೂಚಿಸಬೇಕು. ಈ ಕುರಿತು ಎಲ್ಲ ಗ್ರಾಮ ಪಂಚಾಯತ್‌ಗಳಿಗೆ ಸೂಚನೆ ನೀಡಲಾಗಿದೆ”.

**– ಕಾಗೋಡು ತಿಮ್ಮಪ್ಪ**

ಪಾರಂಪರಿಕ ಅರಣ್ಯ ಹಕ್ಕು ಕಾಯಿದೆ ಬಂದು ಇಷ್ಟು ವರ್ಷಗಳಾದರೂ ಅರಣ್ಯವಾಸಿಗಳಿಗೆ ನ್ಯಾಯ ಸಿಕ್ಕಿಲ್ಲ. ಕಾಯ್ದೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಗೊಂದಲ ಮಾಡಲಾಗುತ್ತಿದೆ. ಅರಣ್ಯ ಹಕ್ಕು ಸಮಿತಿಯ ಮುಂದೆ ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಸುಮಾರು 78 ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಾಕಿ ಇವೆ. ಸಾವಿರಾರು ಅರ್ಜಿಗಳನ್ನು ವಜಾ ಮಾಡಲಾಗಿದೆ. ಇವುಗಳ ಇತ್ಯರ್ಥ ಆಗಬೇಕು. ನಿಜವಾದ ಫಲಾನುಭವಿಗಳಿಗೆ ಹಕ್ಕುಪತ್ರ ಸಿಗಬೇಕು, ಸಿಗುತ್ತದೆ. ಸರಿಯಾಗಿ ಕೆಲಸ ಮಾಡದ ಸಮಿತಿಗಳನ್ನು ಬದಲಾಯಿಸುವಂತೆ ಸೂಚಿಸಲಾಗಿದೆ.


ಇನ್ನು ಸರ್ಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡು ವಾಸಮಾಡುತ್ತಿರುವ ಜನ ಎಲ್ಲಿಗೆ ಹೋಗಬೇಕು. ಅವರ ತಾತ ಮುತ್ತಾತರಿಂದಲೂ ಅಲ್ಲಿಯೇ ವಾಸವಾಗಿದ್ದಾರೆ. ಆದರೆ ಅವರಿಗೆ ಹಕ್ಕುಪತ್ರ ಇಲ್ಲ. ವಿಪರ್ಯಾಸ ಅಂದರೆ ನಮ್ಮ ಊರಿನ ಮನೆ ಕೂಡ ಸರ್ಕಾರಿ ಭೂಮಿಯಲ್ಲಿಯೇ ಇದೆ. ಇದು ಅವೈಜ್ಞಾನಿಕ ಮತ್ತು ಅಸಂಬದ್ಧ. ಈ ಕೂಡಲೇ ಇದು ಬಗೆಹರಿಯಬೇಕು. ಗ್ರಾಮಾಂತರ ಪ್ರದೇಶದ ಎಲ್ಲರಿಗೂ ಗರಿಷ್ಠ 50/80 ಅಡಿ ಅಳತೆವರೆಗೂ 94ಸಿ ಅಡಿಯಲ್ಲಿ ಅಕ್ರಮ ಸಕ್ರಮ ಆಗಬೇಕು. ನಗರವಾಸಿಗಳ ಮನೆಗಳೂ ಕೂಡ 94ಸಿಸಿ ಅಡಿಯಲ್ಲಿ ಸಕ್ರಮವಾಗಬೇಕು. ಈಗಾಗಲೇ ಆದೇಶ ಹೊರಡಿಸಲಾಗಿದ್ದು ಮುಂದಿನ ಮೂರು ತಿಂಗಳಲ್ಲಿ ರಾಜ್ಯಾದ್ಯಂತ ಈ ಸಮಸ್ಯೆ ಬಗೆಹರಿಸಲು ಸಂಕಲ್ಪ ಮಾಡಲಾಗಿದೆ. ಅಂತೆಯೇ ದಂಡ ಮೊತ್ತವನ್ನೂ ಕಡಿಮೆಗೊಳಿಸುವ ಚಿಂತನೆ ಇದೆ. ಆದ್ದರಿಂದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳಿಗೆ ಮನೆಮನೆಗೆ ಹೋಗಿ ನೀವೇ ಅರ್ಜಿಗಳನ್ನು ಪಡೆಯಿರಿ ಎಂದು ಸೂಚನೆ ನೀಡಿದ್ದೇನೆ.

ಈ ದೇಶದಲ್ಲಿ ರೈತನಿಗೆ ಅನ್ಯಾಯವಾದರೆ ಯಾರಿಗೂ ಶ್ರೇಯಸ್ಸು ಇಲ್ಲ. ಬಗರ್‌ಹುಕುಂ ಸಾಗುವಳಿದಾರರಿಗೆ ಮಂಜೂರಾತಿ ನೀಡಬೇಕು. ರೈತರಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು. ಅದಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಇವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. ರಾಜ್ಯಾದ್ಯಂತ ಪಕ್ಕಪೋಡಿಯದ್ದೇ ಪ್ರಮುಖ ಸಮಸ್ಯೆ. ಸಾಮೂಹಿಕ ಮತ್ತು ವೈಯಕ್ತಿಕ ಪಕ್ಕ ಪೋಡಿಯ ಸುಮಾರು 15 ಲಕ್ಷದಷ್ಟು ಅರ್ಜಿಗಳು ಬಾಕಿ ಇವೆ. ಈವರೆಗೆ ಪಕ್ಕಪೋಡಿ ದುರಸ್ಥಿಯ ಹೊಣೆ ಉಪ ವಿಭಾಗಧಿಕಾರಿಗಿತ್ತು. ಇದು ಬೇಡ ಎಂದು ಈಗ ತಹಸೀಲ್ದಾರರಿಗೆ ಅಧಿಕಾರವನ್ನು ನೀಡಲಾಗಿದೆ. ಇನ್ನು ವೈಯಕ್ತಿಕ ಪಕ್ಕಪೋಡಿ ಕೆಲಸಗಳು ಸುಗಮವಾಗಿ ಆಗಲಿವೆ.

ಕಂದಾಯ ಇಲಾಖೆ ಎಲ್ಲ ಇಲಾಖೆಗಳಿಗೂ ತಾಯಿ ಇದ್ದಂತೆ. ಈ ಇಲಾಖೆ ಸರಿಹೋದರೆ ಎಲ್ಲವೂ ಸರಿಹೋಗುತ್ತದೆ ಎಂದು ನಂಬಿದ್ದೇನೆ. ಅದಕ್ಕಾಗಿ ಆಡಳಿತವನ್ನು ಬಿಗಿಮಾಡಿ ಚುರುಕುಗೊಳಿಸಬೇಕಿದೆ. ರೈತರೂ ಸೇರಿದಂತೆ ಹಲವರ ಸಮಸ್ಯೆಗಳು ಈ ಇಲಾಖೆಯಲ್ಲಿದ್ದು ಕಾಲಮಿತಿಯಲ್ಲಿ ಈ ಎಲ್ಲ ಬಾಕಿ ಕೆಲಸಗಳನ್ನು ಪೂರ್ಣಗೊಳಿಸುವ ಇರಾದೆ ನಮ್ಮದು. ಕೆಲಸ ಮಾಡದ ಜಡ್ಡುಗಟ್ಟಿದ ಅಧಿಕಾರಿಗಳನ್ನು ಸುಮ್ಮನೆ ಬಿಡುವವನೂ ನಾನಲ್ಲ.

ಇಷ್ಟುದಿನ ಸಭಾಧ್ಯಕ್ಷ ಸ್ಥಾನದಲ್ಲಿ ಕುಳಿತು ಹೇಳುತ್ತಿದ್ದೆ ಈಗ ಮಾಡಿ ತೋರಿಸಬೇಕಿದೆ. ಜೇಬಿನಲ್ಲಿ ಹಣ ಇಟ್ಟುಕೊಂಡು ರಾಜಕಾರಣ ಮಾಡುವ ವ್ಯಕ್ತಿ ನಾನಲ್ಲ. ಶುದ್ಧ ರಾಜಕಾರಣ ಮಾಡುವ ಜವಾಬ್ದಾರಿ ನನ್ನ ಮೇಲಿದೆ. ಈ ಅವಧಿಯಲ್ಲಿ ರಾಜ್ಯದ ಜನಸಾಮಾನ್ಯರಿಗೆ ಸರ್ಕಾರದಿಂದ ಏನು ಸಿಗಬೇಕು ಅದು ಸಿಗಲಿದೆ. ಸರ್ಕಾರದ ಯೋಜನೆಗಳನ್ನು ಅವರಿಗೆ ಮುಟ್ಟಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಒಟ್ಟಾರೆ ಹೋರಾಟವನ್ನೇ ಮೈಗೂಡಿಸಿಕೊಂಡು ಬಂದಿರುವ ನಮಗೆ ಭೂಮಿ ಹಕ್ಕು ಪ್ರಮುಖ ವಿಷಯ. ಪಾರಂಪರಿಕ ಅರಣ್ಯ ಹಕ್ಕು ಕಾಯ್ದೆ, ಬಗರ್‌ಹುಕುಂ, ಅಕ್ರಮ ಸಕ್ರಮ ವಿಷಯಗಳು ಹೋರಾಟದ ಭೂಮಿ ಶಿವಮೊಗ್ಗ ಜಿಲ್ಲೆಯ ಮೂಲಕವೇ ಮಾದರಿಯಾಗಬೇಕು. ಅದರಂತೆ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ಅವರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ನಡೆದುಕೊಳ್ಳುತ್ತೇನೆ ಎಂಬ ವಿಶ್ವಾಸ ನಮ್ಮದು. ■

# ಗಡಿಭಾಗದ ಪೆದ್ದೂರಿನಲ್ಲಿ



## ಜಾನಪದ ಸಂಭ್ರಮ

▪ ಸಿ. ಎ. ರಮೇಶ್

**'ಪೆ**ದ್ದೂರು' – ಚಿಂತಾಮಣಿ ತಾಲ್ಲೂಕಿನ ಗಡಿಭಾಗದ ಹಳ್ಳಿ. ಈ ಹಳ್ಳಿಯಲ್ಲಿ ನಡೆಯಿತು. ಒಂದು ಜಾನಪದ ಸಂಭ್ರಮ. ಸಂಭ್ರಮವೆಂದರೆ ಅಂತಿಂಥ ಸಂಭ್ರಮವಲ್ಲ. ನಾಡಿನ ಮೂಲೆ ಮೂಲೆಗಳ ಸಾಂಸ್ಕೃತಿಕ ತಂಡಗಳು ಇಲ್ಲಿಗೆ ಆಗಮಿಸಿ ತಮ್ಮೂರಿನ ಜಾನಪದ ಸೊಗಡನ್ನು ಹರಡಿ ಹೋದವು. ಭಾಗವಹಿಸಿ, ಹಿಂತಿರುಗಿದ ಬಳಿಕವೂ ಒಂದು ಜನಪದದ ಗುಂಗನ್ನು ತಲೆಯಲ್ಲಿ ಬಿತ್ತಿದ್ದವು.

ಡೊಳ್ಳುಕುಣಿತ, ವೀರಗಾಸೆ, ತೊಗಲು ಬೊಂಬೆಯಾಟ, ತಮಟೆ ವಾದನ, ಜನಪದ ಗಾಯನ, ಪೌರಾಣಿಕ ವೇಷ ಒಂದೇ ಎರಡೇ.. ಬಾಲ್ಯದಲ್ಲಿ ಎಲ್ಲೋ ನೋಡಿದಂತಿರುವ; ಮರೆತಂತಾಗಿರುವ ಅಥವಾ ಮರೆತುಹೋಗುತ್ತಿರುವ ಎಲ್ಲ ಕಲೆಗಳ ಸಂಭ್ರಮ ಅಲ್ಲಿತ್ತು..

ಈ ಸಂಭ್ರಮದ ಕಾರಣಕರ್ತರಲ್ಲೊಬ್ಬರಾದ ಚಿಂತಾಮಣಿ ತಾಲೂಕಿನ ಪೆದ್ದೂರು ಗ್ರಾಮದ ನಿವಾಸಿ ಹಾಗೂ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡರು, ಒಡೆದ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸ, ಕಲೆಯ ಮೂಲಕ ಒಗಟ್ಟು, ಸಾಮರಸ್ಯ ಮೂಡಿಸುವ ಕೆಲಸ ಇದೆಂದರು.

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ದೂರದರ್ಶನ ಕೇಂದ್ರ ನವದೆಹಲಿ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಚಿಂತಾಮಣಿ ತಾಲ್ಲೂಕಿನ ಪೆದ್ದೂರಿನಲ್ಲಿ ಎರಡು ದಿನಗಳ ಕಾಲ ನಡೆದ ಈ ಕಾರ್ಯಕ್ರಮ ಬಹುಕಾಲ ನೆನಪಿಟ್ಟುಕೊಳ್ಳುವಂತಹ ಐತಿಹಾಸಿಕ ಕಾರ್ಯಕ್ರಮವಾಗಿದ್ದು ವಿಶೇಷ.

ಜಾನಪದ ಸಂಭ್ರಮಕ್ಕಾಗಿಯೇ ಪೆದ್ದೂರು ಗ್ರಾಮದಲ್ಲಿ ಸುಮಾರು ಐದು ಎಕರೆ ಪ್ರದೇಶದಲ್ಲಿ ಬೃಹದಾಕಾರದ ಸಭಾಂಗಣ ಮತ್ತು ವೇದಿಕೆಯನ್ನು ಸಿದ್ದಪಡಿಸಲಾಗಿತ್ತು. 50–80 ವಿಸ್ತೀರ್ಣದ ಬೃಹತ್ ವೇದಿಕೆ ನಿರ್ಮಾಣದ ಜೊತೆಗೆ ಈ ಸಭಾಂಗಣದಲ್ಲಿ ಮುಖ್ಯ ಅತಿಥಿಗಳು, ಗಣ್ಯಾತಿಗಣ್ಯರಿಗೆ ವಿಶೇಷ ವೇದಿಕೆಯನ್ನು ಕಲ್ಪಿಸಿದ್ದು ವಿಶೇಷ.

ಮೊದಲ ದಿನದಂದು ಸಂಜೆ ಹಮ್ಮಿಕೊಂಡಿದ್ದ ವಿಶೇಷ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೈಸೂರಿನ ಪ್ರೊ.ಎಂ.ಕೃಷ್ಣೇಗೌಡರಿಂದ ಜನಪದ ಹಾಸ್ಯ, ಚಿಕ್ಕಬಳ್ಳಾಪುರದ ಪಿಂಡಪಾಪನಹಳ್ಳಿ ಮುನಿವೆಂಕಟಪ್ಪ ಮತ್ತು ತಂಡದಿಂದ ತಮಟೆ








ವಾದನ, ಹಾಸನ ಶಕನಯ್ಯ ಮತ್ತು ತಂಡದಿಂದ ಚಿಟ್ಟಿಮೇಳ, ಡಾ. ವೇಮಗಲ್ ನಾರಾಯಣಸ್ವಾಮಿ ಮತ್ತು ತಂಡದಿಂದ ಜನಪದ ಗಾಯನ.

ಉತ್ತರ ಕನ್ನಡ ಜಿಲ್ಲೆಯ ಜೂಲಿಯಾಸ್ ಪೆರ್ದು ಫೆರ್ನಾಂಡೀಸ್ ಮತ್ತು ತಂಡದಿಂದ ನೃತ್ಯಪ್ರದರ್ಶನ ಸಿದ್ದಿನೃತ್ಯ, ರಾಯಚೂರು ಲಂಕ್ಕೆ ಭಜಂತ್ರಿ ಮತ್ತು ತಂಡದಿಂದ ಕಣಿ ವಾದನ, ಬೆಂಗಳೂರು ಸವಿತಾ ಗಣೇಶ್ ಪ್ರಸಾದ್ ಮತ್ತು ತಂಡದಿಂದ ಜನಪದ ಗಾಯನ, ಶಿವಮೊಗ್ಗ ಟಿ.ಟಾಕಪ್ಪ ಮತ್ತು ತಂಡದಿಂದ ಡೊಳ್ಳುಕುಣಿತ, ಚಿಕ್ಕಮಗಳೂರು ಎಲ್.ಎಂ.ಶ್ವೇತಾ ಮತ್ತು ತಂಡದಿಂದ ಮಹಿಳಾ ವೀರಗಾಸೆ, ಅಂಗವಾಲ ಮತ್ತು ತಂಡದಿಂದ ಮಣಿಪುರಿ ನೃತ್ಯ, ಬೆಂಗಳೂರು ವಕೀಲರ ತಂಡದಿಂದ ಜನಪದ ಗಾಯನ ಮತ್ತು ಚಿಂತಾಮಣಿ ತಾಲೂಕಿನ







ಬೊಮ್ಮಲಾಟಪುರದ ಶಂಕರಪ್ಪ ಮತ್ತು ತಂಡದಿಂದ ತೊಗಲು ಬೊಂಬೆಯಾಟವನ್ನು ಏರ್ಪಡಿಸಲಾಗಿತ್ತು

ಎರಡನೇ ದಿನದಂದು ಗ್ರಾಮೀಣ ಕ್ರೀಡೆಗಳು ನಡೆಯಿತು. ನಂತರ ಚಿಕ್ಕಬಳ್ಳಾಪುರ ಗಾ.ನಾ.ಅಶ್ವಥ್ ಮತ್ತು ತಂಡದಿಂದ ಜನಪದ ಗಾಯನ, ಕೋಲಾರ ರವಿ ದೊಡ್ಡಲೆ ಮತ್ತು ತಂಡದಿಂದ ಜನಪದ ಗಾಯ, ಚಿಂತಾಮಣಿಯ ಮುನಿರೆಡ್ಡಿ ಮತ್ತು ತಂಡದಿಂದ ಪೌರಾಣಿಕ ವೇಷ, ಕೋಲಾರದ ಡಿ.ಅರ್.ರಾಜಪ್ಪ ಮತ್ತು ತಂಡದಿಂದ ಜನಪದ ಗಾಯನ ನಂತರ ಕೈವಾರದ ಬಾಲಕೃಷ್ಣ ಭಾಗವತ್ತರು ಮತ್ತು ತಂಡದಿಂದ ಕೈವಾರದ ತಾತನ ತತ್ವಪದಗಳ ಗಾಯನ ನಡೆಯಿತು.

ಬೆಳಗಾವಿ ಸಿದ್ದುಮೋಟೆ ಮತ್ತು ತಂಡದಿಂದ ಡೊಳ್ಳಿನ ಪದಗಳು, ಮಂಡ್ಯ ಸವಿತಾ ಚಿರುಕುನ್ನಯ್ಯ ಮತ್ತು ತಂಡದಿಂದ ಮಹಿಳಾ ಪ್ರಜಾ ಕುಣಿತ, ಬೆಂಗಳೂರಿನ ಕು:ಗೌತಮಿ ರವರಿಂದ ಜನಪದ ಗಾಯನ, ಮೈಸೂರು ಸಿ. ಮಂಜುನಾಥ ಮತ್ತು ತಂಡದಿಂದ ನಗಾರಿ ಗಾಯನ, ದೊಡ್ಡಬಳ್ಳಾಪುರ ನಿರ್ಮಲಾ ಶಾಸ್ತ್ರೀ ಮತ್ತು ತಂಡದಿಂದ ಜನಪದ ಗಾಯನಗಳು ಸೊಗಸಾಗಿ ಮೂಡಿಬಂದು ನೋಡುಗರನ್ನು, ಕೇಳುಗರನ್ನು ಜನಪದ ಲೋಕಕ್ಕೆ ಕೊಂಡೊಯ್ದವು.

ಉಡುಪಿ ಜೀವನ್ ಮತ್ತು ತಂಡದಿಂದ ಕಂಗೀಲು ನೃತ್ಯ, ಗದಗ ಶಂಕರಣ್ಣ ಮತ್ತು ತಂಡದಿಂದ ಜೋಗತಿ ನೃತ್ಯ, ಬೆಂಗಳೂರು ವಕೀಲರ ತಂಡದಿಂದ ಜನಪದ ಗಾಯನ, ಬಳ್ಳಾರಿ ಅಶ್ವರಾಮಣ್ಣ ಮತ್ತು ತಂಡದಿಂದ ಹಗಲು ವೇಷ ಮತ್ತು ಧಾರವಾಡ ವಸಂತ ನಾರಾಯಣರಣ್ಣವರೆ ಮತ್ತು ತಂಡದಿಂದ ಜಗ್ಗಲಿಗೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು.

**ಅದ್ದೂರಿ ಜಾನಪದ ಮೆರವಣಿಗೆ**

ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದಿಂದ ಜನಪದ ಸಮಾರಂಭ ನಡೆಯುವ ಕಾರ್ಯಕ್ರಮದ ವೇದಿಕೆಯವರೆಗೂ ಅದ್ದೂರಿ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಮೆರವಣಿಗೆಯಲ್ಲಿ ಅವಿಭಜಿತ ಎರಡು ಜಿಲ್ಲೆಗಳು ಸೇರಿದಂತೆ

**ಭಾರತ ದೇಶ ಕಲೆ, ಸಂಸ್ಕೃತಿ, ಮತ್ತು ಜಾನಪದ ಕಲೆಗಳಿಂದ ಸಮೃದ್ಧವಾಗಿರುವ ದೇಶ. ಇತ್ತೀಚೆಗೆ ಅದು ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಗಡಿಭಾಗದಲ್ಲಿ ಮಾಯವಾಗುತ್ತಿದ್ದು ಅದನ್ನು ಮರುಕಳಿಸಲು ಒಂದು ಜನಪದ ಹಬ್ಬದ ಅವಶ್ಯಕತೆ ಇದೆ ಎನಿಸಿದ ಹಿನ್ನೆಲೆಯಲ್ಲಿ ಇಂತದೊಂದು ಜನಪದ ಮೇಳ ಆಯೋಜಿಸಲಾಗಿದೆ. ರಾಜ್ಯದ 30 ಜಿಲ್ಲೆಗಳ ಕಲಾವಿದರು ಇದರಲ್ಲಿ ಭಾಗವಹಿಸುತ್ತಿರುವುದು ವಿಶೇಷ. ಈ ಕಾರ್ಯಕ್ರಮವನ್ನು ದೇಶಾದಾದ್ಯಂತ ಸೇರಿದಂತೆ 58 ದೇಶಗಳಲ್ಲಿ ದೂರದರ್ಶನ ಮೂಲಕ ನೇರಪ್ರಸಾರ ಮಾಡಿದ್ದು ಮತ್ತಷ್ಟು ಸಂತಸ ತಂದಿದೆ.**

**ವಿ. ಗೋಪಾಲಗೌಡ**
ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳು







ವಿವಿಧ ಜಿಲ್ಲೆಗಳ ಹಾಗೂ ಪೆದ್ದೂರು ಗ್ರಾಮದ 101 ತಮಟೆ ಕಲಾವಿದರು, ಹುಲಿ ವೇಷಗಾರರು, ಪಂಡರಿ ಭಜನೆ, ಸೇರಿದಂತೆ ವಿವಿಧ ಜನಪದ ಕಲಾತಂಡಗಳ ಮೆರವಣಿಗೆ ಅದ್ದೂರಿಯಾಗಿ ಸಾಗಿದ್ದು ವಿಶೇಷವಾಗಿತ್ತು.

ಮೆರವಣಿಗೆಯಲ್ಲಿ ಮಂಗಳವಾದ್ಯ ತಂಡ, ಕಳಶ ಹೊತ್ತ ಮಹಿಳೆಯರು, ಚೆಂಡ ಕಹಳೆ, ವೀರಗಾಸೆಗಾರರ ವೀರಭದ್ರ ಕುಣಿತ, ಡೊಳ್ಳು ಕುಣಿತದವರ ಕಂಗೀಲು ನೃತ್ಯ, ಜೋಗತಿ ನೃತ್ಯ, ಪೂಜಾ ಕುಣಿತದವರು, ಕಂಸಾಳೆ ನೃತ್ಯ, ಗಾರುಡಿಗೊಂಬೆ, ಮರದ ಕಾಲಿನ ಕಲಾವಿದರು, ಸೇರಿದಂತೆ ಹಲವಾರು ಮಂದಿ ಮೆರವಣಿಗೆಯಲ್ಲಿ ವಿಶೇಷ ನೃತ್ಯಪ್ರದರ್ಶನವನ್ನು ಪ್ರದರ್ಶಿಸಿದರು.

**ಎತ್ತಿನ ಬಂಡಿ ಏರಿದ ಗಣ್ಯರು**

ವಿಶೇಷ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರವಣೆಗೆಯಲ್ಲಿ ಭಾಗವಹಿಸಿದ್ದ ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿ ವಿ.ಗೋಪಾಲಗೌಡ, ಕರ್ನಾಟಕ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್, ಕ್ಷೇತ್ರದ ಶಾಸಕ ಜೆ.ಕೆ. ಕೃಷ್ಣಾರೆಡ್ಡಿ, ನಿಡುಮಾಮಿಡಿ ಮಠದ ಚನ್ನಮಲ್ಲ ವೀರಭಧ್ರ ಸ್ವಾಮೀಜಿ ಸೇರಿದಂತೆ ಹಲವು ಗಣ್ಯರು ಅಲಂಕೃತ ಎತ್ತಿನ ಬಂಡಿ ಏರಿ ವೇದಿಕೆಯವರೆವಿಗೂ ಮೆರವಣೆಗೆಯಲ್ಲಿ ಸಾಗಿದ್ದು ವಿಶೇಷವಾಗಿತ್ತು.

**ಮನಸೆಳೆದ ವಿವಿಧ ವಸ್ತುಪ್ರದರ್ಶನ**

ಸಮಾರಂಭದ ವೇದಿಕೆಯ ಮುಂಭಾಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ವಿಶೇಷ ಜಾನಪದ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಜಾನಪದ ಮಳಿಗೆಯಲ್ಲಿ ಹಳೇ ಕೃಷಿ ಸಾಮಾಗ್ರಿಗಳ ಪ್ರದರ್ಶನ ವಿಶೇಷವಾಗಿತ್ತು. ಹಳೇ ನೇಗಿಲು, ಬಾವಿಗಳಲ್ಲಿ ನೀರು ಎತ್ತುವ ವಿವಿಧ ಸಾಮಾಗ್ರಿಗಳು, ಮೀನು ಹಿಡಿಯುವ ಸಲಕರಣೆಗಳು. ರಾಗಿ ಬೀಸುವ ಕಲ್ಲುಗಳು, ಹಳೇ ಪಾತ್ರೆ ಸಾಮಾನುಗಳ ಪ್ರದರ್ಶವನ್ನು ಏರ್ಪಡಿಸಲಾಗಿತ್ತು. ಹಲವು ಮಳಿಗೆಗಳಲ್ಲಿ ವಿವಿಧ ಜಾನಪದ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಿ ಜನಮನ ಸೆಳೆಯಲಾಯಿತು.

**ಮುಖ್ಯಮಂತ್ರಿಗಳಿಂದ ಉದ್ಘಾಟನೆ**

ಜಾನಪದ ಸಂಭ್ರಮದ ಉದ್ಘಾಟನೆಯನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯ ಅವರು ನೆರವೇರಿಸಿದರು. ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿ.ಗೋಪಾಲಗೌಡರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದು ಕಾರ್ಯಕ್ರಮದ ಆಶಯದ ನುಡಿಗಳನ್ನು ರಾಜ್ಯ ಹೈಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳಾದ ಹೆಚ್.ಎನ್.ನಾಗಮೋಹನದಾಸ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಅರ್‌ವಿ.ದೇಶಪಾಂಡೆ, ರಮೇಶ್‌ಕುಮಾರ್, ವಿಧಾನಪರಿಷತ್ ಸದಸ್ಯರಾದ ವೈ.ಎ.ನಾರಾಯಣಸ್ವಾಮಿ, ತೂಪಲ್ಲಿ ಚೌಡರೆಡ್ಡಿ, ಚಿಕ್ಕಬಳ್ಳಾಪುರ ಶಾಸಕ ಸುಧಾಕರ್, ಚಿಂತಾಮಣಿ ಕ್ಷೇತ್ರದ ಶಾಸಕ ಜೆ.ಕೆ ಕೃಷ್ಣಾರೆಡ್ಡಿ, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ, ವಾರ್ತಾ ಇಲಾಖೆಯ ನಿರ್ದೇಶಕರಾದ ವಿಶುಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ದಯಾನಂದ್, ದೂರದರ್ಶನದ ಹೆಚ್ಚುವರಿ ನಿದೇಶಕರಾದ ಮಹೇಶ್ ಜೋಷಿ ಸೇರಿದಂತೆ ಹಲವಾರು ಗಣ್ಯಾತಿ ಗಣ್ಯರು ರಾಜ್ಯ ಮತ್ತು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲಾ ಅಧಿಕಾರಿಗಳು ಹಾಜರಿದ್ದರು.

ಸಮಾರೋಪದ ಸಮಾರಂಭದಲ್ಲಿ ಸವೋಚ್ಛ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲ, ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡಮಿ ಅಧ್ಯಕ್ಷ ನಾಡೋಜ ಬೆಳಗಲ್ಲು ವೀರಣ್ಣ ಸೇರಿದಂತೆ ಹಲವಾರು ನ್ಯಾಯಾಧೀಶರು ಹಿರಿಯ ವಕೀಲರು ಭಾಗವಹಿಸಿದ್ದರು.

**ಇತಿಹಾಸ ಬದಲಿಸಬೇಕಾದರೆ; ಸಮಾಜದಲ್ಲಿ ಸುಧಾರಣೆ ತರಬೇಕಾದರೆ ಜನಪದ ಕಲೆ ಮತ್ತು ಸಂಸ್ಕೃತಿಯಿಂದ ಮಾತ್ರ ಸಾಧ್ಯ. ಜನಪದ ಕಲಾ ಪರಂಪರೆ ಹೊಸ ಭರವಸೆಯನ್ನು ಹುಟ್ಟುಹಾಕಿದೆ. ಜನಪದ ಕಲೆಗಳು ದೇಶದ ಸಂಸ್ಕೃತಿ, ದೇಶದ ಅಂತಃಸತ್ವದ ಪ್ರತೀಕವೆನಿಸಿದ್ದು ಜಾಗತಿಕ ಮಟ್ಟದಲ್ಲಿ ಭಾರತೀಯ ಕಲೆ, ಸಂಸ್ಕೃತಿಗೆ ಹೆಚ್ಚಿನ ಮನ್ನಣೆ ದೊರೆಯುತ್ತಿದೆ.**

**ಎಂ. ಎನ್. ವೆಂಕಟಾಚಲಯ್ಯ**
ಸರ್ವೋಚ್ಛ ನ್ಯಾಯಾಲಯದ
ನಿವೃತ್ತ ಮುಖ್ಯ ನ್ಯಾಯಮೂರ್ತಿ



# 'ಗುಣಮಟ್ಟದ ಶಿಕ್ಷಣದಿಂದ ಮಾತ್ರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸವಾಲು ಎದುರಿಸಲು ಸಾಧ್ಯ'

## – ಬಸವರಾಜ ರಾಯರಡ್ಡಿ



**ರಾಜ್ಯದ ಹಿರಿಯ ಮುತ್ಸದ್ಧಿ ರಾಜಕಾರಣಿ, ಅಭಿವೃದ್ಧಿಪರ ಚಿಂತಕ ಎಂಬುದಾಗಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿರುವ, ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಖಾತೆ ನೂತನ ಸಚಿವರಾದ ಶ್ರೀ ಬಸವರಾಜ ರಾಯರಡ್ಡಿ ಅವರೊಂದಿಗೆ ಸಂದರ್ಶನ**

▪ ತುಕಾರಾಂ ಬಿ . ವಿ.
ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಪ್ರಶ್ನೆ : ಉನ್ನತ ಶಿಕ್ಷಣ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದೀರಿ. ಇಲಾಖೆಗೆ ಸಂಬಂಧಿಸಿದಂತೆ ತಾವು ಹೊಂದಿರುವ ಮಹತ್ವಾಕಾಂಕ್ಷೆ ಏನು ?**

**ಉತ್ತರ:** ಉನ್ನತ ಶಿಕ್ಷಣ ಇಲಾಖೆ ರಾಜ್ಯದ ಬಹು ದೊಡ್ಡ ಇಲಾಖೆ. ರಾಜ್ಯದ ಭವಿಷ್ಯವನ್ನು ರೂಪಿಸುವ ಯುವ ಪೀಳಿಗೆಯನ್ನು ಸಿದ್ಧಪಡಿಸಬೇಕಾದ ಮಹತ್ವದ ಹೊಣೆಗಾರಿಕೆ ಇಲಾಖೆಯ ಮೇಲಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ಈ ನಿಟ್ಟಿನಲ್ಲಿ ರಾಜ್ಯದ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ರೂಪಿಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದೇನೆ.

**ಪ್ರಶ್ನೆ :ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸಲು ತಾವು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳ ಬಗ್ಗೆ ತಿಳಿಸುವಿರಾ ?**

**ಉತ್ತರ:** ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲೇಬೇಕು ಎನ್ನುವುದು ನನ್ನ ಮೊದಲ ಗುರಿ. ಈ ನಿಟ್ಟಿನಲ್ಲಿ ಇದೇ ಆಗಸ್ಟ್ 01 ರಿಂದ ಎರಡು ದಿನಗಳ ಕಾಲ ರಾಜ್ಯದ ಎಲ್ಲ ವಿಶ್ವವಿದ್ಯಾಲಯ ಕುಲಪತಿಗಳ ಶೃಂಗಸಭೆ ಆಯೋಜಿಸಲಾಗುತ್ತಿದೆ. ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಶೃಂಗಸಭೆಯ ಉದ್ಘಾಟನೆ ನೆರವೇರಿಸಲಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಶೃಂಗಸಭೆಯ ಅಧ್ಯಕ್ಷತೆ ವಹಿಸುವರು. ಗುಣಮಟ್ಟದ ಶಿಕ್ಷಣ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಹಾಗೂ ಬೋಧಕರ ಹಿತದೃಷ್ಟಿಯಿಂದ ಅಗತ್ಯವಿರುವ ಮೂಲಭೂತ ಸೌಲಭ್ಯಗಳು, ಸಮಸ್ಯೆಗಳು ಮುಂತಾದ ವಿಷಯಗಳ ಕುರಿತು ಶೃಂಗಸಭೆಯಲ್ಲಿ ಸಮಗ್ರವಾಗಿ ಚರ್ಚೆ ನಡೆಸುವ ಉದ್ದೇಶ ಹೊಂದಲಾಗಿದೆ.

ಸದ್ಯ ರಾಜ್ಯದಲ್ಲಿನ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಇದೆ. ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರುಗಳ ಕೊರತೆ ಇದೆ. ಈ ಎಲ್ಲ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸರ್ಕಾರದ ಅನುದಾನದ ಜೊತೆಗೆ ವಿಶ್ವಬ್ಯಾಂಕಿನ ನೆರವು ಅಥವಾ ಇನ್ನಾವುದೇ ಮೂಲಗಳಿಂದ ಆರ್ಥಿಕ ನೆರವು ಪಡೆದು, ಸುಸಜ್ಜಿತ ಕಾಲೇಜು ಕಟ್ಟಡಗಳು, ಉನ್ನತ ಶಿಕ್ಷಣಕ್ಕೆ ಅಗತ್ಯವಿರುವ ಸೌಲಭ್ಯಗಳು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯೋಜಿಸಲಾಗಿದೆ. ಎಲ್ಲ ತಾಲೂಕು ಕೇಂದ್ರಗಳಲ್ಲಿ ಕಾಲೇಜು ವಿದ್ಯಾರ್ಥಿಗಳ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿ, ವಿದ್ಯಾರ್ಥಿಗಳ ಶಿಕ್ಷಣ ಸುಗಮಗೊಳಿಸಲು ಚಿಂತನೆ ನಡೆಸಲಾಗಿದೆ. ರಾಜ್ಯದಲ್ಲಿ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವ ನಿಟ್ಟಿನಲ್ಲಿ ಈಗಾಗಲೆ ಸಿದ್ಧತೆಗಳನ್ನು ಪ್ರಾರಂಭಿಸಲಾಗಿದೆ.

**ಪ್ರಶ್ನೆ : ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ರಾಜ್ಯದ ಭವಿಷ್ಯದ ಯುವ ಪೀಳಿಗೆಯನ್ನು ರೂಪಿಸಬೇಕು ಎಂಬ ಆಶಯ ವ್ಯಕ್ತಪಡಿಸಿದ್ದೀರಿ. ಈ ನಿಟ್ಟಿನಲ್ಲಿ ತಮ್ಮ ಯೋಜನೆಗಳೇನು ?**

**ಉತ್ತರ:** ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಾತ್ಮಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕಿದ್ದಲ್ಲಿ, ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ದೊರಕಿಸಬೇಕಿದೆ. ಈಗಾಗಲೆ ಐಟಿ, ಬಿಟಿ ಕ್ಷೇತ್ರದಲ್ಲಿ ನಮ್ಮ ರಾಜ್ಯವು ದೇಶದ ಗಮನ ಸೆಳೆದಿದೆ. ಅಷ್ಟೇ ಅಲ್ಲ, ಬ್ಯಾಂಕಿಂಗ್ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. ಅದಕ್ಕಾಗಿ ನಾವು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮಾದರಿಯಲ್ಲಿ, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಬೆಂಗಳೂರಿನಲ್ಲಿ ಶೀಘ್ರ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

**ಪ್ರಶ್ನೆ : ವಿದ್ಯಾರ್ಥಿಗಳ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಯಾವುದಾದರೂ ಹೊಸ ಕೋರ್ಸ್ ಆರಂಭಿಸಲು ಚಿಂತನೆ ನಡೆದಿದೆಯೇ ?**

**ಉತ್ತರ:** ನಮ್ಮ ರಾಜ್ಯದಲ್ಲಿ ಸದ್ಯ ಸಿವಿಲ್, ಮೆಕ್ಯಾನಿಕಲ್, ಕಂಪ್ಯೂಟರ್ ಸೈನ್ಸ್ ಸೇರಿದಂತೆ ಇಂಜಿನಿಯರಿಂಗ್‌ನಲ್ಲಿ ವಿವಿಧ ಕೋರ್ಸ್‌ಗಳು ಇವೆ. ದೇಶದಲ್ಲಿ ರೈಲ್ವೆ ಬಹುದೊಡ್ಡ ಕ್ಷೇತ್ರವಾಗಿದ್ದು, ಬಹುದೊಡ್ಡ ಸಂಪರ್ಕ ಜಾಲವನ್ನು ಹೊಂದಿದೆ. ರಾಜ್ಯಕ್ಕೂ ಇತ್ತೀಚೆಗೆ ರೈಲ್ವೆಗೆ ಸಂಬಂಧಿಸಿದ ಹೆಚ್ಚು, ಹೆಚ್ಚು ಬೃಹತ್ ಯೋಜನೆಗಳು ಬರುತ್ತಿವೆ. ಇದಕ್ಕೆ ಪೂರಕವಾಗಿ ನಮ್ಮಲ್ಲಿ ನಿರ್ದಿಷ್ಟವಾದ ರೈಲ್ವೆ ಇಂಜಿನಿಯರಿಂಗ್ ಕೋರ್ಸ್ ಇಲ್ಲ. ರೈಲ್ವೆ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿಗೆ ಅವಕಾಶವಿದೆ. ರಾಜ್ಯದ ಯುವ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಹಾಗೂ ತ್ವರಿತ ರೈಲ್ವೆ ಯೋಜನೆಗಳ ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ 3–4 ಕಡೆಗಳಲ್ಲಿ ರೈಲ್ವೆ ಇಂಜಿನಿಯರಿಂಗ್ ಕೋರ್ಸ್ ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಈಗಾಗಲೆ ಕೇಂದ್ರ ರೈಲ್ವೆ ಸಚಿವರೊಂದಿಗೆ ಚರ್ಚಿಸಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಲ್ಲದೆ ಇದಕ್ಕೆ ಅಗತ್ಯ ಸಹಾಯ ನೀಡಿ ಸಹಕರಿಸುವುದಾಗಿ ತಿಳಿಸಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ರೈಲ್ವೆ ಇಂಜಿನಿಯರಿಂಗ್ ಕೋರ್ಸ್ ಪ್ರಾರಂಭಿಸಲು ಪ್ರಾಮಾಣಿಕವಾಗಿ ಯತ್ನಿಸುತ್ತೇನೆ.


ಅದೇ ರೀತಿ ರಾಜ್ಯದಲ್ಲಿ ವೈಮಾನಿಕ ಕ್ಷೇತ್ರ ವ್ಯಾಪಕವಾಗಿ ಅಭಿವೃದ್ಧಿಯಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿಮಾನ ನಿಲ್ದಾಣಗಳು ನಿರ್ಮಾಣಗೊಂಡು, ವಿಮಾನಗಳ ಸಂಚಾರವೂ ಹೆಚ್ಚಾಗುವುದರಿಂದ ಪೈಲಟ್‌ಗಳ ಬೇಡಿಕೆಯೂ ಹೆಚ್ಚಾಗಲಿದೆ. ಇದಕ್ಕೆ ಪೂರಕವಾಗಿ ನಮ್ಮಲ್ಲಿ ವೈಮಾನಿಕ ತರಬೇತಿ ಕೋರ್ಸ್ ಅಥವಾ ಇಂಜಿನಿಯರಿಂಗ್ ಕೋರ್ಸ್ ಇಲ್ಲ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಹಯೋಗದಲ್ಲಿ, ನಮ್ಮ ರಾಜ್ಯದಲ್ಲಿಯೂ ಏರೋನಾಟಿಕಲ್ ಇಂಜಿನಿಯರಿಂಗ್ ಕೋರ್ಸ್ ಅನ್ನು ಬರುವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಬೇಕೆನ್ನುವ ನಿರೀಕ್ಷೆಯನ್ನಿಟ್ಟುಕೊಂಡು, ಕೆಲಸ ಪ್ರಾರಂಭಿಸುತ್ತೇನೆ.

**ಪ್ರಶ್ನೆ : ಪರೀಕ್ಷಾ ಪದ್ಧತಿಯಲ್ಲಿ ಏನಾದರೂ ಬದಲಾವಣೆ ತರುವ ಉದ್ದೇಶವಿದೆಯೇ ?**

**ಉತ್ತರ:** ಸದ್ಯ ರಾಜ್ಯದಲ್ಲಿ ಕಾಲೇಜುಗಳು, ವಿಶ್ವವಿದ್ಯಾಲಯಗಳ ಪರೀಕ್ಷಾ ಪದ್ಧತಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಇದರಿಂದಾಗಿ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಕೆಗೆ ತೊಂದರೆ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ಏಕರೂಪ ಪರೀಕ್ಷಾ ಪದ್ಧತಿ ತರಲು ಉದ್ದೇಶಿಸಲಾಗಿದೆ. ಎಲ್ಲ ಕಾಲೇಜು, ವಿಶ್ವವಿದ್ಯಾಲಯಗಳು ಪರೀಕ್ಷಾ ಫಲಿತಾಂಶವನ್ನು ಆಯಾ ಶೈಕ್ಷಣಿಕ ವರ್ಷದ ಮೇ. 31 ರೊಳಗೆ ಪ್ರಕಟಿಸುವುದನ್ನು ಕಡ್ಡಾಯ ಮಾಡಲಾಗುವುದು. ನಿಗದಿತ ಅವಧಿಯೊಳಗೆ ಫಲಿತಾಂಶ ಪ್ರಕಟಿಸದಿರುವ ಕಾಲೇಜು, ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು. ಶೀಘ್ರದಲ್ಲೇ ಇದಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶವನ್ನು ಹೊರಡಿಸಲಾಗುವುದು. ■

**ರಾಜ್ಯದ ಯುವ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಹಾಗೂ ತ್ವರಿತ ರೈಲ್ವೆ ಯೋಜನೆಗಳ ಅನುಷ್ಠಾನವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ 3–4 ಕಡೆಗಳಲ್ಲಿ ರೈಲ್ವೆ ಇಂಜಿನಿಯರಿಂಗ್ ಕೋರ್ಸ್ ಅನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಈಗಾಗಲೆ ಕೇಂದ್ರ ರೈಲ್ವೆ ಸಚಿವರೊಂದಿಗೆ ಚರ್ಚಿಸಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಲ್ಲದೆ ಇದಕ್ಕೆ ಅಗತ್ಯ ಸಹಾಯ ನೀಡಿ ಸಹಕರಿಸುವುದಾಗಿ ತಿಳಿಸಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ರೈಲ್ವೆ ಇಂಜಿನಿಯರಿಂಗ್ ಕೋರ್ಸ್ ಪ್ರಾರಂಭಿಸಲು ಪ್ರಾಮಾಣಿಕವಾಗಿ ಯತ್ನಿಸುತ್ತೇನೆ.**





## ತೋಟಗಾರಿಕಾ ಪಿತಾಮಹ

# ಡಾ. ಎಮ್.ಎಚ್. ಮರಿಗೌಡರು



ಇಂದಿರಾಗಾಂಧಿಯವರೊಡನೆ ಡಾ॥ ಮರಿಗೌಡರು.

▪ *ವೇಮಗಲ್ ಸೋಮಶೇಖರ್*

**ಗಾಂ**ಧೀಜಿಯವರ ಭಾರತ ಪುನುರುತ್ಥಾನದ ಆದರ್ಶದಿಂದ ಪ್ರೇರಿತರಾಗಿ ಯಾವುದೇ ತೋರಿಕೆಯ ಆಡಂಬರದ ಸದ್ದುಗದ್ದಲವಿಲ್ಲದೆ ಕರ್ನಾಟಕದ ತೋಟಗಾರಿಕಾ ಕ್ಷೇತ್ರವನ್ನು ಹಸಿರುಗೊಳಿಸಿದ ಶ್ರೇಯಸ್ಸು ಡಾ.ಎಮ್.ಎಚ್. ಮರಿಗೌಡರದು. ರಾಜ್ಯದಾದ್ಯಂತ ಸುಮಾರು ಹದಿನೈದು ಸಾವಿರ ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ಮುನ್ನೂರಕ್ಕೂ ಹೆಚ್ಚು ತೋಟದ ಸಸ್ಯಕ್ಷೇತ್ರಗಳನ್ನು ಜಿಲ್ಲಾ, ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಸ್ಥಾಪಿಸಿ, ತೋಟಗಾರಿಕೆ ಅಭಿವೃದ್ಧಿಗೆ ಬಲವಾದ ಬುನಾದಿ ಹಾಕಿದರು. ಹೀಗೆ ತೋಟಗಾರಿಕೆ ಇಲಾಖೆಯ ಮೇಲ್ದರ್ಜೆಗೆ ಕಾರಣಕರ್ತರಾದ ಮರಿಗೌಡರು ರಾಜ್ಯದಲ್ಲಷ್ಟೇ ಅಲ್ಲದೆ ಇಡೀ ದೇಶಕ್ಕೆ ತೋಟಗಾರಿಕೆಯ ಮಹತ್ವವನ್ನು ಪರಿಚಯಿಸಿದರು.

ಮೈಸೂರು ಜಿಲ್ಲೆ, ಟಿ ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿಯ ಮಾರಗೊಂಡನಹಳ್ಳಿಯಲ್ಲಿ ಹೊಂಬೇಗೌಡ–ನಿಂಗಮ್ಮ ದಂಪತಿಗಳ ಸುಪುತ್ರರಾಗಿ 1916ರ ಆಗಸ್ಟ್ 8ರಂದು ಜನಿಸಿದ ಮರಿಗೌಡರು ಬನ್ನೂರಿನಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಪೂರೈಸಿದರು. ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಶಿಕ್ಷಣ ಮುಗಿಸುತ್ತಿದ್ದ ಆವಧಿಯಲ್ಲಿ ಮರಿಗೌಡರು ರಾಮಕೃಷ್ಣ ಆಶ್ರಮದಲ್ಲಿದ್ದು ಕುವೆಂಪು ಅವರ ಕೊಠಡಿಯಲ್ಲಿ ವಾಸವಾಗಿದ್ದ ಕಾರಣ ಅವರ ಪ್ರಭಾವ ಮತ್ತು ಚಿಂತನೆಗಳಿಗೆ ಒಳಗಾದರು.

ಇವರಿಗೆ ಪ್ರಕೃತಿಯ ಬಗೆಗೆ ಇದ್ದ ಅದಮ್ಯ ಕುತೂಹಲ ಮತ್ತು ಆಸಕ್ತಿಯಿಂದ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ ಪ್ರಾಕೃತಿಕ ವಿಜ್ಞಾನದಲ್ಲಿ 1939ರಲ್ಲಿ ಪದವೀಧರರಾದರು. ನಂತರ ಲಕ್ನೋ ವಿಶ್ವವಿದ್ಯಾನಿಲಯದಿಂದ 1942ರಲ್ಲಿ ಎಂ.ಎಸ್‌ಸಿ ಸ್ನಾತಕೋತ್ತರ ಪದವಿ ಗಳಿಸಿದರು.


ಅದೇ ವರ್ಷ ಡಿಸೆಂಬರ್‌ನಲ್ಲಿ ಪಬ್ಲಿಕ್ ಸರ್ವೀಸ್ ಕಮೀಷನ್ ಮೂಲಕ ಮೈಸೂರು ಸರ್ಕಾರದ ತೋಟಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರೀಕ್ಷಕರಾಗಿ 10–12–1942ರಂದು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಆಗ ಲಾಲ್‌ಬಾಗ್‌ನ ಹಿಂದಿನ ನಿರ್ದೇಶಕರಾಗಿದ್ದ ರಾವ್ ಬಹದ್ದೂರ್ ಎಚ್.ಸಿ.ಜವರಾಯ ಅವರ ಸಮರ್ಥ ಮಾರ್ಗದರ್ಶನದ ಲಾಭ ಪಡೆದರು. ಜವರಾಯ ಅವರ ಕೈ ಕೆಳಗೆ ಕೆಲಸ ಮಾಡಿ ಸೈ ಎನಿಸಿಕೊಳ್ಳುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೆ ಮರಿಗೌಡರು ಸೈ ಎನಿಸಿಕೊಂಡರು. ಇವರ ಅಪಾರ ಹುಮ್ಮಸ್ಸು ಮತ್ತು ಸಾಮರ್ಥ್ಯವನ್ನು ಗಮನಿಸಿದ ಸರ್ಕಾರ; ತೋಟಗಾರಿಕೆಯಲ್ಲಿ ಉನ್ನತ ಶಿಕ್ಷಣ ಪಡೆಯಲು 1947ರಲ್ಲಿ ಇಂಗ್ಲೆಂಡಿನ ಕ್ಯೂ ಗಾರ್ಡನ್‌ಗೆ ಕಳುಹಿಸಿಕೊಟ್ಟಿತು. ಅಲ್ಲಿ ಸಸ್ಯೋದ್ಯಾನಗಳ ನಿರ್ವಹಣೆ ಮತ್ತು ಸುಂದರೀಕರಣದ ಬಗ್ಗೆ ಅಧ್ಯಯನ ನಡೆಸಿದ ನಂತರ ಮರಿಗೌಡರು ಅಮೆರಿಕಾಗೆ ಹೋಗಿ ಅಲ್ಲಿನ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಸ್ಯ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದರು. ತಮ್ಮ ಚಿಕ್ಕ ವಯಸ್ಸಿನಿಂದಲೂ ತಾಯಿನಾಡಿನಲ್ಲಿ ರೈತರ ಕಡು ಬಡತನದ ಸಂಕಷ್ಟದ ಸ್ಥಿತಿಯನ್ನು ಕಂಡಿದ್ದ ಮರಿಗೌಡರಿಗೆ ಅವರಿಗೆ ತನ್ನ ಕೈಲಾದ ಸಹಾಯವನ್ನು ಮಾಡಬೇಕೆಂಬ ಉದ್ದೇಶವಿತ್ತು. ಆ ಕಾರಣದಿಂದ ಅಮೆರಿಕಾದಲ್ಲಿ ಉನ್ನತ ಹುದ್ದೆ ಸಿಗುವ ಅವಕಾಶವಿದ್ದರೂ ಬೆಂಗಳೂರಿಗೆ ವಾಪಸ್ಸಾಗಿ ಅಂದಿನ ಮೈಸೂರು ಸಂಸ್ಥಾನದ ತೋಟಗಾರಿಕಾ ಇಲಾಖೆಯ ಲಾಲ್‌ಬಾಗ್‌ನಲ್ಲಿ ತೋಟಗಾರಿಕಾ ಉಪ ಅಧೀಕ್ಷಕರಾಗಿ 1951ರಲ್ಲಿ ಸೇವೆಯನ್ನು ಪ್ರಾರಂಭಿಸಿ ಅದೇ ವರ್ಷ ಡಿಸೆಂಬರ್‌ನಲ್ಲಿ ಬಡ್ತಿ ಪಡೆದು ಅಧೀಕ್ಷಕರಾಗಿ ನಿಯುಕ್ತರಾದರು.

1956ರಲ್ಲಿ ವಿಶಾಲ ಮೈಸೂರು ಉದಯವಾದ ನಂತರ 1960ರಲ್ಲಿ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ಮತ್ತು ದಕ್ಷಿಣ ಕನ್ನಡ, ಹಾಗೂ ಕೊಡಗು ಜಿಲ್ಲೆಗಳಿಗೂ ತೋಟಗಾರಿಕೆ ಇಲಾಖೆಯ ಜಿಲ್ಲಾ ಕಛೇರಿ ಮತ್ತು ಸಿಬ್ಬಂದಿಯನ್ನು 1960ರ ಆಗಸ್ಟ್‌ನಲ್ಲಿ ಸರ್ಕಾರದಿಂದ ಮಂಜೂರು ಮಾಡಿಸಿ ಆ ಜಿಲ್ಲೆಗಳಲ್ಲಿ ತೋಟಗಾರಿಕೆಗೆ ಹೊಸ ಚೇತನ ನೀಡಿದರು. ಮೈಸೂರು ಸರ್ಕಾರವು 1963ರಲ್ಲಿ ತೋಟಗಾರಿಕೆಗೆ ಕಾಯಕಲ್ಪ ನೀಡಿ ರಚಿಸಿದ ಸ್ವತಂತ್ರ ಇಲಾಖೆಗೆ ಮರಿಗೌಡರನ್ನು ತೋಟಗಾರಿಕೆ ಇಲಾಖೆಗೆ ನಿರ್ದೇಶಕರನ್ನಾಗಿ ನೇಮಿಸಿತು. ಇದಕ್ಕೆ ಮುಂಚೆ ತೋಟಗಾರಿಕೆ ಸ್ಥಿತಿವಂತರ ಹವ್ಯಾಸ ವೃತ್ತಿಯಾಗಿದ್ದುದನ್ನು ಕಂಡ ಮರಿಗೌಡರು ಅದನ್ನು ಸಾಮಾನ್ಯ ಜನರಿಗೆ ಎಟಕುವಂತೆ ಮಾಡಿದರು. ರಾಜ್ಯದ ಉದ್ದಗಲಕ್ಕೂ ತೋಟಗಾರಿಕೆ ಬೆಳೆಗಳ ಬೇಸಾಯವನ್ನು ವಿಸ್ತರಿಸಿ ಹಣ್ಣು, ತರಕಾರಿ, ಹಾಗೂ ಫಲ–ಪುಷ್ಪಗಳು ಜನ ಸಾಮಾನ್ಯರಿಗೂ ಸುಲಭವಾಗಿ ಸಿಗುವಂತೆ ಏರ್ಪಾಟು ಮಾಡಿದರು. ಚಕ್ರಮುನಿ ಸೇರಿದಂತೆ ಅನೇಕ ಜಾತಿಯ ಸೊಪ್ಪುಗಳು ಹಾಗೂ ನುಗ್ಗೆ, ಕರಿಬೇವು ಇತ್ಯಾದಿ ಸಸಿಗಳು ರೈತ ಸಮುದಾಯಕ್ಕೆ ಉಚಿತವಾಗಿ ದೊರಕುವ ವ್ಯವಸ್ಥೆ ಮಾಡಿದರು. ಬಡ ರೈತರಿಗೆ ಇದರಿಂದ ಬಹಳ ಉಪಕಾರವಾಗಿ ತಮ್ಮ ಆದಾಯ ಹಾಗೂ ಆರ್ಥಿಕ ಮಟ್ಟವನ್ನು


**ಮೈಸೂರು ಸರ್ಕಾರವು 1963ರಲ್ಲಿ ತೋಟಗಾರಿಕೆಗೆ ಕಾಯಕಲ್ಪ ನೀಡಿ ರಚಿಸಿದ ಸ್ವತಂತ್ರ ಇಲಾಖೆಗೆ ಮರಿಗೌಡರನ್ನು ತೋಟಗಾರಿಕೆ ಇಲಾಖೆಗೆ ನಿರ್ದೇಶಕರನ್ನಾಗಿ ನೇಮಿಸಿತು. ಇದಕ್ಕೆ ಮುಂಚೆ ತೋಟಗಾರಿಕೆ ಸ್ಥಿತಿವಂತರ ಹವ್ಯಾಸ ವೃತ್ತಿಯಾಗಿದ್ದುದನ್ನು ಕಂಡ ಮರಿಗೌಡರು ಅದನ್ನು ಸಾಮಾನ್ಯ ಜನರಿಗೆ ಎಟಕುವಂತೆ ಮಾಡಿದರು. ರಾಜ್ಯದ ಉದ್ದಗಲಕ್ಕೂ ತೋಟಗಾರಿಕೆ ಬೆಳೆಗಳ ಬೇಸಾಯವನ್ನು ವಿಸ್ತರಿಸಿ ಹಣ್ಣು, ತರಕಾರಿ, ಹಾಗೂ ಫಲ–ಪುಷ್ಪಗಳು ಜನ ಸಾಮಾನ್ಯರಿಗೂ ಸುಲಭವಾಗಿ ಸಿಗುವಂತೆ ಏರ್ಪಾಟು ಮಾಡಿದರು.**


ಹೆಚ್ಚಿಸಿಕೊಂಡರು. ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘ(ಲಾಲ್‌ಬಾಗ್)ದ ಸಹಯೋಗದೊಡನೆ ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಲು ಮರಿಗೌಡರು ಕಂಕಣಬದ್ಧರಾದರು.. ಆಧುನಿಕ ತೋಟಗಾರಿಕೆಗೆ ವೈಜ್ಞಾನಿಕ ತಳಹದಿಯ ಅವಶ್ಯಕತೆಯನ್ನು ಮನಗಂಡಿದ್ದ ಅವರು ಸಂಶೋಧನೆಯ ಬೆಂಬಲವನ್ನು ಪಡೆಯಲು ಎಲ್ಲಾ ಸಂಶೋಧನಾ ಕೇಂದ್ರಗಳ ಜೊತೆಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದರು.

ಹೀಗೆ ತೋಟಗಾರಿಕೆ ಅಭಿವೃದ್ಧಿಯಲ್ಲಿ ಇಲಾಖೆಯನ್ನು ಬಲಪಡಿಸಿದಲ್ಲದೆ ರೈತರ ತೋಟಗಾರಿಕೆ ಉತ್ಪನ್ನಗಳನ್ನು ಮಾರಾಟಕ್ಕೆ ಲಾಲ್‌ಬಾಗ್‌ನಲ್ಲಿ ಪ್ರಥಮವಾಗಿ ದ್ರಾಕ್ಷಿ ಬೆಳೆಗಾರ ಸಹಕಾರ ಸಂಘವನ್ನು ಸ್ಥಾಪಿಸಿದರು. ವಿವಿಧ ಇಲಾಖೆಗಳಲ್ಲಿ ಹಂಚಿ ಹೋಗಿದ್ದ ತೋಟಗಾರಿಕೆ ಚಟುವಟಿಕೆಗಳನ್ನು ಒಂದೇ ಇಲಾಖೆಗೆ ಒಳಪಡಿಸಿ ತೋಟಗಾರಿಕೆಯದೇ ಪ್ರತ್ಯೇಕ ಇಲಾಖೆ 1963ರಲ್ಲಿ ಅಸ್ತಿತ್ವಕ್ಕೆ ಬರುವಂತೆ ಮಾಡಿದರು. 1964ರಲ್ಲಿ "ದಿ ನರ್ಸರಿಮೆನ್ ಕೋ–ಪರೇಟಿವ್ ಸೊಸೈಟಿ" ಸ್ಥಾಪಿಸಿದರು. ನಂತರದಲ್ಲಿ ತೋಟದ ಬೆಳೆಗಾರರ ಉತ್ಪನ್ನಗಳ ಮಾರಾಟ





ರಾಷ್ಟ್ರಪತಿ ಡಾ॥ ಝೂಕೀರ್ ಹುಸೇನ್ ಅವರೊಡನೆ ಡಾ॥ ಮರಿಗೌಡರು

ಸಂಸ್ಕರಣೆ ಸಹಕಾರ ಸಂಘ ಪ್ರಾರಂಭಿಸಿದರು. ಈ ಸಂಘದ ಮೂಲಕ ಪ್ರಾರಂಭಿಸಿದ ತೋಟದ ಬೆಳೆಗಾರರ ಮಾರಾಟ ಮಳಿಗೆಗಳು(ಹಾಪ್‌ಕಾಮ್ಸ್) ಬೆಂಗಳೂರಿನ ವಿವಿಧ ಬಡಾವಣೆಗಳಲ್ಲದೆ ರಾಜ್ಯದ ಇತರೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲೂ ವ್ಯಾಪಿಸಿಕೊಂಡಿದೆ

1973ರಲ್ಲಿ ಸಿರಾ ತಾಲ್ಲೂಕಿನ ಬೆಳ್ಳಾರ ಎಂಬ ಹಳ್ಳಿಯ ಹತ್ತಿರ ಪಾಳು 1525 ಎಕರೆಯಲ್ಲಿನ 400 ಎಕರೆಯಷ್ಟು ವಿಸ್ತೀರ್ಣದಲ್ಲಿ ತೆಂಗಿನ ಸಸಿಗಳನ್ನು ನೆಡೆಸಿದರು. ಕ್ರಮೇಣ ಈ ಸಸಿಗಳು ಸೊಂಪಾಗಿ ಬೆಳೆದವು.

ಲಾಲ್‌ಬಾಗ್‌ನಲ್ಲಿ ಮಣ್ಣು ಮತ್ತು ನೀರಿನ ಪರೀಕ್ಷಾ ಪ್ರಯೋಗಾಲಯ ಸಸ್ಯ ಸಂರಕ್ಷಣೆ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದರು. ಲಾಲ್‌ಬಾಗ್‌ನಲ್ಲಿ ಸುಸಜ್ಜಿತ ಹಣ್ಣು ಮತ್ತು ತರಕಾರಿ ಸಂರಕ್ಷಣಾ ವಿಭಾಗವನ್ನು ಸಹ ತೆರೆದರು. ಈ ವಿಭಾಗದಲ್ಲಿ ಕೃತಕ ಹಣ್ಣು, ತರಕಾರಿಗಳನ್ನು ಒಣಗಿಸಿ ಸಂರಕ್ಷಿಸುವ ಉದ್ದೇಶದಿಂದ ಕೃತಕ ಒಣಗಿಸುವ ಘಟಕವನ್ನು ಅಳವಡಿಸಿದರು. ಇಲ್ಲಿ ತರಬೇತಿಯನ್ನು ಪಡೆದ ರೈತರು, ಆಸಕ್ತರು, ಹಾಗೂ ನಗರ ಮತ್ತು ಹಳ್ಳಿಗಳ ಯುವಕ ಯುವತಿಯರಿಗೆ ಉದ್ಯೋಗಾವಕಾಶದ ಅನುಕೂಲವಾಯಿತು. ರಾಜ್ಯದಲ್ಲಿ ಮಳೆ ಆಧಾರಿತ ಕೃಷಿ ಇದ್ದುದರಿಂದ ತೋಟಗಾರಿಕೆಯ ಮೂಲಕ ಒಣ ಭೂಮಿಯಲ್ಲಿ ಬರಗಾಲದ ಬವಣೆ ಮತ್ತು ಆರ್ಥಿಕ ಸಂಕಷ್ಟಗಳಿಂದ ತಪ್ಪಿಸಬಹುದೆಂದು ಯೋಚಿಸಿ ರಾಜಾದಾದ್ಯಂತ ಅದಕ್ಕೆ ಒತ್ತು ಕೊಟ್ಟರು. ಅದೀಗ ವ್ಯಾಪಕ ಪ್ರಮಾಣದಲ್ಲಿ ಕಾಣಬರುತ್ತಿದೆ. ಇವು ಇವರ ಕ್ರಿಯಾಶೀಲತೆಯ ಹೆಗ್ಗುರುತುಗಳು. ಹಗಲಿರುಳೆನ್ನದೆ ಶ್ರಮಿಸುತ್ತಿದ್ದ ಇವರು ರಜಾ ದಿನಗಳಲ್ಲೂ ಎಷ್ಟೋ ಬಾರಿ ಬೆಂಗಳೂರಿನ ಹೊಸ ಬಡಾವಣೆಗಳಿಗೆ ಹೋಗಿ ಅಲ್ಲಿಯ ಮನೆಗಳ ಮುಂದೆ ಖಾಲಿಯಾದ ಜಾಗ ಕಂಡುಬಂದಲ್ಲಿ ಮನೆಯವರಿಗೆ ಮನವರಿಕೆ ಮೂಡಿಸಿ ಸಸಿಗಳನ್ನು ಒದಗಿಸಿ ಹಸಿರು ಬೆಳಸುವಂತೆ ಉತ್ತೇಜನ ನೀಡುತ್ತಿದ್ದರು.

1950ಕ್ಕೂ ಹಿಂದೆ ಅಪರೂಪದ ಹಣ್ಣಾಗಿದ್ದ ಸಪೋಟ ಮರಿಗೌಡರ ಪ್ರಯತ್ನದಿಂದ ಈಗ ಎಲ್ಲಾ ಜಿಲ್ಲೆಗಳಲ್ಲಿಯೂ

**ರಾಷ್ಟ್ರದಲ್ಲಿ ಎಲ್ಲಿಯೂ ಇಲ್ಲದೇ ಇರುವಂತಹ ಒಂದು ಗಣನೀಯ ತೋಟಗಾರಿಕಾ ಕ್ಷೇತ್ರವಾಗಿ ಪ್ರಾರಂಭವಾಗಲು ಮರಿಗೌಡರು ಕಾರಣರಾದರು. ಇವರ ಆಡಳಿತಾವಧಿಯಲ್ಲಿ 100 ಎಕರೆ ಪ್ರದೇಶದಲ್ಲಿದ್ದ ಲಾಲ್‌ಬಾಗ್ 240 ಎಕರೆಗೆ ವಿಸ್ತರಿಸಿದರು. ಪರಿಸರ ಪ್ರಜ್ಞೆ ಮೂಡಿಸಲು ಶಾಲೆಗಳಲ್ಲಿ ಜಾಗವಿರುವ ಕಡೆಯಲ್ಲೆಲ್ಲಾ ಮಕ್ಕಳು ಹಣ್ಣಿನ ಸಸಿಗಳನ್ನು ಹಾಗೂ ಇತರೆ ಸಸಿಗಳನ್ನು ಬೆಳೆಸಲು ಒಂದು ಚೇತನವನ್ನೇ ಕೊಟ್ಟರು. ಯಾರೇ ಅವರ ಬಳಿಗೆ ಹೋದರೂ 'ಗಿಡ ಹಾಕುತ್ತೀರಾ' ಎಂದು ಕೇಳಿ ಉಚಿತವಾಗಿ ಗಿಡಗಳನ್ನು ಕೊಡುತ್ತಿದ್ದರಂತೆ.**

ವಾಣಿಜ್ಯ ಬೆಳೆಯಾಗಿ ಪ್ರಸಿದ್ಧಿಯಾಗಿದೆ. ಅದೇ ರೀತಿ 'ಅನಾಬ್ ಇ–ಶಾಹಿ' ಮತ್ತು 'ಥಾಂಸನ್' ಮುಂತಾದ ದ್ರಾಕ್ಷಿ ತಳಿಗಳ ಅವಿಷ್ಕರಣ ಮತ್ತು ಪ್ರಸಾರ ಲಾಲ್‌ಬಾಗ್‌ನಲ್ಲಿ ಮಾಡಿದರು. ಇಟಾಲಿಯನ್ ಲೆಮನ್' ಹಾಗೂ ಕೋ ಕೋ ಸಸಿಗಳನ್ನು ಲಾಲ್‌ಬಾಗ್‌ಗೆ ತರಸಿ ಅಭಿವೃದ್ಧಿ ಪಡಿಸಿದರು. ಬೀಜ ರಹಿತ ದಾಳಿಂಬೆಯನ್ನು ರಾಮನಗರ ತೋಟಗಾರಿಕಾ ಕ್ಷೇತ್ರದಲ್ಲಿಯೂ, ಸೀತಾಫಲದ ಹಲವಾರು ಜಾತಿಯನ್ನು ಬೀದರ್ ಜಿಲ್ಲಾ ತೋಟಗಾರಿಕಾ ಕ್ಷೇತ್ರದಲ್ಲೂ ಬೆಳೆಯಲು ಉತ್ತೇಜನ ನೀಡಿ ಅದೂ ಸಹ ವಾಣಿಜ್ಯ ಬೆಳೆಯಾಗಲು ಕಾರಣರಾದರು. ರಾಯಚೂರು ಜಿಲ್ಲೆಯಲ್ಲಿ ತೆಂಗು ಬೆಳೆಯಲು ಸಾಧ್ಯವೇ ಇಲ್ಲ ಎಂದಿದ್ದ ಭಾವನೆಯನ್ನು ಹೋಗಲಾಡಿಸಿ ಅಲ್ಲಿಯೂ ವಾಣಿಜ್ಯ ಬೆಳೆಯಾಗಿ ತೆಂಗನ್ನು ಬೆಳಸಬಹುದೆಂದು ಸಾಧನೆ ಮಾಡಿ ತೋರಿಸಿದರು. ಅದೇ ರೀತಿಯಲ್ಲಿ ಬಿಜಾಪುರದ ಕೃಷ್ಣರಾಜ ಸಾಗರದ ತೋಟಗಾರಿಕಾ ಕ್ಷೇತ್ರದಲ್ಲಿ ತೆಂಗಿನ ಹೈಬ್ರಿಡ್ ಸಸಿಗಳನ್ನು ಅಭಿವೃದ್ಧಿ ಪಡೆಸುವ ಯೋಜನೆ ತಂದರು. ಕರಾವಳಿಗೆ ಸೀಮಿತವಾಗಿದ್ದ ಗೋಡಂಬಿಯನ್ನು ಕೋಲಾರ ಮತ್ತು ಚಾಮರಾಜನಗರ ಜಿಲ್ಲೆಯ ತೋಟಗಾರಿಕಾ ಕ್ಷೇತ್ರದಲ್ಲಿಯೂ ಬೆಳೆಯಲು ಸಾಧ್ಯವೆಂದು ಸಾಬೀತು ಪಡಿಸಿದರು. ಅದೇ ರೀತಿ ಮಲೆನಾಡಿಗೆ ಸೀಮಿತವಾಗಿದ್ದ ಕರಿ ಮೆಣಸನ್ನು ಇತರ ಜಿಲ್ಲೆಗಳಲ್ಲೂ ಬೆಳೆಯಲು ಪ್ರೋತ್ಸಾಹಿಸಿದರು. ದೇಶದಲ್ಲಿಯೇ ಮೊದಲ ಬಾರಿಗೆ ಕೋಲಾರದ ತಮಕ ತೋಟಗಾರಿಕಾ ಕ್ಷೇತ್ರದಲ್ಲಿ ಸುಮಾರು 45 ಹಲಸಿನ ಜಾತಿಗಳನ್ನು ಸಂಗ್ರಹಿಸಿ ಒಂದೇ ಕಡೆ ಬೆಳೆಯುವಂತೆ ಅಳವಡಿಸಿದ್ದರಿಂದ ಕೃಷಿ ವಿಜ್ಞಾನ ಪರಿಣಿತರಿಗೆ ಸಂಶೋಧನೆ ಮಾಡಲು ಅನುಕೂಲವಾಯಿತು. ರಾಷ್ಟ್ರದಲ್ಲಿ ಎಲ್ಲಿಯೂ ಇಲ್ಲದೇ ಇರುವಂತಹ ಒಂದು ಗಣನೀಯ ತೋಟಗಾರಿಕಾ ಕ್ಷೇತ್ರವಾಗಿ ಪ್ರಾರಂಭವಾಗಲು ಮರಿಗೌಡರು ಕಾರಣರಾದರು. ಇವರ ಆಡಳಿತಾವಧಿಯಲ್ಲಿ 100 ಎಕರೆ ಪ್ರದೇಶದಲ್ಲಿದ್ದ ಲಾಲ್‌ಬಾಗ್ 240 ಎಕರೆಗೆ ವಿಸ್ತರಿಸಿದರು. ಪರಿಸರ ಪ್ರಜ್ಞೆ ಮೂಡಿಸಲು ಶಾಲೆಗಳಲ್ಲಿ ಜಾಗವಿರುವ ಕಡೆಯಲ್ಲೆಲ್ಲಾ ಮಕ್ಕಳು ಹಣ್ಣಿನ ಸಸಿಗಳನ್ನು ಹಾಗೂ ಇತರೆ ಸಸಿಗಳನ್ನು ಬೆಳೆಸಲು ಒಂದು ಚೇತನವನ್ನೇ ಕೊಟ್ಟರು. ಯಾರೇ ಅವರ ಬಳಿಗೆ ಹೋದರೂ 'ಗಿಡ ಹಾಕುತ್ತೀರಾ' ಎಂದು ಕೇಳಿ ಉಚಿತವಾಗಿ ಗಿಡಗಳನ್ನು ಕೊಡುತ್ತಿದ್ದರಂತೆ.

ಮೈಸೂರಿನಲ್ಲಿ ಹಲವಾರು ಉದ್ಯಾನಗಳನ್ನಲ್ಲದೆ ವಿಧಾನಸೌಧ ಮತ್ತು ರಾಜಭವನದ ಉದ್ಯಾನಗಳನ್ನು ಸುಂದರಗೊಳಿಸಿದರು. "ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್ ಬೆಂಗಳೂರಿನ ಎರಡು ಕಣ್ಣುಗಳು" ಎಂದು ಉದ್ಗರಿಸುವಾಗ ಮರಿಗೌಡರ ಕಣ್ಣುಗಳು ತೇವಗೊಳ್ಳುತ್ತಿತ್ತಂತೆ. ತೋಟಗಾರಿಕೆಗೆ ಮಹತ್ವದ ಕಾಯಕಲ್ಪ ನೀಡಿದ ಮರಿಗೌಡರ 32 ವರ್ಷಗಳ ಶ್ರಮ ಮತ್ತು ಸೇವೆಯ ಫಲವಾಗಿ ಕರ್ನಾಟಕ ರಾಜ್ಯವು ಇಡೀ ರಾಷ್ಟ್ರದಲ್ಲಿ ತೋಟಗಾರಿಕೆ ಕ್ಷೇತ್ರದಲ್ಲಿ ಮೊದಲ ಸ್ಥಾನ ಪಡೆದು ತೋಟಗಾರಿಕಾ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಮರಿಗೌಡರ ದಕ್ಷತೆಯನ್ನು ಮೆಚ್ಚಿ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರಕಟಿಸಿದರು. ಅದೇ ಸಮಯದಲ್ಲಿ ತೋಟಗಾರಿಕೆಯಂತಹ ತಾಂತ್ರಿಕ ಇಲಾಖೆಗೆ ಸರ್ಕಾರ ಐ.ಎ.ಎಸ್. ಅಧಿಕಾರಿಯನ್ನು ನಿರ್ದೇಶಕರನ್ನಾಗಿ ನೇಮಿಸಿದ್ದರಿಂದ ಮರಿಗೌಡರು ಅಸಮ್ಮತಿ ವ್ಯಕ್ತಪಡಿಸಿ ರಾಜ್ಯೋತ್ಸವ ಪ್ರಶಸ್ತಿಯನ್ನು ತಿರಸ್ಕರಿಸಿ ಆತ್ಮ ಗೌರವವನ್ನು ಮೆರೆದರು. ಹೊಗಳಿಕೆ, ಸನ್ಮಾನ, ಪ್ರಶಸ್ತಿಗಳಿಂದ ದೂರವಿದ್ದ ಮರಿಗೌಡರು 1971ರಲ್ಲಿ ನಿವೃತ್ತಿ ಹೊಂದಿದರೂ ಇವರ ಸೇವೆಯನ್ನು ಗಮನಿಸಿದ್ದ ಸರ್ಕಾರ ಮೂರು ವರ್ಷ ಮುಂದುವರೆಸಿದರು.

1974ರ ಜುಲೈ 1ರಂದು ನಿವೃತ್ತಿ ಹೊಂದಿದ ನಂತರ ದೆಹಲಿಯಲ್ಲಿದ್ದ ಆಲ್ ಇಂಡಿಯಾ ಸಂಸ್ಥೆಯ ಛೇರ್ಮನ್ ಆಗಿದ್ದ ಶ್ರೀಧರ್ಮವೀರ (1969ರಿಂದ 1972ರವರೆಗೆ ಕರ್ನಾಟಕದ ರಾಜ್ಯಪಾಲರಾಗಿದ್ದವರು) ಅವರು ಮರಿಗೌಡರಿಗೆ ಚಿನ್ನದ ಪದಕದೊಂದಿಗೆ "ಆಲ್ ಇಂಡಿಯಾ ರಿನೌನ್ಡ್ ಹಾರ್ಟಿಕಲ್ಚರಿಸ್ಟ್" ಎಂಬ ಪ್ರಶಸ್ತಿ ಪ್ರಕಟಿಸಿ ಆ ಪ್ರಶಸ್ತಿಯನ್ನು ಸ್ವೀಕರಿಸಲು ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಭಾಗವಹಿಸಲು ಪತ್ರ ಬರೆದರು. ಆದರೆ ಮರಿಗೌಡರು ದೆಹಲಿಗೆ ಹೋಗಲಿಲ್ಲ. ಕೆಲ ದಿನಗಳ ನಂತರ ಧರ್ಮವೀರರೇ ಬೆಂಗಳೂರಿಗೆ ಬಂದಾಗ ತಮ್ಮ ಮನೆಗೆ ಮರಿಗೌಡರನ್ನು ಕರೆಸಿ ಚಿನ್ನದ ಪದಕವನ್ನು ನೀಡಿ ಸನ್ಮಾನಿಸಿದರು. ತಮ್ಮ ಮನೆಯ ಆವರಣದಲ್ಲಿ ಬೆಳಸಿದ್ದ ಚೆರ್ರಿ ಹಣ್ಣಿನ ಗಿಡಕ್ಕೆ ಮನೆಯ ಹತ್ತಿರವಿದ್ದ ಶಾಲೆಯ ಮಕ್ಕಳು ಕಾಂಪೌಂಡ್ ಗೋಡೆ ಹಾರಿ ಹಣ್ಣನ್ನು ಕಿತ್ತು ಹೊಯ್ಯುವಾಗ ಮರಿಗೌಡರು ನೋಡಿ ನಕ್ಕು ಖುಷಿ ಪಡುತ್ತಿದ್ದರಂತೆ. ರಾಷ್ಟ್ರಕವಿ ಕುವೆಂಪು ಅವರು ಒಂದು ಸಲ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದಾಗ " ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ"(ಹಿಮ ಚಂಪಕ) ಹೂವಿನ ಗಿಡ ನೋಡಿ ಬಹು ಸಂತೋಷ ವ್ಯಕ್ತ ಪಡಿಸಿದರಂತೆ. ತಕ್ಷಣ ಮರಿಗೌಡರು ಮೈಸೂರಿನಲ್ಲಿನ ಅವರ ಮನೆಗೆ (ಉದಯರವಿ) ಆ ಗಿಡವನ್ನು ಕಳಹಿಸಿ ಕೊಡುತ್ತಾರೆ. ಆ ಗಿಡದಲ್ಲಿ ಹೂ ಬಿಟ್ಟಾಗ ಕುವೆಂಪು ಅವರು ಬಹು ಆನಂದ ಪಟ್ಟರಂತೆ.

ಪುಷ್ಪಾಭಿವೃದ್ಧಿಯಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಪದ್ಮಶ್ರೀ ಡಾ.ಮನಮೋಹನ್ ಅತ್ತಾವರ್(ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್) ಅವರಿಗೆ ಸ್ಫೂರ್ತಿ– ಪ್ರೋತ್ಸಾಹ ನೀಡಿದವರು ಮರಿಗೌಡರು. "ಮರಿಗೌಡರು ತೋಟಗಾರಿಕೆ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದರು" ಎಂದು ಪರಿಸರ ತಜ್ಞ ಅ.ನ. ಎಲ್ಲಪ್ಪರೆಡ್ಡಿವರ ಮಾತು ಬಹು ಸೂಕ್ತವಾಗಿದೆ. "ನಾನು ಸತ್ತ ಮೇಲೆ ನನ್ನ ಚಿತಾಭಸ್ಮವನ್ನು ಯಾವುದಾದರೂ ಗಿಡದ ಪಾತಿಗೆ ಹಾಕಿ" ಎಂದು ಮರಿಗೌಡರು ಆಗಾಗ್ಗೆ ಹೇಳುತ್ತಿದ್ದರಂತೆ.

ಇಂತಹ ಮರಿಗೌಡರು ನಿಸ್ವಾರ್ಥ ತ್ಯಾಗಮಯಿಯಾಗಿ, ನಿಷ್ಠಾವಂತ ಆಡಳಿತಾಧಿಕಾರಿಯಾಗಿ, ರೈತರ ಹಿತದೃಷ್ಟಿಯಿಂದ ತಮ್ಮ ಜೀವನವನ್ನೇ ಮುಡುಪಾಗಿಟ್ಟು ರಾಷ್ಟ್ರದ ತೋಟಗಾರಿಕಾ ನಕ್ಷೆಯಲ್ಲಿ ಕರ್ನಾಟಕವು ಪ್ರಪ್ರಥಮ ರಾಜ್ಯವೆಂದು



ಇಂಗ್ಲೆಂಡ್‌ನ ರಾಣಿ ಎಲಿಜಬತ್ – II ರವರು ಲಾಲ್‌ಬಾಗ್‌ನಲ್ಲಿ ವೃಕ್ಷ ನೆಡುತ್ತಿರುವುದು

**ಪುಷ್ಪಾಭಿವೃದ್ಧಿಯಲ್ಲಿ ಅಂತರರಾಷ್ಟ್ರೀಯ ಖ್ಯಾತಿ ಪಡೆದಿರುವ ಪದ್ಮಶ್ರೀ ಡಾ.ಮನಮೋಹನ್ ಅತ್ತಾವರ್(ಇಂಡೋ ಅಮೆರಿಕನ್ ಹೈಬ್ರಿಡ್ ಸೀಡ್ಸ್) ಅವರಿಗೆ ಸ್ಫೂರ್ತಿ– ಪ್ರೋತ್ಸಾಹ ನೀಡಿದವರು ಮರಿಗೌಡರು. "ಮರಿಗೌಡರು ತೋಟಗಾರಿಕೆ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದರು" ಎಂದು ಪರಿಸರ ತಜ್ಞ ಅ.ನ. ಎಲ್ಲಪ್ಪರೆಡ್ಡಿವರ ಮಾತು ಬಹು ಸೂಕ್ತವಾಗಿದೆ.**

ತೋರಿಸಿಕೊಟ್ಟರು. ತೋಟಗಾರಿಕಾ ರತ್ನ, ತೋಟಗಾರಿಕಾ ಋಷಿ, ತೋಟಗಾರಿಕಾ ತಜ್ಞ, ತೋಟಗಾರಿಕಾ ಚೇತನ, ಉದ್ಯಾನ ಪಿತಾಮಹ, ಸಸ್ಯವಿಜ್ಞಾನಿ, ಸಸ್ಯಾರಾಧಕ, ಸಸ್ಯಯೋಗಿ, ಮುಂತಾದ ಉಪಾಧಿಗಳನ್ನು ಪಡೆದಿದ್ದ ಡಾ.ಮರಿಗೌಡರು ಕೃಷಿಗಾರಿಕೆಯಲ್ಲಿ 78 ವರ್ಷಗಳ ತ್ಯಾಗ–ಆದರ್ಶಗಳ ಸಾರ್ಥಕ ಬಾಳನ್ನು ನಡೆಸಿ 1993ರ ಅಕ್ಟೋಬರ್ 12ರಂದು ಪಂಚಭೂತಗಳಲ್ಲಿ ಲೀನವಾದರು.

ಡಾ. ಎಮ್.ಎಚ್.ಮರಿಗೌಡರ ಜನ್ಮಶತಮಾನೋತ್ಸವ ಸ್ಮರಣಾರ್ಥವಾಗಿ ಮೈಸೂರು ಉದ್ಯಾನ ಕಲಾ ಸಂಘ, ತೋಟಗಾರಿಕಾ ಇಲಾಖೆ ಮತ್ತು ಡಾ.ಎಂ.ಎಚ್. ಮರಿಗೌಡ ಹಾರ್ಟಿಕಲ್ಚರಲ್ ಎಜುಕೇಷನ್ ಅಂಡ್ ರೀಸರ್ಚ್ ಫೌಂಡೇಶನ್‌ನ ಜಂಟಿ ಆಶ್ರಯದಲ್ಲಿ ಲಾಲ್‌ಬಾಗ್‌ನಲ್ಲಿ ಆಗಸ್ಟ್ 8ರಿಂದ ಒಂದುವಾರ ನಡೆಯುವ ಸ್ವಾತಂತ್ರ್ಯೋತ್ಸವ ಫಲ–ಪುಷ್ಪ ಪ್ರದರ್ಶನ ಮರಿಗೌಡರ ಹೆಸರಿನಲ್ಲಿ ಅರ್ಥಪೂರ್ಣವಾಗಿ ಆಚರಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

[ಈ ಲೇಖನ ಸಿದ್ಧಪಡಿಸಲು ಸಹಕರಿಸಿದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ (ನಿವೃತ್ತ) ಎಸ್.ನಾರಾಯಣ ಸ್ವಾಮಿ ಸಹಕರಿಸಿದ್ದಾರೆ ಅವರಿಗೆ ಕೃತಜ್ಞತೆಗಳು.]







## ಕೃಷಿ ಪ್ರೋತ್ಸಾಹಿಸಲು ಗದ್ದೆಗಿಳಿದ

# ಕೃಷಿ ಸಚಿವರು

ಚಿತ್ರಗಳು : ಉಮೇಶ್ ಮಾರ್ಪಳ್ಳಿ

▪ ಕೆ. ರೋಹಿಣಿ







ವ್ಯವಸಾಯದಿಂದ ಹಲವು ಕಾರಣಗಳಿಂದ ವಿಮುಖವಾಗುತ್ತಿರುವ ಕೃಷಿಕರನ್ನು ಭತ್ತದ ವ್ಯವಸಾಯದತ್ತ ಆಕರ್ಷಿಸಲು ಖುದ್ದು ಕೃಷಿ ಸಚಿವ ಕೃಷ್ಣ ಭೈರೇಗೌಡರು ಗದ್ದೆಗಿಳಿದು ನಾಟಿ ಮಾಡಿದ ರೀತಿ ಎಲ್ಲರನ್ನು ಪ್ರೇರೇಪಿಸುವಂತಿತ್ತು.

ಬ್ರಹ್ಮಾವರದ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭತ್ತದ ಕೃಷಿಯನ್ನು ಯಾಂತ್ರೀಕರಣಗೊಳಿಸಲು ಮತ್ತು ಇಳುವರಿಯನ್ನು ಹೆಚ್ಚಿಸಲು ನಿರಂತರ ಸಂಶೋಧನೆಯನ್ನು ಮುಂದುವರಿಸಿದ್ದಾರೆ. ಡಾ ಶಂಕರ್ ಅವರು ಈ ನಿಟ್ಟಿನಲ್ಲಿ ಇನ್ನಷ್ಟು ಕ್ರಮಗಳನ್ನು ಕೈಗೊಂಡಿದ್ದು, ಯಾಂತ್ರಿಕ ಕೃಷಿಯಿಂದ ಕೃಷಿ ಕೂಲಿ ಕಾರ್ಮಿಕರು ಮತ್ತು ಕಳೆ ನಿರ್ವಹಣೆ, ಕಟಾವು ಎಲ್ಲದಕ್ಕೂ ರೈತರು ಇಂದು ಖರ್ಚು ಮಾಡುವುದರಲ್ಲಿ ಅರ್ಧದಷ್ಟು ಹಣ ಸಾಕು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಈ ಮಾದರಿಯನ್ನು ಉಡುಪಿಯಲ್ಲಿ ಅಳವಡಿಸಲು, ರೈತರಲ್ಲಿ ಪ್ರೋತ್ಸಾಹ ತುಂಬಲು ಖುದ್ದು ಕೃಷಿ ಸಚಿವರೇ ಉಡುಪಿಯ ಬ್ರಹ್ಮಾವರದ ಗುಚ್ಚಗ್ರಾಮ ಅಗ್ರಾಹಾರದಲ್ಲಿ ಯಾಂತ್ರೀಕೃತ ಭತ್ತ ನಾಟಿಯ ಬೃಹತ್ ಆಂದೋಲನಕ್ಕೆ ಚಾಲನೆ ನೀಡಿದರು.

ಭತ್ತದ ಬೆಳೆಯು ಕರಾವಳಿಯ ಆಹಾರ ಮತ್ತು ಆದಾಯವಾಗಿರದೆ ಅದು ಇಲ್ಲಿನ ಸಂಸ್ಕೃತಿಯಾಗಿದೆ. ಇದನ್ನು ಉಳಿಸಿ ಬೆಳೆಸುವ ಹೊಣೆ ಎಲ್ಲರದ್ದು ಎಂದು ಸಚಿವರು ನುಡಿದರು.

ಸಮಗ್ರ ಯಾಂತ್ರೀಕೃತ ಬೇಸಾಯ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಭತ್ತದ ಬೆಳೆಯನ್ನು ಲಾಭದಾಯಕ ಕೃಷಿಯನ್ನಾಗಿ ಪರಿವರ್ತಿಸಬಹುದು ಎಂಬ ಸಂದೇಶವನ್ನು ಪರಿಣಾಮಕಾರಿಯಾಗಿ ನೀಡಿದ ಅವರು, ದುಬಾರಿ ವೆಚ್ಚ ಮತ್ತು ಕೂಲಿ ಆಳುಗಳ ಸಮಸ್ಯೆಗೆ ಯಾಂತ್ರೀಕೃತ ಕೃಷಿ ಉತ್ತರ ನೀಡಲಿದೆ ಎನ್ನುವ ಆಶಯ ವ್ಯಕ್ತ ಪಡಿಸಿದರು. ▪



# ಅಶೋಕನ ಶಾಸನ

▪ ಪ. ರಾಮಕೃಷ್ಣ ಶಾಸ್ತ್ರಿ

**ಚಿ**ತ್ರದುರ್ಗದ ಮಳಕಾಲ್ಮೂರಿಗೆ ಸನಿಹದ ರಾಂಪುರದಲ್ಲಿ ಕ್ರಿಸ್ತಪೂರ್ವ ಮೂರನೆಯ ಶತಮಾನದ ಅಶೋಕನ ಶಾಸನವೊಂದು ಇನ್ನೂ ಮುಕ್ಕಾಗದೆ ಉಳಿದುಕೊಂಡಿದೆ. ಸಾಲಾಗಿರುವ ಬಂಡೆಗಳ ಪೈಕಿ ಒಂದರ ಮೇಲೆ ಬ್ರಾಹ್ಮಿ ಲಿಪಿಯಲ್ಲಿ ಸ್ಫುಟವಾದ ಅಕ್ಷರಗಳಿಂದ ಕೆತ್ತಲಾಗಿರುವ ಈ ಬ್ರಹ್ಮಗಿರಿಯ ಶಾಸನದ ಭಾಷೆ ಪ್ರಾಕೃತದಲ್ಲಿದೆ. ಸಹಸ್ರಾರು ವರ್ಷಗಳ ಹಿಂದಿನ ಈ ಬಂಡೆಯ ಮೇಲಿನ ಬರಹ ಶಾಶ್ವತವಾಗಿ ಉಳಿಯಲು ಊರವರು ಅದರ ರಕ್ಷಣೆಯ ಬಗೆಗೆ ವಹಿಸಿದ ಮಹತ್ವದ ಕಾಳಜಿಯೇ ಮುಖ್ಯವಾಗಿದೆ. ಹಾಗೆಯೇ ಅದನ್ನು ರಾಷ್ಟ್ರೀಯ ಮಹತ್ವದ ಸ್ಮಾರಕವೆಂದು ಪರಿಗಣಿಸಿ ಸರಕಾರವೂ ರಕ್ಷಣೆಗೆ ವ್ಯವಸ್ಥೆ ಕೈಗೊಂಡಿದೆ.

ಈ ಶಾಸನ ಹೇಳುವುದೇನು? 'ಸುವರ್ಣಗಿರಿಯಿಂದ ಆರ್ಯಪುತ್ರನ ಮತ್ತು ಮಹಾ ಮಾತ್ರರ ವಚನಾನುಸಾರ ಇಸಿಲದ ಮಹಾಮಾತ್ರರಿಗೆ ಆರೋಗ್ಯವನ್ನು ಹೇಳುವುದು ಮತ್ತು ಹೀಗೆಂದು ತಿಳಿಸುವುದು.

**ದೇವಾನಾಂಪ್ರಿಯನ ಅಪ್ಪಣೆ (ಏನೆಂದರೆ)**

ನಾನು ಉಪಾಸಕನಾಗಿ ಎರಡೂವರೆ ವರ್ಷಗಳಿಗಿಂತ ಹೆಚ್ಚಾಯಿತು. ಆದರೆ ಒಂದು ವರ್ಷದವರೆಗೂ ಹೆಚ್ಚು ಪ್ರಯತ್ನ ಮಾಡಲಿಲ್ಲ. ನಾನು (ಬೌದ್ಧ) ಸಂಘವನ್ನು ದರ್ಶಿಸಿ ಈಗ್ಗೆ






ಒಂದು ವರ್ಷದ ಮೇಲಾಯಿತು. ಆಗಿನಿಂದಲೂ ಅತಿಶಯ ಶ್ರದ್ಧೆಯನ್ನು ವಹಿಸಿದ್ದೇನೆ. ಇದು ವರೆಗೆ ದೇವತೆಗಳೊಡನೆ ಬೆರೆಯದೆ ಇದ್ದ ಜಂಬುದ್ವೀಪದ ಜನರು ಈಗ ಅವರೊಂದಿಗೆ ಕಲೆತ್ತಿದ್ದಾರೆ. ಇವೆಲ್ಲವೂ ಶ್ರದ್ಧೆಯ ಫಲ. ಇದು ಸತ್ಯವಾಗಿಯೂ ಮಹಾತ್ಮರಿಗೆ ಮಾತ್ರ ಲಭ್ಯವಲ್ಲ.






ಸಾಮಾನ್ಯ ಮನುಷ್ಯರೂ ಪ್ರಯತ್ನದಿಂದ ವಿಪುಲವಾದ ಪದವಿಯನ್ನು (ಸ್ವರ್ಗವನ್ನು) ಹೊಂದಲು ಸಾಧ್ಯ. ಸಾಮಾನ್ಯರೂ ಮಹಾತ್ಮರೂ ಈ ರೀತಿಯಾಗಿ ಪ್ರಯತ್ನ ಮಾಡಬೇಕೆಂದು ನನ್ನ ರಾಜ್ಯದ ಗಡಿಗಳ ಜನರೂ ಇದನ್ನು ತಿಳಿಯಬೇಕೆಂದು ಈ ಶ್ರದ್ಧೆಯು ಚಿರಸ್ಥಾಯಿಯಾಗಿರಬೇಕೆಂದೂ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಈ ವಿಷಯವನ್ನು ಇನ್ನೂ ವೃದ್ಧಿ ಮಾಡುತ್ತೇನೆ. ಅಧಿಕವಾಗಿ ವಿಸ್ತರಿಸುತ್ತೇನೆ. ಈಗಿರುವುದಕ್ಕಿಂತ ಒಂದೂವರೆಯಷ್ಟಾದರೂ ಹೆಚ್ಚಿಸುತ್ತೇನೆ. ಈ ಪ್ರಕಟಣೆಯನ್ನು ನನ್ನ ಸಂಚಾರದಲ್ಲಿ 256 ರಾತ್ರೆಗಳು ಕಳೆದ ನಂತರ ಹೊರಡಿಸಲಾಗಿದೆ.

**ದೇವಾನಾಂಪ್ರಿಯನು ಹೀಗೆಂದು ಹೇಳಿರುವನು;**

ತಾಯಿ ತಂದೆಗಳಲ್ಲಿ ಹಾಗೂ ಹಿರಿಯರಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಪ್ರಾಣಿಗಳಲ್ಲಿ ದಯೆ ಇಡಬೇಕು. ಸತ್ಯವನ್ನು ನುಡಿಯಬೇಕು. ಹೀಗೆಯೇ ಶಿಷ್ಯರು ಆಚಾರ್ಯರನ್ನು ಗೌರವಿಸಬೇಕು. ನೆಂಟರಲ್ಲಿ ಸರಿಯಾಗಿ ನಡೆದುಕೊಳ್ಳಬೇಕು. ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದಿರುವ ಧರ್ಮ. ಇದರಿಂದಲೇ ದೀರ್ಘ ಆಯಸ್ಸು ಸಿದ್ಧಿಸುತ್ತದೆ. (ಆದ್ದರಿಂದ) ಪ್ರತಿಯೊಬ್ಬರೂ ಹೀಗೆಯೇ ನಡೆದುಕೊಳ್ಳಬೇಕು.

– ಎಂದು ಬೋಧಿಸುವ ದೇವಾನಾಂಪ್ರಿಯನ ಸುದೀರ್ಘವಾದ ಶಾಸನವನ್ನು ಕನ್ನಡ ಭಾಷೆಗೆ ಅನುವಾದಿಸಿ ದೊಡ್ಡ ಫಲಕದಲ್ಲಿ ಬರೆದಿಡಲಾಗಿದೆ. ಬರಹವಿರುವ ಬಂಡೆಯ ಸುತ್ತಲೂ ಕಟ್ಟೆ ಕಟ್ಟಿ ಬಂಡೆಯ ಮೇಲೇರಲು ಮೆಟ್ಟಲುಗಳನ್ನು ಮಾಡಿ ಅಮೂಲ್ಯವಾದ ಆಸ್ತಿಯಾಗಿ ಜತನದಿಂದ ರಕ್ಷಿಸುತ್ತಿದ್ದಾರೆ ಊರಿನ ಜನತೆ.



# ಗಾಂಧಿವಾದಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ

# ಶ್ರೀರಂಗರಾಜು

**92ರ ಹರೆಯದ ಶ್ರೀರಂಗರಾಜು ಖಾದಿ ವ್ರತಧಾರಿಗಳಾಗಿ, ಗಾಂಧೀಜಿಯವರ ಅನುಯಾಯಿಗಳಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ರಾಷ್ಟ್ರ ಪ್ರಶಸ್ತಿ ಗಳಿಸಿದ ಇವರು ಸಾಧಿಸಿದ ಸಾಧನೆಯನ್ನು ಸರಿಗಟ್ಟಲಾಗುತ್ತಿಲ್ಲ.**

▪ ಎಂ. ಎನ್. ಸುಂದರ ರಾಜ್

**ಈ** ವರ್ಷ ಆಗಸ್ಟ್ ತಿಂಗಳಿಗೆ 90 ವರ್ಷ ತುಂಬುವ ಎಸ್.ಎಲ್. ಶ್ರೀರಂಗ ರಾಜು, ಶಿವಮೊಗ್ಗದ ಶೈಕ್ಷಣಿಕ, ಸಾಮಾಜಿಕ, ಸಹಕಾರ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವಿಭಾಜ್ಯ ಅಂಗವಾಗಿದ್ದಾರೆ. ಇಂದಿಗೂ ಅವರ ಕುಂದದ ಉತ್ಸಾಹ ಯುವಕರನ್ನೂ ನಾಚಿಸುವಂತಿದೆ. ಶಿಸ್ತುಬದ್ಧ ಜೀವನವನ್ನು ಮಾಡುತ್ತಿರುವ ಶ್ರೀರಂಗರಾಜು ತಮ್ಮ ವಿದ್ಯಾರ್ಥಿಗಳಿಗೆ ಪ್ರೀತಿಯ ಮೇಷ್ಟ್ರಾಗಿದ್ದಾರೆ, ಗೆಳೆಯರಿಗೆ ಉತ್ತಮ ಮಾರ್ಗದರ್ಶಕರಾಗಿದ್ದಾರೆ ಮತ್ತು ಕಿರಿಯರಿಗೆ ಆದರ್ಶಪ್ರಾಯರಾಗಿದ್ದಾರೆ. ತಮ್ಮ ಬಾಲ್ಯದಿಂದಲೂ ಖಾದಿಧಾರಿಗಳಾದ ಶ್ರೀಯುತರು ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಾಗಿ ಸರಳ ಜೀವನವನ್ನು ನಡೆಸುತ್ತಿರುವ ಹಿರಿಯ ಜೀವ.

1921 ರಲ್ಲಿ ಚಿತ್ರಗಾರ ಲಕ್ಷ್ಮೀ ಕಾಂತಪ್ಪ ಮತ್ತು ಲಕ್ಷ್ಮಮ್ಮ ದಂಪತಿಗಳ ಮಗನಾಗಿ ಜನಿಸಿದ ಶ್ರೀರಂಗ ರಾಜು ತಮ್ಮ ಪ್ರಾರಂಭಿಕ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸಿ 1934 ರಿಂದ 37 ರವರೆಗೆ ತುಮಕೂರಿನಲ್ಲಿ ಮುಂದುವರೆಸಿದರು. ಇವರ ಸಂಬಂಧಿಗಳಾಗಿದ್ದ ನೀಲಕಂಠ ರಾವ್ ಎಂಬುವವರು ತುಮಕೂರಿನಲ್ಲಿ ಖಾದಿ ಭಂಡಾರ ವನ್ನಿಟ್ಟುಕೊಂಡಿದ್ದರು. 1933 ರಲ್ಲಿ ಹರಿಜನ ಕ್ಷೇಮನಿಧಿ ಸಂಗ್ರಹಕ್ಕೆ ತುಮಕೂರಿಗೆ ಬಂದಿದ್ದರು. ಆಗ ಬಾಲಕ ಶ್ರೀರಂಗ ರಾಜು ತುಮಕೂರಿಗೆ ಹೋಗಿ ಸ್ವಯಂ ಸೇವಕನಾಗಿ ಕಾರ್ಯ ನಿರ್ವಹಿಸಿ ಗಾಂಧೀಜಿಯವರನ್ನು ಹತ್ತಿರದಿಂದ ನೋಡಿ ಪ್ರಭಾವಿತರಾದುದನ್ನು ಹೇಳುವಾಗ ಈಗಲೂ ಭಾವುಕರಾಗುವ ಇವರು ಅಂದಿನಿಂದಲೇ ಖಾದಿ ಧರಿಸುವುದನ್ನು ಒಂದು ವ್ರತವನ್ನಾಗಿ ಸ್ವೀಕರಿಸಿ ಇಂದಿಗೂ ಖಾದಿಧಾರಿಗಳಾಗಿರುವುದು ಇವರ ಹೆಗ್ಗಳಿಕೆ. ಕಳೆದ ತಲೆಮಾರಿನ ನಿಸ್ವಾರ್ಥ ಜೀವಿಗಳಲ್ಲಿ ಶ್ರೀರಂಗರಾಜು ಅವರು ಮಂಚೂಣಿಯಲ್ಲಿದ್ದಾರೆ.

ತಮ್ಮ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಮುಗಿಸಿ ಹೊರ ಬಂದಾಗ ಶ್ರೀರಂಗ ರಾಜುರವರು ಯೌವನದ ಹೊಸ್ತಿಲಲ್ಲಿದ್ದರು. ಆಗ ನಾಗಪ್ಪ ಶೆಟ್ಟರ ಸಲಹೆಯ ಮೇರೆಗೆ ಹುಬ್ಬಳ್ಳಿಗೆ ಹೋಗಿ ಚರಕಾ ಪೆಟ್ಟಿಗೆ ಮಾಡುವುದನ್ನು ಕಲಿತುಕೊಂಡು ಬಂದು ಶಿವಮೊಗ್ಗದಲ್ಲಿ ಇನ್ನೇನು ತಯಾರಿಕಾಕೇಂದ್ರವನ್ನು ಸ್ಥಾಪಿಸಬೇಕು ಎನ್ನುವಷ್ಟರಲ್ಲಿ 1942ರ ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾಯಿತು. ಗಾಂಧೀಜಿಯವರ ಕರೆಯಂತೆ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಹೋರಾಟಕ್ಕಿಳಿದರು. ಆಗ ಅವರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ಸುಮಾರು ಆರುತಿಂಗಳು ಸೆರೆವಾಸದಿಂದ ಮುಕ್ತರಾಗಿ ಶಿವಮೊಗ್ಗೆಗೆ ಬಂದಾಗ ಜೀವನೋಪಾಯಕ್ಕಾಗಿ ಏನಾದರೂ ಮಾಡುವ ತವಕ. ಆಗ ಅವರಿಗೆ ಶಾಲೆ ಪ್ರಾರಂಭಿಸಲು ಪ್ರೇರೇಪಣೆ ಮಾಡಿದವರು ಸಂತೆಬೆನ್ನೂರಿನ ವೆಂಕಟಕೃಷ್ಣಯ್ಯನವರೆಂಬ ಕನ್ನಡ ಪಂಡಿತರು. ಶಾಲೆ ಪ್ರಾರಂಭಿಸಿದರೆ ಸಮಾಜಕ್ಕೂ ಒಳಿತಾಗುತ್ತದೆ ಮತ್ತು ಇವರಿಗೂ ಉದ್ಯೋಗ ಸಿಗುತ್ತದೆ ಎಂಬ ಸದುದ್ದೇಶದಿಂದ ಟಿ.ಡಿ.ಶಂಕರ ನಾರಾಯಣರಾವ್, ಪಾಪಯ್ಯರಾಜು, ಚಂದ್ರಶೇಖರ ಶಾಸ್ತ್ರಿ, ಶ್ರೀನಿವಾಸ ಮೂರ್ತಿ ಮತ್ತು ಹೆಚ್.ಎಸ್.ನಾರಾಯಣ ಭಟ್ಟರತೊಡನೆ ಸೇರಿ ದೇಶೀಯ ವಿದ್ಯಾಲಯವನ್ನು 1943 ರಲ್ಲಿ ಪ್ರಾರಂಭಿಸಿದರು. ಮೈಸೂರಿನ ಸಂಪತ್ಗಿರಿ ಅಯಂಗಾರ್ ಅವರ ಸಲಹೆಯ ಮೇಲೆ ದೇಶೀಯ ವಿದ್ಯಾಶಾಲೆ 1948ರಲ್ಲಿ ನೊಂದಣಿಯಾಗಿ ಕಡಿದಾಳ್



**ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಕ್ಕೆ ಎರಡು ಬಾರಿ ತುರಂಗವಾಸವನ್ನು ಅನುಭವಿಸಿದ ರಾಜು ಅವರು ಅಪ್ರತಿಮ ದೇಶಭಕ್ತರು. ಶಿವಮೊಗ್ಗ ಜಿಲ್ಲೆಯಲ್ಲಿನ ಸ್ವಾತಂತ್ರ ಹೋರಾಟಗಾರರನ್ನು ಸಂಘಟಿಸಿ ಸಾತಂತ್ರ ಹೋರಾಟಗಾರರ ಸಂಘವನ್ನು ರೂಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.**

ಮಂಜಪ್ಪನವರು ಇದರ ಪ್ರಥಮ ಅಧ್ಯಕ್ಷರಾಗಿಯೂ, ರತ್ನಮ್ಮ ಮಾಧವರಾವ್ ಅವರು ಕಾರ್ಯದರ್ಶಿಯಾಗಿಯೂ ನಿಯುಕ್ತರಾದರು. ಕಡಿದಾಳರು ಮುಖ್ಯಮಂತ್ರಿಯಾದ ಮೇಲೆ ಡಿವಿಎಸ್ ನ ಅಧ್ಯಕ್ಷರಾಗಿ ಬದರಿ ನಾರಾಯಣ ಅಯ್ಯಂಗಾರರು ಅಧ್ಯಕ್ಷರಾದರು. ಶ್ರೀರಂಗರಾಜು ಮತ್ತು ಅವರ ಮಿತ್ರರ ಪರಿಶ್ರಮದಿಂದಾಗಿ ದೇಶೀಯ ವಿದ್ಯಾಶಾಲೆ ಇಂದು ಹೆಮ್ಮರವಾಗಿ ಬೆಳೆದು ನೂರಾರು ಜನರಿಗೆ ಆಶ್ರಯ ನೀಡಿದೆ, ಸಹಸ್ರಾರು ಜನರಿಗೆ ಜ್ಞಾನ ದಾಸೋಹ ನಡೆಸಿದೆ. ಶ್ರೀರಂಗರಾಜು ಒಟ್ಟು 33 ವರ್ಷಗಳ ಕಾಲ ಉತ್ತಮ ಶಿಕ್ಷಕರಾಗಿ ಸೇವೆ ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರ ಸೇವೆಯನ್ನು ಪರಿಗಣಿಸಿ 1965 ರಲ್ಲಿ ರಾಜ್ಯ ಸರ್ಕಾರದಿಂದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದರು. ಅದೇ ರೀತಿ 1975 ರಲ್ಲಿ ರಾಷ್ಟ್ರಪ್ರಶಸ್ತಿಯನ್ನು ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಫಕ್ರುದ್ದೀನ್ ಆಲಿಯವರಿಂದ ಪಡೆದರು.

ಸ್ವಾತಂತ್ರ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಕ್ಕೆ ಎರಡು ಬಾರಿ ತುರಂಗವಾಸವನ್ನು ಅನುಭವಿಸಿದ ರಾಜು ಅವರು ಅಪ್ರತಿಮ ದೇಶಭಕ್ತರು. ಶಿವಮೊಗ್ಗ ಜಿಲ್ಲೆಯಲ್ಲಿನ ಸ್ವಾತಂತ್ರ ಹೋರಾಟಗಾರರನ್ನು ಸಂಘಟಿಸಿ ಸಾತಂತ್ರ ಹೋರಾಟಗಾರರ ಸಂಘವನ್ನು ರೂಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವೃತ್ತಿಯಿಂದ ನಿವೃತ್ತರಾದರೂ ಸಮಾಜ ಸೇವೆ ಮಾಡುವ ಪ್ರವೃತ್ತಿಯಿಂದ ದೂರವಾಗಲಿಲ್ಲ. ಇಂದಿಗೂ ರಾಷ್ಟ್ರೀಯ ಯುವಜನ ಸಂಘ,ಹಿಂದಿ ಪ್ರಚಾರ ಸಂಘ, ಭಾರತ್ ಸೇವಕ್ ಸಮಾಜ, ಭಾರತ ಸೇವಾದಳ, ಕರ್ನಾಟಕ ಸಂಘ, ಕೋಟೆ ಶ್ರೀ ಮಾರಿಕಾಂಬ ಸಮಿತಿ, ಹನುಮ ಜಯಂತಿ ಉತ್ಸವ ಸಮಿತಿ, ಶ್ರೀ ರಾಮಣ್ಣ ಶ್ರೇಷ್ಠಿ ಪಾರ್ಕಿನ ಶ್ರೀ ಸಿದ್ಧಿ ವಿನಾಯಕ ಸ್ವಾಮಿ ಸೇವಾ ಸಮಿತಿ ಮುಂತಾದ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಈಗಲೂ ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಸಹಕಾರ ಕ್ಷೇತ್ರಕ್ಕೂ ಇವರ ಸೇವೆ ಸಲ್ಲಿಸಿದ್ದಾರೆ. ಸಿಟಿ–ಕೋ ಆಪರೇಟಿವ್ ಬ್ಯಾಂಕ್, ಗೃಹ ನಿರ್ಮಾಣ ಸಹಕಾರ ಸಂಘ, ಚರಕ–ಗ್ರಾಮೋದ್ಯೋಗ ಸಂಘದಲ್ಲಿಯೂ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಬಾಪೂಜಿಯವರನ್ನು ಆದರ್ಶವಾಗಿಟ್ಟುಕೊಂಡು ಖಾದಿ ಪ್ರಚಾರ, ಹರಿಜನ ಸೇವೆ ಮುಂತಾದ ಕಾರ್ಯಗಳಲ್ಲಿಯೂ ಪಾಲ್ಗೊಂಡಿದ್ದಾರೆ.

ಶ್ರೀರಂಗ ರಾಜು ಎಲ್ಲರಿಗೂ ಪ್ರಿಯರಾಗುವುದು ಅವರ ಕ್ರಿಯಾಶೀಲ ವ್ಯಕ್ತಿತ್ವದಿಂದ. ಅವರ ಧರ್ಮಾಭಿಮಾನ, ಸಮಾಜ ಸೇವಾ ಕೈಂಕರ್ಯ, ರಾಷ್ಟ್ರ ಪ್ರೇಮ, ಸರಳ ಜೀವನ ಅನುಪಮವಾದದ್ದು. ತಾವು ಜನಿಸಿದ ಸೋಮವಂಶ ಆರ್ಯ ಕ್ಷತ್ರಿಯ ಕುಲಕ್ಕೆ ಭೂಷಣಪ್ರಾಯರಾಗಿದ್ದಾರೆ. ಹೀಗಾಗಿ ಇವರ ಸಮಾಜದ ಕೇಂದ್ರ ಸಂಸ್ಥೆಯು ' ಸಮಾಜ ಸೇವಾ ಧುರೀಣ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದು ಪ್ರಶಸ್ತವಾಗಿಯೇ ಇದೆ. ಇವರ ತಾತ ಚಿತ್ರಗಾರ್ ಕೆ.ನಾರಾಯಣಪ್ಪ ನವರು ಒಂದು ನೂರು ವರ್ಷಗಳ ಹಿಂದೆ ರಚಿಸಿದ ವಿಶ್ವರೂಪ ದರ್ಶನ ಜಲವರ್ಣ ಕಲಾಕೃತಿಯನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದು ಮನೆಗೆ ಬಂದವರಿಗೆ ಹೆಮ್ಮೆಯಿಂದ ತೋರಿಸುತ್ತಾರೆ. ಬಿ.ಎ.ಪದವೀಧರರಾದ ಶ್ರೀರಂಗರಾಜು ನಮ್ಮ ಶಿವಮೊಗ್ಗಕ್ಕೆ ಭೂಷಣ ಪ್ರಾಯರಾಗಿದ್ದಾರೆ. ತಮ್ಮ ಇಳಿವಯಸ್ಸಿನಲ್ಲೂ ಪಾದರಸದಂತೆ ಚಟುವಟಿಕೆಯಿಂದಿರುವ ಶ್ರೀಯುತರ ಉತ್ಸಾಹ, ಕಾರ್ಯಶೀಲತೆ ನಮ್ಮಯುವಕರಿಗೊಂದು ಮಾರ್ಗದರ್ಶಿ. ಇನ್ನೂ ಕೆಲಕಾಲ ಸುಖ ಮತ್ತು ನೆಮ್ಮದಿಯಿಂದ ಬಾಳಲಿ ಎಂಬ ಹಾರೈಕೆ ನಮ್ಮದು.

# ಇದು ಮಹಿಳಾ ಕಿಸಾನ್ ಮಹಾತ್ಮೆ!

▪ ಶಿವಲಿಂಗ ಸಿದ್ನಾಳ





**ಎಕರೆಗಟ್ಟಲೇ ಒಂದೇ ಬೆಳೆ ಬೆಳೆಯುವ ಬದಲು ಎಕರೆ ತುಂಬ ನಾನಾ ಬೆಳೆ ಬೆಳೆಯುವ ವಿಚಾರಕ್ಕೆ ಬಂದು 1.10 ಎಕರೆ ಜಮೀನಿನಲ್ಲಿ ಹೀರೆ, ಹಾಗಲ, ಕುಂಬಳ, ಬದನೆ, ಮೆಣಸು, ನುಗ್ಗೆ, ಹೂಕೋಸು, ಎಲೆಕೋಸು, ಬೀನ್ಸ್ ಮತ್ತು ಬಾಳೆ ಸೇರಿದಂತೆ 34 ನಮೂನೆಯ ತರಕಾರಿಯನ್ನು ಸಾವಯವ ಪದ್ಧತಿ ಅನುಸರಿಸಿ ಬೆಳೆದು ಅಚ್ಚರಿ ಮೂಡಿಸಿದ್ದಾರೆ.**

ಬದಲಾಗುತ್ತಿರುವ ದಿನಮಾನಗಳಲ್ಲಿಯೂ ಸಹ 'ಗದ್ದೆ ಮತ್ತು ಗದ್ದುಗೆ ಗಂಡಿಗೆ ಅರ್ಪಿತ, ಮನೆ ಮತ್ತು ಒಲೆ ಹೆಣ್ಣಿಗೆ ಸೀಮಿತ' ಎಂಬ ಅಘೋಷಿತ ನಿಯಮಗಳು ಅಲ್ಲಲ್ಲಿ ಕಾಣಬರುತ್ತವೆ. ಸಾಂಪ್ರದಾಯಿಕ ಶ್ರಮ ವಿಭಜನೆಗೆ ತಿಲಾಂಜಲಿ ಹೇಳಿ ಗದ್ದೆಗೂ ಸೈ, ಗದ್ದುಗೆಗೂ ಸೈ ಎಂದು ಬದುಕಿ ತೋರಿಸಿದ ಶ್ರಮಜೀವಿ ಕಿಸಾನ್ ಮಹಿಳೆಯರು ಸಾಕಷ್ಟಿದ್ದಾರೆ.

ಮನೆಯಲ್ಲಿ ಅಚ್ಚುಕಟ್ಟಾಗಿ, ಹಿತಮಿತವಾಗಿ ಅಡಿಗೆ ಮಾಡುವ ಕಲೆಯನ್ನೇ ಕೃಷಿಯಲ್ಲೂ ಪ್ರಯೋಗಿಸಿ, ಕಡಿಮೆ ಜಮೀನಿನಲ್ಲಿ, ಕಡಿಮೆ ಖರ್ಚಿನಲ್ಲಿ ವೈವಿಧ್ಯಮಯ ಫಸಲು ಬೆಳೆದು, ಹೆಚ್ಚು ಲಾಭ ಗಳಿಸುವ ಮೂಲಕ ತಾವೂ ಕೂಡ ಕೃಷಿ ಪಂಡಿತರು ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಬೆಳಗಾವಿ ಜಿಲ್ಲೆ, ರಾಯಬಾಗ ತಾಲೂಕಿನ ಗಡಿಯಲ್ಲಿರುವ ಹಂದಿಗುಂದ ಗ್ರಾಮದ ಸಾವಿತ್ರಿ ಅಡಿವೆಪ್ಪ ವಾಲಿ ಮತ್ತು ಶೋಭಾ ಪ್ರಕಾಶ ಮಗದುಮ್ (ಬಿರಡಿ) ಎಂಬುವರೇ ಸಾಹಸಿ ಮಹಿಳೆಯರು.

**1.10 ಎಕರೆ ಜಮೀನಿನಲ್ಲಿ ಬರೋಬ್ಬರಿ 34 ಬೆಳೆ:**

ಸಾವಿತ್ರಿ ಅಡಿವೆಪ್ಪ ವಾಲಿ ಎಂಬ ಮಹಿಳೆ 1 ಎಕರೆ 10 ಗುಂಟೆ ಜಮೀನಿನಲ್ಲಿ ಬರೊಬ್ಬರಿ 34 ವಿಧದ ಮಿಶ್ರ ಬೆಳೆ ಮಾಡಿ ದಾಖಲೆ ಬರೆದಿದ್ದಾರೆ. ಪತಿ ಅಡಿವೆಪ್ಪ ಕಡಿಮೆ ಜಮೀನಿನಲ್ಲಿ ಸಾಮಾನ್ಯ ಕೃಷಿ ಪದ್ಧತಿಯಿಂದ ಹೊಟ್ಟೆ ತುಂಬುವುದು ಕಷ್ಟವಾದಾಗ ಪತ್ನಿ ಸಾವಿತ್ರಿ ಜಾನುವಾರು ಸಾಕಣೆ ಜೊತೆ ಸ್ಯಾವಿಗೆ ತಯಾರಿಸುವ ಯಂತ್ರ ನಡೆಸುತ್ತ ಜೀವನಕ್ಕೆ ನೆರವಾಗುತ್ತಿದ್ದರು. ಕ್ರಮೇಣ ಕೃಷಿಯತ್ತ ಗಮನ ಹರಿಸಿದ ಮಹಿಳೆ ಎಕರೆಗಟ್ಟಲೇ ಒಂದೇ ಬೆಳೆ ಬೆಳೆಯುವ ಬದಲು ಎಕರೆ ತುಂಬ ನಾನಾ ಬೆಳೆ ಬೆಳೆಯುವ ವಿಚಾರಕ್ಕೆ ಬಂದು 1.10 ಎಕರೆ ಜಮೀನಿನಲ್ಲಿ ಹೀರೆ, ಹಾಗಲ, ಕುಂಬಳ, ಬದನೆ, ಮೆಣಸು, ನುಗ್ಗೆ, ಹೂಕೋಸು, ಎಲೆಕೋಸು, ಬೀನ್ಸ್ ಮತ್ತು ಬಾಳೆ ಸೇರಿದಂತೆ 34 ನಮೂನೆಯ ತರಕಾರಿಯನ್ನು ಸಾವಯವ ಪದ್ಧತಿ ಅನುಸರಿಸಿ ಬೆಳೆದು ಅಚ್ಚರಿ ಮೂಡಿಸಿದ್ದಾರೆ. ಇಷ್ಟು ಭೂಮಿಯಲ್ಲಿ ಕಬ್ಬು ಬೆಳೆದಿದ್ದರೆ ಗರಿಷ್ಠ 60 ರಿಂದ 70 ಸಾವಿರ ಆದಾಯ ಬರುತ್ತಿತ್ತು. ಆದರೆ ಅರ್ಧದಷ್ಟು ಖರ್ಚಾಗುತ್ತಿತ್ತು. ಆದರೆ, ಸಮ್ಮಿಶ್ರ ಬೆಳೆಯಿಂದ ಶೇ. 20 ರಷ್ಟು ಮಾತ್ರ ಖರ್ಚು ಮಾಡಿ ಶೇ.80 ರಷ್ಟು ಲಾಭ ಗಳಿಸಿದ್ದಾರೆ.

**ಅರ್ಧ ಎಕರೆ ಜಮೀನಿನಲ್ಲಿ 1 ಲಕ್ಷ ಆದಾಯ**

ಇದೇ ಊರಿನ ಶೋಭಾ ಪ್ರಕಾಶ ಮಗದುಮ್ (ಬಿರಡಿ) ಎಂಬ ಮಹಿಳೆ ಕೇವಲ 20 ಗುಂಟೆ ಜಮೀನಿನಲ್ಲಿ ಬೆಂಡೆ ಮತ್ತು ಬೀನ್ಸ್ ಎರಡೇ ಬೆಳೆ ಬೆಳೆದು ಈಗಾಗಲೇ ಮೊದಲ ಹಂತದಲ್ಲಿ 60 ಸಾವಿರ ರೂ. ಆದಾಯ ಗಳಿಸಿದರೆ, ಇನ್ನೂ 40 ಸಾವಿರ ಆದಾಯ ಹರಿದು ಬರುವ ನಿರೀಕ್ಷೆಯಿದೆ. ರಾಸಾಯನಿಕ ಬಳಸದೇ ಹಿಂಗು, ಮಜ್ಜಿಗೆ ಬಳಸಿ ಬೆಳೆಸಿದ ಇವರ ಶುದ್ಧ ಸಾವಯವ ತರಕಾರಿಗೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆ ಸಿಗುವುದರಿಂದ ಹೆಚ್ಚು ಲಾಭ ಗಳಿಸುತ್ತಿದ್ದಾರೆ. ಕಬ್ಬಿನ ಬೆಳೆಗೂ ಇದೇ ಮಾದರಿ ಪ್ರಯೋಗಿಸುವ ಮೂಲಕ ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಗಳಿಸುವ ನಿರೀಕ್ಷೆಯಲ್ಲಿದ್ದಾರೆ. ತಾವು ಬೆಳೆದ ಉತ್ಪನ್ನಕ್ಕೆ ದೂರದ ಸ್ಪರ್ಧಾತ್ಮಕ ಮಾರುಕಟ್ಟೆ ಹುಡುಕುವ ಮತ್ತು ಸೃಷ್ಟಿಸುವ ಜಾಣ್ಮೆಯನ್ನೂ ಹೊಂದಿದ್ದಾರೆ.

**ಮಹಿಳಾ ಕಿಸಾನ್ ಮಹಾತ್ಮೆ:**

ಕೇಂದ್ರ ಮತ್ತು ರಾಜ್ಯ ಸರಕಾರ ಸೇರಿ ರಾಷ್ಟ್ರೀಯ



ಜೀವನೋಪಾಯ ಸಂವರ್ಧನಾ ಸಂಸ್ಥೆಯ ಅನುದಾನದಲ್ಲಿ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ ಹಮ್ಮಿಕೊಳ್ಳಲಾಗುತ್ತಿದ್ದು, ದುಡಿವ ಮಹಿಳೆಗೆ ಸಂಸ್ಕಾರ ನೀಡಲಾಗುತ್ತಿದೆ. ಮಹಿಳಾ ಸಂಘಗಳೆಂದರೆ ಕೇವಲ ವಾರಕ್ಕೆ ನೂರು ರೂ. ಸೇರಿಸಿ ಸಾಲ ನೀಡುವ ಬಡ್ಡಿ ಸಂಗ್ರಹಿಸುವ ಕಾಯಕಕ್ಕೆ ಮಾತ್ರ ಸೀಮಿತವಾಗುತ್ತಿರುವ ಈ ದಿನಗಳಲ್ಲಿ ಮಹಿಳಾ ಕಿಸಾನ್ ಘಟಕ ಸ್ಥಾಪಿಸಿ ವಿವಿಧ ಕೃಷಿ ಮತ್ತು ಪೂರಕ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇಂಥ ಅನುಷ್ಠಾನ ಸಂಸ್ಥೆಗಳು ಮಾಡುತ್ತಿವೆ. ಪ್ರತಿ ಊರಿಗೆ ಮಹಿಳಾ ಕಿಸಾನ್ ಘಟಕ ಸ್ಥಾಪಿಸಿ ವಾರಕ್ಕೊಮ್ಮೆ ಸುಸ್ಥಿರ ಕೃಷಿ ಬಗ್ಗೆ ವಿಡಿಯೋ ಆಧಾರಿತ ತರಬೇತಿ ನೀಡಲಾಗುತ್ತದೆ. ರಾಜ್ಯದಲ್ಲಿ ಗುಬ್ಬಿ ಮತ್ತು ರಾಯಭಾಗ ತಾಲೂಕಿನಲ್ಲಿ ರಾಕೆಟ್ ಪ್ರೋಜೆಕ್ಟ್ ಆರಂಭಿಸಲಾಗಿದ್ದು, ಈ ವಿಭಿನ್ನ ತರಬೇತಿಯ ಪರಿಣಾಮದಿಂದ ಈ ಭಾಗದಲ್ಲಿ ಮಹಿಳಾ ಕಿಸಾನ್ ಮಹಾತ್ಮೆಯಿಂದ ಮಹಿಳೆಯರು ಕೃಷಿಯಲ್ಲಿ ಬಲಾಢ್ಯರಾಗುತ್ತಿದ್ದಾರೆ.

**ಇವರು ಅನುಸರಿಸುವ ಮುಖ್ಯ ವಿಧಾನಗಳು**

**ಭೂಮಿಗೆ ಜೀವಾಮೃತ ಮತ್ತು ಬೀಜಕ್ಕೆ ಸಂಸ್ಕಾರ:** ಸುಸ್ಥಿರ ಕೃಷಿಯಲ್ಲಿ ಈ ಸಾಧಕ ಮಹಿಳೆಯರು ಮುಖ್ಯವಾಗಿ ಎರಡು ವಿಧಾನಗಳನ್ನು ಅನುಸರಿಸುತ್ತಾರೆ. ಮೊದಲನೆಯದು ಭೂಮಿಗೆ ಜೀವಾಮೃತ ಉಣಿಸುವುದು ಮತ್ತು ಎರಡನೆಯದು ಬೀಜಕ್ಕೆ ಸಂಸ್ಕಾರ ನೀಡುವುದು.

**ಭೂಮಿಗೆ ಜೀವಾಮೃತ:** 1 ಎಕರೆಗೆ 2 ಕೆಜಿ ದ್ವಿದಳ ಧಾನ್ಯದ ಹಿಟ್ಟು, 2ಕೆಜಿ ಸಾವಯವ ಬೆಲ್ಲ, 2 ಬೊಗಸೆ ಅದೇ ಹೊಲದ ಮಣ್ಣು, 10 ಕೆಜಿ ಗೋವಿನ ಸಗಣಿ, 2 ಲೀ. ಆಕಳ ಗಂಜಲ(ಮೂತ್ರ)ವನ್ನು 200 ಲೀ. ನೀರಲ್ಲಿ ಮಿಶ್ರಣ ಮಾಡಿ, 5 ದಿನ ನೆರಳಲ್ಲಿಟ್ಟು ದಿನಕ್ಕೆ 2 ಸಾರಿ ಚೆನ್ನಾಗಿ ತಿರುವಿ 6ನೇ ದಿನ ಭೂಮಿಗೆ ಉಣಿಸುವುದರಿಂದ ಎರೆಹುಳು ಹುಟ್ಟಿ, ಪೋಷಕಾಂಶ ದೊರೆಯುವುದರಿಂದ ರಾಸಾಯನಿಕ ಮುಕ್ತ ಆಹಾರ ಬೆಳೆಯಬಹುದು.

**ಬೀಜಕ್ಕೆ ಸಂಸ್ಕಾರ:** ಎಕರೆಗೆ 1 ಲೀ ಜವಾರಿ ಆಗಳ ಗಂಜಲ(ಮೂತ್ರ)ವನ್ನು 9 ಲೀ ನೀರಿನಲ್ಲಿ ಬೆರೆಸಿ 10 ನಿಮಿಷ ಬೀಜ ನೆನೆಸಿ ನಂತರ ಆರಿಸಿ ಬಿತ್ತುವುದರಿಂದ ರೋಗ ನಾಶವಾಗುವುದರಿಂದ ಯಾವುದೇ ರಾಸಾಯನಿಕ, ಕೀಟನಾಶಕ ಸಿಂಪಡಿಸುವ ಅವಶ್ಯಕತೆ ಇರುವುದಿಲ್ಲವಾದ್ದರಿಂದ ವಿಷರಹಿತ ಆಹಾರ ಬೆಳೆಯಬಹುದು. ಈ ಸುಸ್ಥಿರ ಕೃಷಿ ಪದ್ಧತಿ ಅನುಸರಿಸುವುದರಿಂದ ಬೀಜದ ಪ್ರಮಾಣವೂ ಅರ್ಧದಷ್ಟು ಇಳಿಕೆಯಾಗುತ್ತದೆ. ಬೀಜ ಮತ್ತು ಸಾಲಗಳ ಮಧ್ಯೆ ಅಂತರವಿರುವುದರಿಂದ ಗಾಳಿ, ಬೆಳಕು, ನೀರು ಸಮಪ್ರಮಾಣದಲ್ಲಿ ದೊರೆತು ಸಮೃದ್ಧ ಬೆಳೆ ಬೆಳೆಯಬಹುದು.

ಇಂಥ ಕೃಷಿ ಪದ್ಧತಿ ಅನುಸರಿಸುವಂತೆ ಮಹಿಳಾ ರೈತರಿಗೆ ಮಾಹಿತಿ ನೀಡುತ್ತಿರುವ ಮಹಾಲಿಂಗ ಗುಂಜೆಟ್ಟಿ (9845538312), ಶಿವರಾಜ ತಳವಾರ (7760005652) ಸಹಜ ಕೃಷಿಗೆ ಉತ್ತೇಜನ ನೀಡುತ್ತಿದ್ದಾರೆ. ಇವರನ್ನು ನೀವೂ ಸಂಪರ್ಕಿಸಬಹುದು.

# ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ









ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ 2014 ಮತ್ತು 2015ರ ಸಾಲಿನ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. 2014 ಮತ್ತು 2015 ರ ಸಾಲಿನ ಟೀಯೆಸ್ಸಾರ್ ಪ್ರಶಸ್ತಿಯನ್ನು ಕ್ರಮವಾಗಿ ಹಿರಿಯ ಪತ್ರಕರ್ತರಾದ ಗಂಗಾಧರ ಮೊದಲಿಯಾರ್, ಸನತ್ ಕುಮಾರ್ ಬೆಳಗಲಿ ಅವರಿಗೆ, ಮೊಹರೆ ಹಣಮಂತರಾಯ ಪ್ರಶಸ್ತಿಯನ್ನು ಬಸವರಾಜ ಸ್ವಾಮಿ, ಟಿ. ವೆಂಕಟೇಶ್ ಅವರಿಗೆ, ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿಯನ್ನು ಜಿ ಎನ್ ಮೋಹನ್, ಶೇಷಮೂರ್ತಿ ಅವಧಾನಿ ಅವರಿಗೆ, ಪರಿಸರ ಪತ್ರಿಕೋದ್ಯಮ ಪ್ರಶಸ್ತಿಯನ್ನು ಗಾಣಧಾಳು ಶ್ರೀಕಂಠ,
ಡಾ. ಎನ್. ಜಗದೀಶ್ ಕೊಪ್ಪ ಅವರಿಗೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದಾನ ಮಾಡಿದರು.



# ಶೌಚಾಲಯಕ್ಕಾಗಿ

## ಉಪವಾಸ ಕುಳಿತು ಸ್ವಾಭಿಮಾನ ಮೆರೆದ ವಿದ್ಯಾರ್ಥಿನಿ ಮಲ್ಲಮ್ಮ

■ ತುಕಾರಾಂ ಬಿ . ವಿ.
ಸಹಾಯಕ ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಶೌಚಾಲಯ ಇಲ್ಲದಿದ್ದರೇನಂತೆ, ಬಯಲಲ್ಲೇ ಬಹಿರ್ದೆಸೆಗೆ ಹೋಗಿ, ಕೆಲಸ ಮುಗಿಸಿಕೊಂಡು ಬಂದರಾಯಿತು ಎನ್ನುವಂತಹ ಮನೋಭಾವ ಸಾಮಾನ್ಯವಾಗಿ ಬಹುತೇಕರದ್ದು. ಆದರೆ ಮನೆಯಲ್ಲಿ ಶೌಚಾಲಯ ಕಟ್ಟಿಸಲು ನಿರಾಕರಿಸಿದ್ದಕ್ಕೆ ಬೇಸತ್ತ ಮಲ್ಲಮ್ಮ ಸಣ್ಣನಿಂಗಮ್ಮ ಬಾಗಲಾಪುರ ಎಂಬ 10 ನೇ ತರಗತಿಯ ವಿದ್ಯಾರ್ಥಿನಿ, ಮನೆಯವರ ವಿರುದ್ಧವೇ ಉಪವಾಸ ಸತ್ಯಾಗ್ರಹ ಮಾರ್ಗ ಅನುಸರಿಸಿ, ಎಲ್ಲರ ಗಮನ ಸೆಳೆದ ಘಟನೆ ಗಂಗಾವತಿ ತಾಲೂಕು ಡಣಾಪುರ ಗ್ರಾಮದಲ್ಲಿ ನಡೆದಿದೆ.

ಕೊಪ್ಪಳ ಜಿಲ್ಲೆಯನ್ನು ಈ ವರ್ಷಾಂತ್ಯದೊಳಗೆ ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ರಾಮಚಂದ್ರನ್ ಅವರು, ಎಂದಿನಂತೆ ಜನಪ್ರತಿನಿಧಿಗಳು ಹಾಗೂ ಇತರೆ ಅಧಿಕಾರಿಗಳೊಂದಿಗೆ ಗ್ರಾಮಗಳಲ್ಲಿ ಕೈಗೊಳ್ಳುವ ಜಾಗೃತಿ ಕಾರ್ಯಕ್ರಮಗಳಡಿ ಜು. 14 ರಂದೂ ಸಹ ಗಂಗಾವತಿ ತಾಲೂಕು ಡಣಾಪುರ ಗ್ರಾಮದಲ್ಲಿ ಶೌಚಾಲಯ ನಿರ್ಮಿಸಿಕೊಳ್ಳುವಂತೆ ಸಾರ್ವಜನಿಕರ ಮನವೊಲಿಸಲು ಮನೆ ಮನೆ ಭೇಟಿ ನೀಡಲು ತೆರಳಿದ್ದರು. ಈ ಸಂದರ್ಭದಲ್ಲಿ ಆ ಗ್ರಾಮದ ಸಣ್ಣನಿಂಗಮ್ಮ ಅವರ ಮನೆಗೆ ಭೇಟಿ ನೀಡಿದಾಗ, ಸಣ್ಣನಿಂಗಮ್ಮ ಅವರ ಮಗಳು ಮಲ್ಲಮ್ಮ ಶೌಚಾಲಯ ಕಟ್ಟಿಸುವಂತೆ ಒತ್ತಾಯಿಸಿ, ಉಪವಾಸ ಸತ್ಯಾಗ್ರಹ ಕೈಗೊಂಡ ವಿಷಯ ಬೆಳಕಿಗೆ ಬಂದಿದೆ.

ಡಣಾಪುರ ಗ್ರಾಮ ಪಂಚಾಯತಿಯು ಹೆಬ್ಬಾಳ, ಹೆಬ್ಬಾಳಕ್ಯಾಂಪ್, ಮಡ್ಡಿಕ್ಯಾಂಪ್ ಮತ್ತು ಮಾರುತಿ ನಗರವನ್ನು ಒಳಗೊಂಡಿದ್ದು, ಇಲ್ಲಿ ಒಟ್ಟು 1497 ಕುಟುಂಬಗಳಿವೆ. ಈವರೆಗೂ 759 ಕುಟುಂಬಗಳು ಮಾತ್ರ ಶೌಚಾಲಯ ಹೊಂದಿದ್ದು, ಅದನ್ನು ಬಳಕೆ ಮಾಡುತ್ತಿದ್ದಾರೆ. ಉಳಿದಂತೆ 738 ಕುಟುಂಬಗಳು ಶೀಘ್ರ ನಿರ್ಮಿಸಿಕೊಳ್ಳುವುದಾಗಿ ಒಪ್ಪಿಗೆ ಸೂಚಿಸಿದ್ದಾರೆ.

ಡಣಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 10 ನೇ ತರಗತಿ ವಿದ್ಯಾರ್ಥಿನಿ ಮಲ್ಲಮ್ಮ ಅವರದು ಬಡ ಕುಟುಂಬ. ಶಾಲೆಗಳಲ್ಲಿ, ಸಮಾರಂಭಗಳಲ್ಲಿ ಹೀಗೆ ಅನೇಕ ಕಾರ್ಯಕ್ರಮಗಳಲ್ಲಿ 'ವೈಯಕ್ತಿಕ ಶೌಚಾಲಯ ಒಂದು ಕುಟುಂಬದ ಸ್ವಾಭಿಮಾನದ ಸಂಕೇತ' ಎಂಬುದಾಗಿ ಶಿಕ್ಷಕರುಗಳು, ಗಣ್ಯರು ನೀಡಿದ ಜಾಗೃತಿಯಿಂದಾಗಿ ಸ್ವಚ್ಛತೆಯ ಅರಿವು ಹಾಗೂ ಶೌಚಾಲಯದ ಮಹತ್ವವನ್ನು ಅರಿತಿದ್ದ ಮಲ್ಲಮ್ಮ ಸ್ವಾಭಿಮಾನಕ್ಕಾಗಿ ಮನೆಯಲ್ಲಿ ಶೌಚಾಲಯ ಇರಲೇಬೇಕೆಂದು ಬಯಸಿದಳು. ಈ ಕುರಿತು ತನ್ನ ತಾಯಿಗೆ ಬೇಡಿಕೆ ಇಟ್ಟ ಮಲ್ಲಮ್ಮನಿಗೆ ದೊರೆತಿದ್ದು, ಬಡತನ ಹಾಗೂ ಸ್ಥಳದ ಅಭಾವದ ಕಾರಣ ಶೌಚಾಲಯ ಕಟ್ಟಿಸಲು ಸಾಧ್ಯವಿಲ್ಲ ಎಂಬ ನಿರಾಸೆಯ ಉತ್ತರ. ಇದರಿಂದ ತೀವ್ರ ನೊಂದ ಮಲ್ಲಮ್ಮ, ಶೌಚಾಲಯ ಕಟ್ಟಿಸಲು ಒಪ್ಪುವವರೆಗೂ ಉಪವಾಸ





**'ವೈಯಕ್ತಿಕ ಶೌಚಾಲಯ ಒಂದು ಕುಟುಂಬದ ಸ್ವಾಭಿಮಾನದ ಸಂಕೇತ' ಎಂಬುದಾಗಿ ಶಿಕ್ಷಕರುಗಳು, ಗಣ್ಯರು ನೀಡಿದ ಜಾಗೃತಿಯಿಂದಾಗಿ ಸ್ವಚ್ಛತೆಯ ಅರಿವು ಹಾಗೂ ಶೌಚಾಲಯದ ಮಹತ್ವವನ್ನು ಅರಿತಿದ್ದ ಮಲ್ಲಮ್ಮ ಸ್ವಾಭಿಮಾನಕ್ಕಾಗಿ ಮನೆಯಲ್ಲಿ ಶೌಚಾಲಯ ಇರಲೇಬೇಕೆಂದು ಬಯಸಿದಳು.**

ಮಾಡುವುದಾಗಿ ತಾಯಿಗೆ ಹೇಳಿದ್ದಾಳೆ. ಅಷ್ಟೇ ಅಲ್ಲದೆ ಅದನ್ನು ಕಾರ್ಯರೂಪಕ್ಕೂ ತಂದಿದ್ದಾಳೆ. ಈ ವಿಷಯವನ್ನು ಆ ಗ್ರಾಮಕ್ಕೆ ಭೇಟಿ ನೀಡಿದಾಗ ತಿಳಿದ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್. ರಾಮಚಂದ್ರನ್ ಅವರು ಹರ್ಷ ವ್ಯಕ್ತಪಡಿಸಿ, ಖುದ್ದು, ಮಲ್ಲಮ್ಮಳನ್ನು ಭೇಟಿಯಾಗಿ ಮಾತನಾಡಿದ್ದಾರೆ. ಅಲ್ಲದೆ ಸ್ವಚ್ಛತೆ ಹಾಗೂ ಶೌಚಾಲಯದ ಅಗತ್ಯತೆ ಕುರಿತು ಕುಟುಂಬದವರಿಗೆ ಅರಿವು ಮೂಡಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದ್ದಾರೆ. ಸ್ಥಳದ ಅಭಾವಕ್ಕೂ ಕೂಡ ಅಲ್ಲಿಯೇ ಪರಿಹಾರವನ್ನು ಸೂಚಿಸಿ, ಒಂದು ವಾರದೊಳಗಾಗಿ ವೈಯಕ್ತಿಕ ಶೌಚಾಲಯ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಶೌಚಾಲಯ ಕಟ್ಟಿಸಿಕೊಳ್ಳಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರ 15 ಸಾವಿರ ರೂ.ಗಳ ಪ್ರೋತ್ಸಾಹಧನ ದೊರೆಯಲಿದ್ದು, ಶೌಚಾಲಯ ಇಲ್ಲದಿರುವವರು ಕೂಡಲೆ ಶೌಚಾಲಯ ಕಟ್ಟಿಸಿಕೊಳ್ಳುವಂತೆ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಜಿಲ್ಲಾ ಪಂಚಾಯತಿ ಸದಸ್ಯೆ ವಿಜಯಲಕ್ಷ್ಮಿ ಪ್ರಭಾಕರ್ ಕೂಡ, ಮಲ್ಲಮ್ಮಳ ಸ್ವಾಭಿಮಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದರು. ಅಲ್ಲದೆ ಉಪಸ್ಥಿತರಿದ್ದ ಗ್ರಾಮ ಪಂಚಾಯತಿ ಅಧ್ಯಕ್ಷ ಶಫಿ ಶೇಕ್ಷಾವಲಿ, ಉಪಾಧ್ಯಕ್ಷೆ ಅಮರಮ್ಮ ತಾಯಮ್ಮ, ತಾ.ಪಂ. ಸದಸ್ಯ ಪಕೀರಯ್ಯ ಹನುಮಂತಪ್ಪ, ತಾಲೂಕಾ ಪಂಚಾಯತಿ ಅಧಿಕಾರಿಗಳು ಸೇರಿದಂತೆ ಹಲವರು ಬಾಲಕಿಗೆ ನಡೆಗೆ ಮೆಚ್ಚುಗೆಯನ್ನು ಸೂಚಿಸಿದರು.

ಈಗಾಗಲೆ ಮಲ್ಲಮ್ಮ ಅವರ ಮನೆಯ ಬಳಿ ಶೌಚಾಲಯ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಮೂಗು ಮುಚ್ಚಿಕೊಂಡು, ಬಯಲು ಬಹಿರ್ದೆಸೆಗೆ ಹೋಗಲು ಮುಜುಗರ ಪಡುವ ವಿದ್ಯಾರ್ಥಿಗಳು, ಮನೆಯಲ್ಲಿ ಶೌಚಾಲಯವನ್ನು ಕಟ್ಟಿಸಿಕೊಳ್ಳಲು ಮಲ್ಲಮ್ಮ ಇತರರಿಗೆ ಮಾದರಿಯಾಗಿದ್ದಾಳೆ.

### ರಾಜ್ಯದ ಪ್ರವಾಸ–ಕ್ರೀಡಾಲೋಕಕ್ಕೆ ಗರಿ

# ಸರ್ಫಿಂಗ್

▪ ಬಿ.ಎ. ಖಾದರ್ ಶಾ







ಕ್ರೀಡಾಕೂಟ ಎಂದರೆ ಅಥ್ಲೆಟಿಕ್, ಕ್ರಿಕೆಟ್ ಇವುಗಳಿಗೆ ಸೀಮಿತ ಎಂಬಂತೆ ಇದ್ದ ಕರ್ನಾಟಕದ ಕ್ರೀಡಾಲೋಕದಲ್ಲಿ ಹೊಸದೊಂದು ಕ್ರೀಡೆ ಸೇರ್ಪಡೆಯಾಗಿದೆ; ಅದೇನೆಂದರೆ ಸರ್ಫಿಂಗ್.

ಎಲ್ಲೋ ಟಿವಿ ಸ್ಪೋರ್ಟ್ಸ್ ಚಾನೆಲ್‌ಗಳಲ್ಲಿ ಅಥವಾ ವಿದೇಶಗಳಿಗೆ ಪ್ರವಾಸಕ್ಕೆ ಹೋಗಿದ್ದಾಗ ನೋಡಿದಂತಿದ್ದ ಈ ಸರ್ಫಿಂಗ್ ಕ್ರೀಡೆ ಈಗ ನಮ್ಮ ರಾಜ್ಯಕ್ಕೆ ಕಾಲಿಟ್ಟಿದೆ. ಅದರಲ್ಲೂ ಅಂತಾರಾಷ್ಟ್ರೀಯ ಸರ್ಫಿಂಗ್ ಕ್ರೀಡಾಕೂಟವನ್ನು ರಾಜ್ಯದ ಕಡಲ ತೀರದಲ್ಲೇ ಆಯೋಜಿಸುವ ಮೂಲಕ ಭರ್ಜರಿ ಪ್ರವೇಶ ಮಾಡಿದೆ.

ಸರ್ಫಿಂಗ್ ಕ್ರೀಡೆ ಎಂದರೆ ಹಾಯಿದೋಣಿಗಳಂತೆ ಇರುವ ಅತ್ಯಾಧುನಿಕ ಸಾಧನದ ಮೇಲೆ ನಿಂತು ಕಡಲ ತೆರೆಗಳ ಮೇಲೆಯೇ ಹಾರಿ, ಒಬ್ಬರಿಗೊಬ್ಬರು ಮೀರಿಸುತ್ತಾ, ಮುನ್ನುಗುತ್ತಾ, ಎಂತಹ ಕಡಲ ತೆರೆ ಬಂದರೂ ಅದನ್ನು ಮೀರಿ, ಪಲ್ಟಿ ಹೊಡೆದು ಪ್ರದರ್ಶಿಸುವ ಸಾಹಸಮಯ ಕ್ರೀಡೆ.



ಕ್ರೀಡಾನುಭವದೊಂದಿಗೆ ಧೈರ್ಯ, ಅಪಾಯವನ್ನೆದುರಿಸುವ ಚಾಕಚಕ್ಯತೆ ಇದರಲ್ಲಿ ಮುಖ್ಯ. ಸರ್ಫಿಂಗ್ ವಿದೇಶಗಳಲ್ಲಿ ಜನಪ್ರಿಯವಾಗಿದೆ. ನಮ್ಮ ರಾಜ್ಯದಲ್ಲಿ ಇಂತಹ ಕ್ರೀಡೆ ಬಹಳ ಅಪರೂಪ. ಮಂಗಳೂರಿನಲ್ಲಿ ಇಂತಹ ಸರ್ಫಿಂಗ್ ಕ್ರೀಡೆ ಕಲಿಸುವ ಸಂಸ್ಥೆಯೊಂದು ಮುಲ್ಕಿ ಸಮೀಪ ಇದೆ. ಹೀಗಿದ್ದೂ, ಈ ಕ್ರೀಡೆ ಈ ಭಾಗದಲ್ಲಿ ಅಷ್ಟೇನು ಪರಿಚಿತವಾಗಿರಲಿಲ್ಲ.

ಇಂತಹದುರ ಮಧ್ಯೆ, ಸರ್ಫಿಂಗ್ ಕ್ರೀಡಾಕೂಟವೇ ನಡೆದುಹೋಗಿದೆ. ರಾಜ್ಯದ ಯುವಜನಸೇವಾ ಮತ್ತು ಕ್ರೀಡಾ ಸಚಿವರಾಗಿದ್ದ ಅಭಯಚಂದ್ರ ಜೈನ್ ಅವರ ಪ್ರಯತ್ನ ಹಾಗೂ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಎ.ಬಿ. ಇಬ್ರಾಹಿಂ ಅವರ ಅತೀವ ಆಸಕ್ತಿಯ ಫಲವಾಗಿ ಈ ಸರ್ಫಿಂಗ್ ಕ್ರೀಡಾಕೂಟವು ಮಂಗಳೂರು ತಾಲೂಕು, ಹಳೆಯಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಸಿಹಿತ್ಲು ಬೀಚ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಸರ್ಫಿಂಗ್ ಫೆಡರೇಶನ್ ಆಫ್ ಇಂಡಿಯಾ, ಮಂತ್ರ ಸರ್ಫ್ ಕ್ಲಬ್ ಹಾಗೂ Kanara Surfing and Water sports promotion council, ರವರ ಸಹಯೋಗದೊಂದಿಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಸರಕಾರ, ಇವರ ಪ್ರಾಯೋಜಕತ್ವದಲ್ಲಿ All Cargo Indian open of Surfing – 2016. (ಕರ್ನಾಟಕ ಸರ್ಫಿಂಗ್ ಫೆಸ್ಟಿವಲ್) ಆಯೋಜಿಸಲಾಗಿತ್ತು.



ಶಾಂಭವಿ ನದಿಯು ಕಡಲನ್ನು ಸೇರುವ ಸುಂದರವಾದ ಅಳಿವೆ ಪ್ರದೇಶದಲ್ಲಿ ಈ ಕ್ರೀಡಾಕೂಟವು ನಡೆದು ಮೆರುಗನ್ನು ನೀಡಿತು. ದೇಶ ವಿದೇಶಗಳ ನೂರಾರು ಸರ್ಫಿಂಗ್ ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಹಾಗೆ ನೋಡಿದರೆ, ಸಸಿಹಿತ್ಲು ಬೀಚ್ ಅಷ್ಟೇನೂ ಪ್ರಸಿದ್ಧಿಯಾಗಿರಲಿಲ್ಲ. ಆದರೆ ಸರ್ಫೀಂಗ್ ಕ್ರೀಡಾಕೂಟದ ಮೂಲಕ ಈ ಬೀಚಿನ ನಿಸರ್ಗ ರಮಣೀಯ ಸೌಂದರ್ಯವು ಹೊರಜಗತ್ತಿಗೆ ಕಾಣುವಂತಾಯಿತು. ಅಲ್ಲದೇ, ಈ ಬೀಚನ್ನು ಸರ್ಫಿಂಗ್ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ಖಾಸಗೀ ಸಂಸ್ಥೆಗಳೂ ಮುಂದೆ ಬಂದು, ಪ್ರಸ್ತಾವನೆ ಸಲ್ಲಿಸಿದೆ.

ಮೂರು ದಿನಗಳ ಕ್ರೀಡಾಕೂಟದಲ್ಲಿ ಸಾವಿರಾರು ಸಾರ್ವಜನಿಕರು ಬಂದು ವೀಕ್ಷಿಸಿದರು. ಮುಂದಿನ ದಿನಗಳಲ್ಲಿ ಈ ಸರ್ಫಿಂಗ್ ಕ್ರೀಡಾಕೂಟವನ್ನು ಪ್ರತೀವರ್ಷವೂ ನಿಗದಿತ ದಿನಾಂಕದಲ್ಲಿ ಏರ್ಪಡಿಸಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ. ಇದರಿಂದ ವಿದೇಶಿಗರಿಗೆ ಸಾಕಷ್ಟು ಸಂಖ್ಯೆಯಲ್ಲಿ ಈ ಸರ್ಫಿಂಗ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಮೊದಲೇ ಅವಕಾಶ ಸಿಗಲಿದೆ.

ಒಟ್ಟಿನಲ್ಲಿ ಈ ಸರ್ಫಿಂಗ್ ಕ್ರೀಡೆಯು ಕ್ರೀಡಾಲೋಕದಲ್ಲಿ ಒಂದು ಹೊಸ ಅವಕಾಶವನ್ನೇ ಕ್ರೀಡಾಪಟುಗಳಿಗೆ ತೆರೆದಿದೆ. ಅಲ್ಲದೇ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕರ್ನಾಟಕವನ್ನು ಇನ್ನಷ್ಟು ಆಕರ್ಷಕಯುತವನ್ನಾಗಿಸಿದೆ. ■





# ವಿಜಯಪುರ

## ಭವ್ಯ, ಸುಂದರ ಗೋರಿಗಳ ನಗರ

▪ ಬಿ. ಎಂ. ಚಂದ್ರಶೇಖರಯ್ಯ

**"ಆಗ್ರಾಕ್ಕೆ ತಾಜಮಹಲ್ ಹೇಗೋ ಹಾಗೆ ವಿಜಯಪುರಕ್ಕೆ ಗೋಲ್‌ಗುಂಬಜ್" ಶೋಭೆ ತಂದಿದೆ! ಈ ಎರಡೂ ಅದ್ವಿತೀಯ ಸ್ಮಾರಕಗಳು ತಮ್ಮದೇ ಆದ ಕಾರಣಗಳಿಗಾಗಿ ಜಗತ್ಪ್ರಸಿದ್ಧಿಯನ್ನು ಪಡೆದಿವೆ. ಅಲ್ಲದೆ, ಈ ಸ್ಮಾರಕಗಳು ಈ ಎರಡೂ ನಗರಗಳು ವಿಶ್ವಪ್ರವಾಸಿತಾಣಗಳಲ್ಲಿ, ಅನಿವಾರ್ಯವೆಂಬತೆ ನೋಡಲೇ ಬೇಕಾದ ಸ್ಥಳಗಳೆಂದು ಪರಿಗಣಿಸುವಂತೆ ಮಾಡಲು ಕಾರಣೀ ಭೂತವಾಗಿವೆ! ವಿಚಿತ್ರವೆಂದರೆ, ಈ ಎರಡೂ ಸ್ಮಾರಕಗಳನ್ನು 17ನೆಯ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಿಸಲಾಯಿತೆಂಬುದೂ ಒಂದು ಯೋಗಾ ಯೋಗವೆಂದೇ ಹೇಳಬೇಕು!**

**ಗೋ**ಳಗುಮ್ಮಟವು ಜಗತ್ತಿನ ವಿಸ್ಮಯಕರ ನಿರ್ಮಾಣಗಳಲ್ಲೊಂದು. ಅದೊಂದು ಚೌಕಾಕಾರದ ಬೃಹತ್ ಕಟ್ಟಡವಾಗಿದ್ದು, ಅದರ ಮೇಲೆ ಬೃಹದಾಕಾರದ ಹಾಗೂ ಆಶ್ಚರ್ಯಕರ, ಒಳಗಡೆ 175 ಅಡಿ ಮತ್ತು ಹೊರಗಡೆ 198 ಅಡಿ ವಿಶಾಲವಾದ ಪ್ರತಿಧ್ವನಿಗೊಡುವ ಗುಮ್ಮಟವನ್ನು ನಿರ್ಮಿಸಲಾಗಿದೆ, ಅದು ವಿಶ್ವದಲ್ಲೇ, ಎರಡನೆಯ ಅತಿದೊಡ್ಡ ಗುಮ್ಮಟಾಚ್ಛಾದಿತಹಜಾರ! ಮೇಲ್ಗಡೆ, ಗೋಡೆಗೆ ಹೊಂದಿಕೊಂಡಂತೆ ವರ್ತುಲಾಕಾರದ ಚಾಚುಗ್ಯಾಲರಿಯಿದ್ದು, ಅಲ್ಲಿಸಲೀಸಾಗಿ ಓಡಾಡಬಹುದು ಗುಮ್ಮಟದ ಗೋಡೆಗೆ ಆತು ಪಿಸುಗುಟ್ಟಿದರೆ ಅಥವಾ ಯಾವುದೇ ಸದ್ದನ್ನುವುಂಟು ಮಾಡಿದರೆ ಅದು ಸುಮಾರು ಏಳು ಬಾರಿ ಪ್ರತಿಧ್ವನಿ ಕೊಡುತ್ತದೆ. ಕೈಗಡಿಯಾರವನ್ನು ಗೋಡೆಗೆ ಆನಿಸಿ ಹಿಡಿದರೆ, ಮತ್ತೊಂದು ಕಡೆ ಅದರ ಟಿಕ್ ಟಿಕ್ ಶಬ್ದವನ್ನು ಅತ್ಯಂತ ನಿಖರವಾಗಿ ಕೇಳಬಹುದು! ಆದ್ದರಿಂದಲೇ, ಇದನ್ನು 'ಪಿಸುಗುಟ್ಟುವ ಗ್ಯಾಲರಿ'ಯೆಂದು ಕರೆಯಲಾಗಿದೆ. ಆದರೆ, ಕಾಲವು ತನ್ನ ಪ್ರಭಾವವನ್ನು ಬೀರುತ್ತಿದೆಯಾದುದರಿಂದಾಗಿ ಈ ಪ್ರತಿಧ್ವನಿಯ ಪರಿಣಾಮವು ದಿನದಿನಕ್ಕೆ ಕಡಿಮೆಯಾಗ ತೊಡಗಿದೆ.

ಈ ವಿಸ್ಮಯಕಾರಿ ಗೋಳಗುಮ್ಮಟವು, ಭವ್ಯ, ಸುಂದರ ಗೋರಿಗಳನಗರ ವಿಜಯಪುರವನ್ನು ಸಿಂಗರಿಸಿರುವ ಉತ್ಕೃಷ್ಟ ಆಭರಣವೆಂದೇ ಹೇಳಬಹುದು! ಬೆಳದಿಂಗಳ ರಾತ್ರಿಯಲ್ಲಿ ಆದಿಲ್‌ಷಾಹಿಗಳ ಪ್ರೇತಗಳು ವಿಜಯಪುರದ ಬೀದಿಗಳಲ್ಲಿ ಓಡಾಡುತ್ತಿರುತ್ತವೆಯೆಂದು ಅಲ್ಲಿಯ ಜನರು ನಂಬಿದ್ದಾರೆ! ಮಿತವ್ಯಯಕ್ಕೆ ಆದ್ಯತೆ ನೀಡಿದ್ದ ಅಂದಿನ ಬ್ರಿಟಿಷ್‌ಸರ್ಕಾರವು ಅಲ್ಲಿಯ ಅನೇಕ ಗೋರಿಗಳು ಮತ್ತಿತರ ಸ್ಮಾರಕಗಳನ್ನು ಸರ್ಕಾರಿ ಕಛೇರಿಗಳು ಮತ್ತು ಇತರ ಜನೋಪಯೋಗಿ ಕಟ್ಟಡಗಳನ್ನಾಗಿ ಪರಿವರ್ತಿಸಿತು.

ಗೋಳಗುಮ್ಮಟವು ಒಂದು ಗೋರಿಯಾದುದರಿಂದಲೋ ಏನೋ ಬಹಳ ಭವ್ಯವಾಗಿದೆಯೇ ಹೊರತು, ಹೆಚ್ಚು ಅಲಂಕಾರದಿಂದ ಕೂಡಿಲ್ಲ! ಅದರ ಮಹಾದ್ವಾರದಲ್ಲಿರುವ ಶಾಸನವೊಂದು, 'ಮೊಹಮದ್ ಆದಿಲ್‌ಷಾಹನು ಸ್ವರ್ಗವಾಸಿಯಾದ ನಂತರ,ಆತನ ಭೌತಿಕ ಅವಶೇಷಗಳನ್ನು ಇಲ್ಲಿಡಲಾಗಿದೆ,' ಎಂದು ಹೇಳುತ್ತದೆ.

ಮೊಹಮದ್ ಆದಿಲ್‌ಷಹನು,ಕ್ರಿ.ಶ 1489ರಲ್ಲಿ ಯೂಸಫ್ ಆದಿಲ್‌ಖಾನನಿಂದ ಸ್ಥಾಪನೆಯಾದ ಈ ವಂಶದ ಏಳನೆಯ ಸುಲ್ತಾನನಾಗಿದ್ದು, ಕ್ರಿ.ಶ. 1627ರಿಂದ 1655ರ ವರೆಗೆ ವಿಜಯಪುರವನ್ನಾಳಿದನು, ಆದಿಲ್‌ಖಾನನ ಕತೆಯು'ಅರೇಬಿಯನ್ ನೈಟ್ಸ್' ನಲ್ಲಿ ಬರುವ ಅದ್ಭುತ ಕತೆಗಳಂತಿದೆ ! ಟರ್ಕಿಯ ಸುಲ್ತಾನನ ಕಿರಿಯ ಮಗನಾಗಿದ್ದ ಅವನನ್ನು ಉಳಿಸಲೆಂದೇ ಅವನ ತಾಯಿಯು ಅವನನ್ನು ಗುಲಾಮರ ವ್ಯಾಪರಿಯೊಬ್ಬನಿಗೆ ಮಾರಿದಳು. ಏಕೆಂದರೆ, ಅಲ್ಲಿ ರಾಜ್ಯದ ಉತ್ತರಧಿಕಾರಿಯಾದ ಹಿರಿಯಮಗನನ್ನುಳಿದು,ಉಳಿದ ಗಂಡು ಮಕ್ಕಳನ್ನು ಕೊಲ್ಲಿಸುವ ಪದ್ಧತಿಯಿತ್ತು. 1460ರಲ್ಲಿ ಆದಿಲ್‌ಖಾನನನ್ನು ಭಾರತಕ್ಕೆ ಕರೆ ತರಲಾಯಿತು. ಅವನ ನಡೆ ನುಡಿಗಳ ಗಾಂಭೀರ್ಯ ಮತ್ತು ಸೌಂದರ್ಯದಿಂದಾಗಿ ಅವನನ್ನು ಬಹಮನಿಸುಲ್ತಾನನಿಗೆ ಉಡುಗರೆಯಾಗಿ ನೀಡಲಾಯಿತು.ಅನಂತರ,ಅವನನ್ನು ಸೈನ್ಯಕ್ಕೆ ವರ್ಗಾಯಿಸಲಾಯಿತು. ಅಲ್ಲಿ ಅವನ ಸತತ ಪರಿಶ್ರಮ,ಸಚ್ಚಾರಿತ್ರ್ಯ ಮತ್ತು ಧೈರ್ಯಗಳಿಂದಾಗಿ ಕೇವಲ 20 ವರ್ಷಗಳ ಅವಧಿಯಲ್ಲಿ ಆದಿಲ್‌ಖಾನನನ್ನು ವಿಜಯಪುರದ ಪ್ರಾದೇಶಿಕ ರಾಜ್ಯಪಾಲನನ್ನಾಗಿ ನೇಮಕ ಮಾಡಲಾಯಿತು, ಮುಂದೆ, 15 ನೆಯ ಶತಮಾನದ ಎಂಭತ್ತರ ದಶಕದಲ್ಲಿ ಉಂಟಾದ ಬಹಮನಿಸಾಮ್ರಾಜ್ಯದ ಛಿದ್ರತೆಯಿಂದಾಗಿ, ಆದಿಲ್‌ಖಾನನು ಬಿಜಾಪುರದ ಸುಲ್ತಾನನೆಂದು ಘೋಷಿಸಿಕೊಂಡನೆಂದು ಫೆರಿಸ್ತಾ ವರ್ಣಿಸುತ್ತಾನೆ, ಆದಿಲ್‌ಖಾನನು ಈಗ ಆದಿಲ್‌ಷಾಹನಾದನು! ಅವನ ವಂಶವು 'ಆದಿಲ್‌ಷಾಹಿ' ವಂಶವಾಯಿತು!

ಯೂಸುಫ್ ಆದಿಲ್‌ಷಾಹನು (ಕ್ರಿ.ಶ.1489–1510) ದಖನ್ನಿನ ಪ್ರತಿಭಾವಂತ ಸುಲ್ತಾನರುಗಳಲ್ಲೊಬ್ಬನಾಗಿದ್ದನು. ಅವನು ಮತಾಂಧನಾಗಿರದೆ, ಹಿಂದೂಗಳನ್ನು ಬಹಳ ಗೌರವದಿಂದ ಕಾಣುತ್ತಿದ್ದನು. ಕವಿ, ಸಾಹಿತಿಗಳಿಗೆ ಆಶ್ರಯದಾತನಾಗಿದ್ದನು. ಅಲ್ಲದೆ, ಮಾನವ ಸಹಜ ಗುಣಗಳನ್ನು ಚೆನ್ನಾಗಿ ಅರಿತವನೂ, ವಾಗ್ಮಿಯೂ, ಸುಂದರನೂ ಆಗಿದ್ದನು! ಅವನ ರಾಣಿ ಮರಾಠ ಮಹಿಳೆಯಾಗಿದ್ದಳು.

ಹೀಗೆ ವಿಜಯಪುರವು ರಾಜ್ಯದ ರಾಜಧಾನಿಯಾಯಿತು, ಆದರೆ, ರಾಜಧಾನಿಗೆ ಅಗತ್ಯವಾದ ನೈಸರ್ಗಿಕ ರಕ್ಷಣೆಯಾಗಲೀ ಅಥವಾ ಬೆಳೆಯುವ ನಗರದ  ಜನ ಬಾಹುಳ್ಯಕ್ಕೆ ನಿರಂತರ ನೀರು ಪೊರೈಕೆ ಮಾಡಬಲ್ಲಂತಹ ಜಲಮೂಲವಾಗಲೀ ಇರಲಿಲ್ಲ. ಆದರೆ, ಆದಿಲ್‌ಷಾಹಿಗಳು ವಿಜಯಪುರವು ನಿಸರ್ಗದಿಂದಯಾವಾವುದರಿಂದ ವಂಚಿಸಲ್ಪಟ್ಟಿತೋ ಅವುಗಳೆಲ್ಲವನ್ನೂ ಧಾರಾಳವಾಗಿ ಪೂರೈಸಲು ಆದ್ಯತೆನೀಡಿದರು. ತಮ್ಮ ಆಳ್ವಿಕೆಯಅವಧಿಯಲ್ಲಿ ರಾಜಧಾನಿಯನ್ನು ಶಕ್ತಿಯುತ ಹಾಗೂ ಸುಂದರನಗರವನ್ನಾಗಿ ಅಭಿವೃದ್ಧಿಪಡಿಸಿದರು !

ಕೋಟೆಯ ಗೋಡೆಗಳಿಂದ ಸುತ್ತುವರಿದ ವಿಜಯಪುರವು, ತನ್ನ ಶುಷ್ಕಪರಿಸರದ ಮಧ್ಯದಲ್ಲಿ ಮೂಡಿಬಂದ ಬಿಸಿಲು ಕುದುರೆಯಂತೆ ಕಂಗೊಳಿಸತೊಡಗುತ್ತದೆ,  ಅಲ್ಲಿನ ಹವೆಯು ಯಾವಾಗಲೂ ಶುಷ್ಕವಾಗಿರುತ್ತಿದೆ. ಮೋಡಗಳಿಲ್ಲದೆ ಆಕಾಶವು ಶುಭ್ರವಾಗಿದ್ದಾಗ ಗೋಳಗುಮ್ಮಟವನ್ನು ಸುಮಾರು 10 ಕಿ,ಮೀ. ಗಳ ದೂರದಿಂದಲೇ ಗುರುತಿಸಬಹುದು!

ಕೋಟೆಯ ಗೋಡೆಗಳ ನಡುವೆ ಆದಿಲ್‌ಷಾಹಿಗಳು ನಗರವನ್ನು ಅನೇಕ ಸುಂದರವಾದ ಕಟ್ಟಡಗಳು, ಉದ್ಯಾನವನಗಳು ಮತ್ತು ಆನೇಕ ನೀರಿನ ಹೊಂಡಗಳು (ಬಾವಡಿ) ಮತ್ತು ಕಾರಂಜಿಗಳಿಂದ ಸಿಂಗರಿಸಿದರು. ಇದೆಲ್ಲವನ್ನೂ ಅವರು ಅಕ್ಕಪಕ್ಕದ ರಾಜ್ಯಗಳೊಡನೆ ನೆಲಕ್ಕಾಗಿ ಸೆಣಸುತ್ತಲೇ ಮಾಡಿದರೆನ್ನುವುದು, ಅವರಿಗೆ ತಮ್ಮ ನಗರದ ಮೇಲಿನ ಪ್ರೀತಿಯನ್ನು ತೋರಿಸುತ್ತದೆ! ವಿಜಯಪುರದ ಸೈನವು ತನ್ನ ದಾಯಾದಿ ಸುಲ್ತಾನರುಗಳು ಅಥವಾ ವಿಜಯನಗರದ ರಾಯರೊಡನೆ ನಿರಂತರವಾಗಿ ಯುದ್ಧದಲ್ಲಿ ತೊಡಗಿರುತ್ತಿದ್ದುದು ಸಹಜವಾದ ಸಂಗತಿಯಾಗಿತ್ತು!

ಕ್ರಿ.ಶ.1685 ರಲ್ಲಿ ವಿಜಯಪುರಕ್ಕೆ ದುರ್ಗತಿಯೊದಗಿತು. ಮಹಾಮೊಗಲ ಸಾಮ್ರಾಟ ಔರಂಗಜೇಬನು ತನ್ನ ಬೃಹತ್ ಸೈನ್ಯದೊಡನೆ ವಿಜಯಪುರವನ್ನು ಮುತ್ತಿದನು. ಹದಿಹರೆಯದ ಸುಲ್ತಾನ ಸಿಕಂದರ ಆದಿಲ್‌ಷಾಹನು ಮೊಗಲ ಸೈನ್ಯವನ್ನು ದೃಢಸಂಕಲ್ಪ ಮತ್ತು ಚಾತುರ್ಯಗಳಿಂದ ಎದುರಿಸಿದನಾದರೂ, ಅಂತಿಮವಾಗಿ ಅಕ್ಟೋಬರ್ 1686 ರಲ್ಲಿ ಔರಂಗಜೇಬನಿಗೆ ಶರಣಾಗಬೇಕಾಯಿತು. ಸಿಕಂದರನು ಸೆರೆಯಾಳಗಿ ದೌಲತಾಬಾದಿನಲ್ಲಿ 1700 ರಲ್ಲಿ ಮೃತನಾದನು, ಅಲ್ಲಿಗೆ ಆದಿಲ್‌ಷಾಹಿಗಳ ಆಳ್ವಿಕೆ ಮುಕ್ತಾಯಗೊಂಡಿತ್ತು. ವಿಜಯಪುರವು ಮೊಗಲ ಸಮ್ರಾಜ್ಯದ ಪ್ರಾದೇಶಿಕ ಕೇಂದ್ರ ಸ್ಥಳವಾಗಿ ಉಳಿಯಿತು.

ಶರಣಾಗತಿಯ ನಂತರ ವಿಜೇತ ಮೊಗಲ ಸೈನ್ಯವು ಇಡೀ ನಗರವನ್ನು ದೋಚಿತಲ್ಲದೆ, ಅನೇಕ ಕಟ್ಟಡಗಳನ್ನು ವಿನಾಕರಣ ಧ್ವಂಸ ಮಾಡಿದರು, ವಿನಾಶದ ನಂತರ ನಗರವನ್ನು ವೀಕ್ಷಿಸಿದ ಔರಂಗಜೇಬನೇ ಅದಕ್ಕಾಗಿ ಕಣ್ಣೀರಿಟ್ಟನಂತೆ! ಅನಂತರ ಔರಂಗಜೇಬನು ಇನ್ನು ಆ ನಗರದಲ್ಲಿರುವಾಗಲೇ ಸಾಂಕ್ರಾಮಿಕ ರೋಗ ಪ್ಲೇಗ್ ಕಾಣಿಸಿಕೊಂಡು, ನಗರದ ಅರ್ಧ ಜನ ಸಂಖ್ಯೆಯನ್ನು ಬಲಿ ತೆಗೆದು ಕೊಂಡಿತು. ಅದರಲ್ಲಿ ಔರಂಗಜೇಬನ ಹೆಂಡತಿಯರಲ್ಲೊಬ್ಬಳು ಕೂಡ ಮೃತಳಾದಳು. ಈ ಎರಡು ಅನಾಹುತಗಳಿಂದ ವಿಜಯಪುರವು ಮತ್ತೆಂದೂ ಸುಧಾರಿಸಿಕೊಳ್ಳಲೇ ಇಲ್ಲ. ಅದರ ಜನ ಸಂಖ್ಯೆಯು ಕುಗ್ಗಿ ಹೋಯಿತಲ್ಲದೆ, ಅದರ ಸುಂದರ ಉದ್ಯಾನವನಗಳು ಪಾಪಾಸುಕಳ್ಳಿಯ ಕಾಡುಗಳದವು !

ವಿಜಯಪುರಕ್ಕೆ ಹಿಡಿದ ಈ ಗ್ರಹಣವು ಬಿಡುಗಡೆಯಾಗಲು 200 ವರ್ಷಗಳಿಗೂ ಹೆಚ್ಚುಕಾಲ ಬೇಕಾಯಿತು. ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ದೂರದರ್ಶಿಯಾಗಿದ್ದ ಮುಂಬಯಿ ಗವರ್ನರ್ ಸರ್.ರಿಚರ್ಡ್ಸ್‌ಟೆಂಪಲ್ ಅವರ ಗಮನವನ್ನು ಸೆಳದ ಈ ದುರಾದೃಷ್ಟದ ನಗರವು ಆಳಿದುಳಿದ ಸ್ಮಾರಕಗಳ ರಕ್ಷಣೆಯನ್ನು ಕಾಣಬೇಕಾಯ್ತು ಈ ಸಮಯದಲ್ಲೇ,ಬ್ರಿಟಿಷ್ ಸರ್ಕಾರವು ಈ ಪ್ರಾಂತ್ಯದಲ್ಲಿ ಹೊಸ ಜಿಲ್ಲೆಯೊಂದನ್ನು ನಿರ್ಮಿಸಲು ಮುಂದಾಗಿದ್ದು, ಅದರ ಕೇಂದ್ರ ಸ್ಥಳದ ನಿರ್ಮಾಣಕ್ಕೆ ಸೂಕ್ತ ಸ್ಥಳದ ಹುಡುಕಾಟದಲ್ಲಿ ತೊಡಗಿತ್ತು, ಆಗ ಸರ್,ರಿಚರ್ಡ್ಸ್‌ಅವರಿಗೆ ವಿಜಯಪುರದದಲ್ಲಿ ಕಛೇರಿಗಳಿಗೆ ಹಾಗೂ ಅಧಿಕಾರಿಗಳ ನಿವಾಸಗಳಿಗೆ ಬೇಕಾಗುವ ಸೂಕ್ತ ಕಟ್ಟಡಗಳಿದ್ದು ಅದನ್ನೇಕೆ ಜಿಲ್ಲಾ ಕೇಂದ್ರವನ್ನಾಗಿ ಮಾಡಬಾರದು ಎಂಬ ಆಲೋಚನೆ ಹೊಳೆದು, ಆಬಗ್ಗೆ ತನ್ನ ಸರ್ಕಾರಕ್ಕೆ ಅದನ್ನು ಮನವರಿಕೆ ಮಾಡಿಕೊಟ್ಟರು, ಅದಕ್ಕೆ ಸರ್ಕಾರವು ಹಸಿರು ದೀಪವನ್ನು ತೋರಿಸಿದ ನಂತರ,



ವಿಜಯಪುರದ ಕಾರಂಜಿಗಳು ಮತ್ತೆ ನೃತ್ಯ ಮಾಡಲು ಸಾಧ್ಯವಾಗದಿದ್ದರೂ, ಅದರ ಪಾಪಾಸುಕಳ್ಳಿಗಳಿಂದ ತುಂಬಿದ ಉದ್ಯಾನವನಗಳು ಸ್ವಚ್ಛವಾದವು. ಮಣ್ಣಿನಲ್ಲಿ ಹೂತು ಹೋಗಿದ್ದ ಹಲವಾರು ಸ್ಮಾರಕಗಳು ಸೂರ್ಯನ ಬೆಳಕನ್ನು ನೋಡುವಂತಾಯಿತು, ಕೊನೆಗೂ, ಕಲಾದಗಿ ಪಟ್ಟಣದಲ್ಲಿದ್ದ ಜಿಲ್ಲಾ ಕೇಂದ್ರವು ವಿಜಯಪುರಕ್ಕೆ ವರ್ಗಾಯಿಸಲ್ಪಟ್ಟಿತು!

ಆದಿಲ್‌ಷಾಹಿಗಳ ಉಗ್ರಾಣವು ಈಗ ಜಿಲ್ಲಾಡಳಿತದ ನ್ಯಾಯಾಲಯವಾಯಿತು. ಮುಖ್ಯ ನ್ಯಾಯಾಲಯವಾಗಿದ್ದ 'ಅದಾಲತ್‌ಮಹಲ್' ಜಿಲ್ಲಾಸರ್ಜನರ ನಿವಾಸವಾಯಿತು. ಆದಿಲ್‌ಷಾಹಿಗಳ ಅಂತಃಪುರಗಳಲ್ಯೊಂದಾಗಿದ್ದ'ಆನಂದ ಮಹಲ್' ಅರಮನೆಯು ಜಿಲ್ಲಾ ಕಲೆಕ್ಟರ್ ಬಂಗಲೆಯಾಯಿತು.ಅಂದಿನ ರಾಜಶಿಲ್ಪಿಯ ನಿವಾಸವಾಗಿದ್ದ 'ಯಾಕುತ್ ಮಹಲ್' ಪ್ರವಾಸಿಮಂದಿರವಾಯಿತು, ಸುಲ್ತಾನರ ಕಾಲದ ಪ್ರವಾಸಿ ಬಂಗಲೆ 'ಸರಾಯ್' ಈಗ ಜಿಲ್ಲಾ ಸೆರಮನೆಯಾಯಿತು. ಅದರಂತೆಯೇ,ಅಂದಿನ ಹತ್ತರಿಂದ ಹದಿನೈದು ಕಟ್ಟಡಗಳನ್ನು ಅಂದಿನ ಆಡಳಿತದ ಅಗತ್ಯಗಳಿಗನುಸಾರವಾಗಿ ಪರಿವರ್ತಿಸಲಾಯಿತು,ಆದರೆ, ಈ ಬದಲಾವಣೆಯಿಂದ ತಪ್ಪಿಸಿಕೊಂಡ ಕಟ್ಟಡಗಳಲ್ಲಿ ಅನೇಕಕಟ್ಟಡಗಳು ತೀರಾ ಭವ್ಯವಾಗಿದ್ದವು ಅಥವಾ ಇಂದಿನ ಅಗತ್ಯಗಳಿಗೆ ಅವು ಹೊಂದುವಂತಿರಲಿಲ್ಲ. ಅಂತಹ ಯಾವುದೇ ರೀತಿಯಲ್ಲಿ ಮುಕ್ಕಾಗದೆ ಸರಿಯಾಗಿರುವ ಸುಮಾರು 40 ಕಟ್ಟಡಗಳನ್ನು ಈಗ ಕಾಣಬಹುದು. ಅವುಗಳಲ್ಲೆಲ್ಲಾ ಪ್ರಸಿದ್ಧವಾದವುಗಳೆಂದರೆ 'ಜಾಮಾಮಸೀದಿ' ಮತ್ತು 'ಇಬ್ರಾಹಿಂರೋಜಾ.' ಈ ಜಾಮಾಮಸೀದಿಯನ್ನು ಜೇಮ್ಸ್‌ಫರ್ಗುಸನ್ 'ಇದು ಭಾರತದಲ್ಲಿರುವ ಅತ್ಯಂತ ಸುಂದರ ಮಸೀದಿಗಳಲ್ಲೊಂದು!' ಎಂದು ಬಣ್ಣಿಸಿದ್ದಾನೆ, ಅಲ್ಲಿರುವ ಅರಮನೆಗಳಲ್ಲಿ ಪ್ರಮುಖವಾದವುಗಳೆಂದರೆ ಆನಂದ ಮಹಲ್, ಗಗನಮಹಲ್, ಅಸಾರಮಹಲ್, ಮತ್ತು ಜಲಮಂಜಿಲ್, ಇವುಗಳಲ್ಲೆಲ್ಲಾ ಸುಂದರವಾದುದೆಂದರೆ ಅಸಾರಮಹಲ್, ಅದರ ಮೇಲ್ಚಾವಣಿಗಳನ್ನು ಗಹನವಾದ ಬಂಗಾರದ ಎರಕದ ಅಚ್ಚುಗಳಿಂದ ಸಿಂಗರಿಸಲಾಗಿತ್ತು ಅದರ ಬಾಗಿಲುಗಳನ್ನು ದಂತದ ವಿನ್ಯಾಸಗಳನ್ನು ಹುದುಗಿಸಿ ಅಲಂಕರಿಸಲಾಗಿತ್ತು. ಇದನ್ನು ಆಗ ನ್ಯಾಯಾಲಯವನ್ನಾಗಿ ಬಳಸಲಾಗುತ್ತಿತ್ತೆಂದು ಹೇಳಲಾಗಿದೆ. ಮುಂಭಾಗದಲ್ಲಿ ವಿಶಾಲವಾದ ಅಂಗಳದಿಂದ ಕೂಡಿರುವ ಮಹಲು ಅರವತ್ತು ಅಡಿ ಎತ್ತರದ ಮರದ ಕಂಭಗಳನ್ನಾಧರಿಸಿತ್ತು. ಆದರೆ, ಈ ಕಂಬಗಳು ಈಗ ಕಾಂಕ್ರೀಟ್ ಕಂಬಗಳಿಂದ ಸ್ಥಾನಪಲ್ಲಟಗೊಂಡಿದ್ದು, ಅವುಗಳಲ್ಲೊಂದನ್ನು ಮಾತ್ರ ಹೊರಗಡೆ ಇಡಲಾಗಿದೆ. ಈಗ ಅದನ್ನು ನೋಡಿದಾಗ, ಕರ್ನಾಟಕದಲ್ಲಿ ಆಗ ತೇಗದ ಮರಗಳು 60 ಅಡಿಗೂ ಹೆಚ್ಚು ಎತ್ತರ ಬೆಳೆಯುತ್ತಿದ್ದವೇ ಎಂದು ಆಶ್ಚರ್ಯವಾಗುತ್ತದೆ!

ಇಬ್ರಾಹಿಂರೋಜಾ: ಅಗಲ ಕಿರಿದಾದ(ಕೃಶ)ಮಿನಾರುಗಳು ಮತ್ತು ಗುಮ್ಮಟಗಳಿಂದ ಕೂಡಿದ್ದು, ಅಸದೃಶ ವಿನ್ಯಾಸಗಳಿಂದ ಶೋಭಿಸುತ್ತಿರುವ, ಕಪಿಲವರ್ಣದ ಕಲ್ಲಿನಲ್ಲಿ ನಿರ್ಮಿಸಲಾಗಿರುವ, ಪ್ರವಾಸಿಗಳು ಹಾಗೂ ಕಲಾ ಇತಿಹಾಸಕಾರರಿಬ್ಬರಿಂದಲೂ ಅಪಾರ ಪ್ರಶಂಶೆಗೊಳಗಾಗಿರುವ 'ಇಬ್ರಾಹಿಂರೋಜಾ' ವಿಜಯಪುರದ ಮತ್ತೊಂದು ವಿಸ್ಮಯವೆನ್ನುವುದರಲ್ಲಿಯಾವ ಅತಿಶಯೋಕ್ತಿಯೂ ಇಲ್ಲ! ಈ ಅವಳಿ ಕಟ್ಟಡಗಳಲ್ಲೊಂದು ಸಮಾಧಿ, ಮತ್ತೊಂದು ಮಸೀದಿ, ಇವೆರಡೂ ಜೊತೆಯಾಗಿದ್ದರೆ ಅದನ್ನು 'ರೋಜಾ' ಎಂದು ಕರೆಯುತ್ತಾರೆ. ಅವುಗಳ ರಚನೆ, ತಂತ್ರ ಕೌಶಲ! ಅಲಂಕಾರಗಳು ಪರಿಪೂರ್ಣವೆನ್ನಬಹುದು, “ಅಲಂಕರಣಭವ್ಯತೆಗೆ ಇಬ್ರಾಹಿಂರೋಜಾ ಕೊನೆಯ ಮಾತಾಗಿದೆ” ಎಂದು ಜೇಮ್ಸ್‌ಕಸಿನ್ಸ್ ಅಭಿಪ್ರಾಯ ಪಟ್ಟಿದ್ದಾರೆ. ಜಗದ್ವಿಖ್ಯಾತ ತಾಜಮಹಲ್‌ನ ವಿನ್ಯಾಸವು ಇಬ್ರಾಹಿಂರೋಜಾವನ್ನನುಸರಿಸಿದೆ ಎಂದು ಹೇಳಲಾಗುತ್ತಿದೆ! ಇದು ಇಮ್ಮಡಿ ಇಬ್ರಾಹಿಂ ಆದಿಲ್‌ಷಾಹನ ಸಮಾಧಿಯಾಗಿದೆ.

ಇಮ್ಮಡಿ ಇಬ್ರಾಹಿಂ(ಕ್ರಿ.ಶ. 1579–1626) 'ಆದಿಲ್‌ಷಾಹಿ ಸುಲ್ತಾನರುಗಳಲ್ಲಿ ಆ ವಂಶದ ಸ್ಥಾಪಕ ಆದಿಲ್‌ಷಾಹನನ್ನು ಬಿಟ್ಟರೆ ಅತ್ಯಂತ ಸಮರ್ಥನಾಗಿದ್ದನೆಂದು' ಮೆಡೋಸ್‌ಟೇಲರ್ ಅಭಿಪ್ರಾಯ ಪಟ್ಟಿದ್ದಾನೆ. ಇವನು ತೋದರಮಲ್ಲನ ಕಂದಾಯ ಆಡಳಿತವನ್ನು ಸ್ಥಳೀಯ ಬದಲಾವಣೆಗಳೊಂದಿಗೆ ತನ್ನ ರಾಜ್ಯದಲ್ಲಿ ಜಾರಿಗೊಳಿಸಿದ್ದನು. ಹಿಂದೂಗಳೊಡನೆ ಸಹನೆಯಿಂದ ವರ್ತಿಸುತ್ತಿದ್ದನಲ್ಲದೆ, ತನ್ನರಾಜ್ಯದ ಅನೇಕ ಉನ್ನತ ಹುದ್ದೆಗಳಿಗೆ ಹಿಂದೂಗಳನ್ನು ನೇಮಕ ಮಾಡಿದ್ದನು, ಎಂದು ಟೇಲರ್ ಹೇಳಿದ್ದಾನೆ.

ಮೊಗಲದೊರೆ ಔರಂಗಜೇಬನು 1686 ರಲ್ಲಿ ಇಲ್ಲಿ ವಾಸ್ತವ್ಯ ಹೂಡಿದ್ದಾಗ ಇಬ್ರಾಹಿಂ ರೋಜಾದ ಸೌಂದರ್ಯಕ್ಕೆ ಮನ ಸೋತು, ಅಲ್ಲಿಯೇ ವಾಸ ಮಾಡತೊಡಗಿದನಂತೆ. ಬ್ರಿಟಿಷ್ ಅಧಿಕಾರಿಗಳಂತೆ, ಮಹಾಮೊಗಲನು ಕೂಡಾ ಸ್ವಲ್ಪವೂ ಅಳುಕದೆ, ಇನ್ನೊಬ್ಬರ ಗೋರಿಯಲ್ಲಿ ವಾಸಮಾಡಲು ಹಿಂದು ಮುಂದು ನೋಡಲಿಲ್ಲ! ಈ ರೋಜಾವನ್ನು ನಿರ್ಮಿಸಿದ ಶಿಲ್ಪಿಯು, " ಈ ಸ್ಮಾರಕದ ಸೌಂದರ್ಯವನ್ನು ಕಂಡು ಸ್ವರ್ಗವು ಕೂಡಾ ನಾಚಿ ನೀರಾಯಿತು!" ಎಂದು ಹೆಮ್ಮೆಯಿಂದ ಉಗ್ಗಡಿಸಿದ್ದಾನೆ ಎಂದು ಇಲ್ಲಿನ ಶಾಸನವೊಂದು ಹೇಳುತ್ತದೆ.

ಇಬ್ರಾಹಿಂರೋಜಾ ತನ್ನ ಭವ್ಯ ಆದರೂ ಸೌಮ್ಯ ಅಲಂಕರಣ ಪ್ರವೃತ್ತಿಯಿಂದ ವಿಜಯಪುರದ ಇನ್ನೊಂದು ಸ್ಮಾರಕ ಗೋಳಗುಮ್ಮಟದ ಗಾಂಭೀರ್ಯ ಮತ್ತು ಪೌರುಷಗಳ ಸಂಕೇತಕ್ಕೆ ವ್ಯತಿರಿಕ್ತವಾಗಿದೆ! ವಿಜಯಪುರದಲ್ಲಿ ತಪ್ಪದೆ ನೋಡಬೇಕಾದ ಇನ್ನೊಂದು ಸ್ಮಾರಕವೆಂದರೆ ಕೋಟೆಯ ಬುರುಜುಗಳಲ್ಲೊಂದರ ಮೇಲೆ ಇಟ್ಟಿರುವ ಬೃಹದ್ಗಾತ್ರದ, 'ಮಲಿಕ್–ಇ–ಮೈದಾನ್'(ಸಮರಾಂಗಣದ ದೊರೆ) ತೋಫು, 14 ಅಡಿ ಉದ್ದದ ಈ ಭಾರೀ ತೋಫನ್ನು ಪಂಚಲೋಹದಿಂದ ತಯಾರಿಸಲಾಗಿದೆ. ಇದರ ತೂಕ ಸುಮಾರು 15 ಟನ್ ಎಂದು ಹೇಳಲಾಗಿದೆ.



# ಕಾರವಾರ ಬೀಚ್‌ನಲ್ಲಿ

# ಮರಳು ಕಲಾಕೃತಿ ಸಂಸ್ಕೃತಿ

ಚಿತ್ರ –ಲೇಖನ :

▪ ನಾಗರಾಜ್ ಹರಪನಹಳ್ಳಿ.

**ಕ**ಡಲದಂಡೆಗೆ ಬರುವ ಮಕ್ಕಳು ಸಹಜವಾಗಿ ಮರಳಲ್ಲಿ ಮನೆ ಮಾಡುವುದು, ಗುಬ್ಬಚ್ಚಿ ಮನೆ ಕಟ್ಟಿ ಆಟವಾಡುವುದು, ಹಸಿ ಹಸಿ ಮರಳಲ್ಲಿ ಹೆಸರು ಬರೆಯುವುದು, ಮನದಲ್ಲಿನ ಕಲ್ಪನೆಗಳಿಗೆ ರೂಹು ಕೊಡುವುದು ಸಹಜ. ಇದು ರಾಜ್ಯದ ಎಲ್ಲಾ ಬೀಚ್‌ಗಳಲ್ಲಿ ಕಂಡು ಬರುವ ಪ್ರಕ್ರಿಯೆ. ಆದರೆ ಇದೀಗ ಕಲಾವಿದರು ಮರಳು ದಂಡೆಗೆ ಮುಖ ಮಾಡಿದ್ದಾರೆ. ಮರಳಲ್ಲಿ ಶಿಲ್ಪಗಳನ್ನು ರೂಪಿಸುವ ಮೂಲಕ ನಿರಂತರವಾಗಿ ಮಕ್ಕಳನ್ನು ಮತ್ತು ಕಡಲದಂಡೆಗೆ ಬರುವ ಪ್ರವಾಸಿಗರನ್ನು ಸೆಳೆಯುತ್ತಿದ್ದಾರೆ.

ಮರಳು ಶಿಲ್ಪಗಳ ಸೃಜನ ಶೀಲ ಸಂಸ್ಕೃತಿ ಕಾರವಾರ ದಂಡೆಯಲ್ಲಿ ಸದ್ದಿಲ್ಲದೇ ಪ್ರಾರಂಭವಾಗಿದೆ.

ಹೌದು, ಈಚಿನ ದಿನಗಳಲ್ಲಿ ಕಾರವಾರ ಕಡಲತೀರ ಹೊಸ ರೀತಿಯಲ್ಲಿ ಹೆಸರು ಮಾಡುತ್ತಿದೆ. ಕವಿ ರವೀಂದ್ರನಾಥ ಟ್ಯಾಗೋರರನ್ನು ತನ್ನ ಅರ್ಧಚಂದ್ರಾಕೃತಿಯ ಸಹಜ ಸೌಂದರ್ಯದಿಂದ ಸೆಳೆದಿದ್ದ ಕಡಲತೀರ ಇದೀಗ ಮರಳು ಶಿಲ್ಪಗಳಿಂದ ಜನರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ಮರಳು ಶಿಲ್ಪಗಳನ್ನು ರೂಪಿಸುತ್ತಾ ಕಡಲತೀರದಲ್ಲಿ ಹೊಸತನವನ್ನು ಸ್ಥಾಪಿಸಲು ಜಿಲ್ಲೆಯವರೇ ಆದ ಕಲಾವಿದರೊಬ್ಬರು ಪ್ರಯತ್ನ ಆರಂಭಿಸಿದ್ದಾರೆ. ಸಾಂಸ್ಕೃತಿಕ ಬರಡು ನೆಲದಲ್ಲಿ ಕಲೆಯ ಬೀಜವನ್ನು ಬಿತ್ತತೊಡಗಿದ್ದಾರೆ. ಇಂಥದೊಂದು ಸಾಹಸಕ್ಕೆ ಮುಂದಾದವರು ಕಲಾವಿದ ಕುಮಾರ್ ಮಹೇಶ್.

**ಮರಳು ಶಿಲ್ಪಗಳ ಸಂಸ್ಕೃತಿಗೆ ಜನ್ಮ:** ಇಲ್ಲಿನ ಕಡಲತೀರದಲ್ಲಿ ಇದೇ 2016

**'ಮರಳಲ್ಲಿ ಕಲಾಕೃತಿ ಸೃಷ್ಟಿಸುವುದು ಸವಾಲಿನ ಕೆಲಸ'**

- ಮಣ್ಣು, ಶಿಲೆ,ಕಾಷ್ಠದಲ್ಲಿ ಕಲೆ ಅರಳಿಸುವುದು ಕಷ್ಟ. ಕಾಗದ ಮೇಲೆ ಬಣ್ಣ ಚೆಲ್ಲಿ ಕಲಾಕೃತಿಗಳನ್ನು ರೂಪಿಸಿದಷ್ಟು ಸರಳವಲ್ಲ ಮರಳಲ್ಲಿ ಕಲಾಕೃತಿ ಮೂಡಿಸುವುದು. ಮರಳಲ್ಲಿನ ತೇವಾಂಶವನ್ನು ಸದಾ ಕಾದಿಟ್ಟುಕೊಂಡು ಕಲಾಕೃತಿ ನಿರ್ಮಿಸಬೇಕು. ಇದು ಸವಾಲಿನ ಕೆಲಸ. ಮರಳು ಕಲಾಕೃತಿಗೆ ಸಮಯ ಮತ್ತು ಶ್ರಮ ಬೇಕು. ತೇವಾಂಶದ ಮರಳನ್ನು ಕಡಲತೀರದಲ್ಲೇ ಸಂಗ್ರಹಿಸಿಕೊಂಡು, ಕಲಾಕೃತಿ ಆರಂಭಿಸಬೇಕು. ಕಲಾಕೃತಿಯನ್ನು ಹೆಚ್ಚು ಸಮಯ ಉಳಿಸಿಕೊಳ್ಳುವುದು ಸಹ ಕಷ್ಟ. ಕಡಲ ಅಲೆಗಳ ಏರಿಳಿತದ ಕಾರಣ ಕಲಾಕೃತಿಯ ಆಯುಷ್ಯ ಸಹ ಕಡಿಮೆ. ಇರುವಷ್ಟು ಸಮಯದಲ್ಲಿ ಬಂದಷ್ಟು ಕಲಾಪ್ರೇಮಿಗಳನ್ನು ಸೆಳೆಯುವುದು ಮರಳು ಕಲಾಕೃತಿಗಳ ಯಶಸ್ಸು. ಈಗ ಮೊಬೈಲ್, ವ್ಯಾಟ್ಸ್‌ಅಪ್ ಯುಗವಾದ್ದರಿಂದ ಮರಳು ಕಲಾಕೃತಿಗಳನ್ನು ಹೊರಜಗತ್ತಿಗೆ ಸಹ ವೇಗವಾಗಿ ತಲುಪಿಸಬಹುದು ಎನ್ನುತ್ತಾರೆ ಕಲಾವಿದ ಕುಮಾರ್ ಮಹೇಶ್.
- ಜೇಡಿಮಣ್ಣು ಕಲಾಕೃತಿಗಳು ಮತ್ತು ಕಾಗದದ ಮೇಲೆ ಪೇಯಿಂಟಿಂಗ್ ಮಾಡೋದು ಇಷ್ಟ. ಮರಳು ಕಲಾಕೃತಿಗಳತ್ತ ಒಂದಿಷ್ಟು ಪ್ರೀತಿ ಹೆಚ್ಚು. ಕಾರಣ ಮರಳು ಕಲಾಕೃತಿಗಳಲ್ಲಿ ಸಾಕಷ್ಟು ಪ್ರಯೋಗಗಳು ಆಗಿಲ್ಲ. ಮತ್ತು ಹೆಚ್ಚು ಕಲಾವಿದರು ಮರಳು ಕಲಾಕೃತಿ ರೂಪಿಸುವಲ್ಲಿ ತೊಡಗಿಲ್ಲ. ಕಲಾವಿದರನ್ನು ಮರಳು ಕಲೆಯತ್ತ ಸೆಳೆಯುವುದು ಹಾಗೂ ಜನತೆಗೆ ದೊಡ್ಡ ಪ್ರಮಾಣದಲ್ಲಿ ಸಾಮಾಜಿಕ ಕಾಳಜಿಯ ಜಾಗೃತಿ ಸಂದೇಶ ನೀಡುವ ಉದ್ದೇಶವೂ ಇದೆ. ಸಾರ್ವಜನಿಕರನ್ನು ತಲುಪಲು ಹಾಗೂ ಕಲೆಯ ಬಗ್ಗೆ ಆಸಕ್ತಿ ಮೂಡಿಸಲು ಮರಳು ಶಿಲ್ಪಗಳು ಸಹಾಯಕ. ಕಡಲತೀರದ ಬಯಲುಗಳಲ್ಲಿ ಕಲಾವಿದ ತೆರೆದುಕೊಳ್ಳುವ ಕಾರಣ ಯುವಪೀಳಿಗೆಯನ್ನು ಮರಳು ಶಿಲ್ಪ ಕಲಾಕೃತಿ ಕಟ್ಟುವತ್ತ ಎಳೆದು ತರಬಹುದು.
- ಮರಳು ಕಲಾಕೃತಿಗಳನ್ನು ಪ್ರೋತ್ಸಾಹಿಸುವವರು ಯಾರಾದರೂ ಮುಂದೆ ಬಂದರೆ ನೂರಾರು ಸಹಾಯಕರನ್ನು ಇಟ್ಟುಕೊಂಡು ಇಪ್ಪತ್ತಕ್ಕೂ ಹೆಚ್ಚು ಅಡಿ ಎತ್ತರದ ಮರಳು ಕಲಾಕೃತಿ ರೂಪಿಸುವ ಕನಸು ಇದೆ. ಮರಳು ಕಲಾಕೃತಿಗಳನ್ನು ರೂಪಿಸಲು ಸೃಜನಶೀಲ ಮನಸ್ಸು ಮತ್ತು ಕಲಾತ್ಮಕ ದೃಷ್ಟಿ ಹಾಗೂ ಸಾಕಷ್ಟು ತಾಳ್ಮೆ ಬೇಕು ಎನ್ನುತ್ತಾರೆ ಕುಮಾರ್ ಮಹೇಶ್.





ಜನವರಿಯಿಂದ ಮೇ ತಿಂಗಳಾಂತ್ಯದವರೆಗೆ ಮರಳಿನ ಶಿಲ್ಪಗಳನ್ನು ರೂಪಿಸಿದ ಕಲಾವಿದ ಕುಮಾರ್ ಮಹೇಶ್. ತಮ್ಮ ಕೈಚಳಕದ ಮೂಲಕ ಮರಳು ಶಿಲ್ಪಗಳನ್ನು ರೂಪಿಸಿ , ದಂಡೆಗೆ ಬರುವ ಪ್ರವಾಸಿಗರನ್ನು ಸೆಳೆಯುತ್ತಿದ್ದಾರೆ. ಮರಳಿನ ಶಿಲ್ಪಗಳ ಮೂಲಕ ಪ್ರವಾಸಿಗರಲ್ಲಿ ಕಲೆಯ ಉತ್ತಮ ಅಭಿರುಚಿಯನ್ನು ಬಿತ್ತುವುದು ಅವರ ಉದ್ದೇಶವಾಗಿದೆ. ಪರಿಸರ ಮಹತ್ವ ಸಾರುವ ಕಲಾಕೃತಿ ರಚಿಸಿದ್ದ ಮಹೇಶ್ ತಂಬಾಕು ಸೇವನೆಯ ದುಷ್ಪರಿಣಾಮ ಕಲಾಕೃತಿಯನ್ನು ರೂಪಿಸಿದ್ದರು. ಬೆಳಗಿನಿಂದ ಮರಳಿನ ಕಲಾಕೃತಿ ರೂಪಿಸಲು ಪ್ರಾರಂಭಿಸಿದ್ದ ಅವರು ಅಪರಾಹ್ನ 4 ಗಂಟೆಯ ವೇಳೆಗೆ ಕಲಾಕೃತಿಯನ್ನು ಪೂರ್ಣಗೊಳಿಸಿದ್ದರು. ಸತತ ಆರು ತಾಸು ಪರಿಶ್ರಮ ಹಾಕಿ ಮರಳು ಶಿಲ್ಪ ಕಲಾಕೃತಿ ಪೂರ್ಣಗೊಳಿಸುತ್ತಾರೆ. ಅವರ ಪರಿಶ್ರಮದ ಹಿಂದೆ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸುವ ಆಶಯವಿತ್ತು.

ಕಳೆದ ಮೂರು ತಿಂಗಳಿಂದ ಮರಳಿನ ಕಲಾಕೃತಿ ರಚನೆಗೆ ಅವರು ತೊಡಗಿದ್ದು, ಮೊದಲಿಗೆ ಗಣೇಶನ ಮರಳು ಶಿಲ್ಪ ರೂಪಿಸಿದ್ದರು. ಶಿವರಾತ್ರಿ ಸಮಯದಲ್ಲಿ ಶಿವಲಿಂಗದ ಕಲಾಕೃತಿ ಮಾಡಿದ್ದರು. ಬುದ್ಧಪೂರ್ಣಿಮೆಯ ದಿನ ಬುದ್ಧನ ಪ್ರಸಿದ್ಧ ಕಲಾಕೃತಿಯನ್ನು ಮರಳಿನಲ್ಲಿ ರೂಪಿಸಿ ಸೈ ಎನಿಸಿಕೊಂಡಿದ್ದರು. ವಿಶ್ವಪರಿಸರ ದಿನದಂದು 'ಮರಗಳನ್ನು ಸಂರಕ್ಷಿಸಿ' ಎಂಬ ಸಂದೇಶ ಸಾರುವ ಮರದ ಬುಡದ ಕಲಾಕೃತಿ ರೂಪಿಸಿದ್ದರು. ವಿಶ್ವ ತಂಬಾಕು ವಿರೋಧಿ ದಿನ ಸಿಗರೇಟು ಸೇವನೆಯ ಪರಿಣಾಮವನ್ನು ಬಿಂಬಿಸುವ ಶ್ವಾಸಕೋಶದ ಕ್ಯಾನ್ಸರ್ ಕಾಯಿಲೆಯ ದೃಶ್ಯವನ್ನು ಮರಳಿನಲ್ಲಿ ರೂಪಿಸಿದ್ದಾರೆ.

ಕುಮಾರ್ ಮಹೇಶ್ ಮೂಲತಃ ಯಲ್ಲಾಪುರದವರು. ಧಾರವಾಡದ ವಿಶ್ವವಿದ್ಯಾಲಯದಲ್ಲಿ ಚಿತ್ರಕಲೆಯ ವಿಷಯದಲ್ಲಿ ಪದವಿ ಪಡೆದುಕೊಂಡಿದ್ದಾರೆ. ಸೃಜನ ಸ್ಕೂಲ್ ಆಫ್ ಆರ್ಟ್ ವಿದ್ಯಾರ್ಥಿ. ಮರಳು ಶಿಲ್ಪಗಳ ಮೂಲಕ ಜನತೆಯ ಗಮನಸೆಳೆಯಲು ಯತ್ನಿಸುತ್ತಿರುವ ಮಹೇಶ್ ಇದೀಗ ಕಲಾಕೃತಿ ಸಂಸ್ಕೃತಿಯನ್ನು ಇಲ್ಲಿನ ಜನತೆಯಲ್ಲಿ ಬಿಂಬಿಸಲು ಹೊರಟಿದ್ದಾರೆ. ಮರಳು ಶಿಲ್ಪ ರೂಪಿಸಲು ಸ್ನೇಹಿತರ ನೆರವು ಪಡೆಯುತ್ತಾರೆ. ಆದರೆ ಇಡೀ ಕಲಾಕೃತಿಯ ಐಡಿಯಾ ಮಾತ್ರ ಅವರದ್ದೇ. ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಅದರಲ್ಲಿ ಬೆಳಕು ಕಾಣಲು ಯತ್ನ ಆರಂಭಿಸಿದ್ದಾರೆ.

**ಪ್ರೋತ್ಸಾಹ ಬೇಕಿದೆ:** ಮರಳು ಶಿಲ್ಪಗಳನ್ನು ರೂಪಿಸಲು ಸಮಯ ಮತ್ತು ಶ್ರಮ ಬೇಕು. ಏಕಾಗ್ರತೆ ಮತ್ತು ಕಲಾತ್ಮಕ ಮನಸು ಬೇಕು. ಇವೆಲ್ಲವನ್ನು ಹಾಕಿ ಯಾವುದೇ ಫಲ ಬಯಸದೇ ಸ್ಥಳೀಯರ ಮತ್ತು ಪ್ರವಾಸಿಗರ ಗಮನಸೆಳೆಯಲು ಕುಮಾರ್ ಮಹೇಶ್ ಪ್ರಯತ್ನಿಸುತ್ತಿದ್ದಾರೆ. ಅವರ ಮರಳು ಶಿಲ್ಪಗಳನ್ನು ಗಮನಿಸಿದವರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ನೂರಾರು ಜನ ಮರಳು ಶಿಲ್ಪ ವೀಕ್ಷಿಸಿ, ಚಿತ್ರಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ತೆರಳುತ್ತಾರೆ. ಮರಳು ಶಿಲ್ಪದ ಕಲಾಪ್ರಜ್ಞೆಯ ಜೊತೆಗೆ ಸಮಾಜಕ್ಕೆ ಸಂದೇಶ ನೀಡುವ ಥೀಮ್‌ಗಳನ್ನು ಕಲಾವಿದ ಮಹೇಶ್ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬುದು ಸಹ ಇಲ್ಲಿ ಮಹತ್ವದ್ದು. ಪರಿಸರ ಸಂರಕ್ಷಣೆ, ಬುದ್ಧನ ಶಾಂತಿಯ ಸಂದೇಶ ಮತ್ತು ತಂಬಾಕು ಸೇವನೆಯ ಅಪಾಯದ ಮರಳು ಕಲಾಕೃತಿಗಳು ಉತ್ತಮ ಸಂದೇಶವನ್ನು ನೀಡಿವೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050